1992ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ(ತಿದ್ದುಪಡಿ) ವಿಧೇಯಕವನ್ನು ಪುನ: ಪರ್ಯಾಲೋಚಿಸುವುದು. . . .

ಶ್ರೀ ಡಿ.ಬಿ.ಚಂದ್ರೇಗೌಡ :- ಪರ್ಯಾಲೋಚನೆ ಮಾಡುವುದಕ್ಕಿಂತ ಮುಂಚೆ ಮತಕ್ಕೆ ಹೇಗೆ ಹಾಕುತ್ತೀರಿ ? ಇದು ಜನತಂತ್ರ ವಿರೋಧಿ ಶಾಸನ. ವಿಕೇಂದ್ರೀಕೃತ ವ್ಯವಸ್ಥೆಯ ಕೊಲೆ. ಪ್ರಜಾಪ್ರಭುತ್ವಕ್ಕೆ ಹಾಡು ಹಗಲಿನಲ್ಲಿ ವಿಷ ಉಣಿಸುತ್ತಿದ್ದಾರೆ. ಆದುದರಿಂದ, ಈ ದೈತ್ಯ ಶಕ್ತಿಯ ವಿರುದ್ಧ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಕಾನೂನು ಪ್ರಜಾಪ್ರಭುತ್ವದ ಕೊನೆಯ ಪಾಠವೆಂದು ನೀವು ಹೇಳುವುದಾದರೆ, ಇದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ಬಿ.ಚಂದ್ರೇಗೌಡರ ನೇತೃತ್ವದಲ್ಲಿ ಜನತಾ ದಳ ಸದಸ್ಯರು ಸಭಾತ್ಯಾಗ ಮಾಡಿದರು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 7ರವರೆಗೆ, ಎರಡೂ ಸೇರಿದಂತೆ.

ಉಪಾಧ್ಯಕ್ಷಿಣಿಯವರು: ಖಂಡ 2ರಿಂದ 7ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 7ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:-

ಉಪಾಧ್ಯಕ್ಷಿಣಿಯವರು:- "ಪ್ರಸ್ತಾಪ ಏನೆಂದರೆ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು):- ಉಪಾಧ್ಯಕ್ಷಿಣಿಯವರೆ, ವಿಧಾನ ಪರಿಷತ್ತಿನಿಂದ ತಿರಸ್ಕೃತವಾದ 1992ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು:- ಪ್ರಸ್ತಾಪ ಏನೆಂದರೆ ವಿಧಾನ ಪರಿಷತ್ತಿನಿಂದ ತಿರಸ್ಕೃತವಾದ 1992ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ತಿದ್ದಪಡಿ ವಿಧೇಯಕವನ್ನು ಸಭೆಯು ಪುನ: ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಇಲಾಖಾ ಬೇಡಿಕೆಗಳ ಮಂಡನೆ ಹಾಗೂ ಚರ್ಚೆ.

ಅಭಿಯಾಚನೆ ಕ್ರಮಾಂಕ 15 (ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು)

ಶ್ರೀ ಎಸ್.ಬಂಗಾರಪ್ಪ:- (ಮುಖ್ಯಮಂತ್ರಿಗಳು) ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ "31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ ವೃತ್ತಿಗಳು, ಮಾರಾಟ ಮತ್ತು ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 78,82,12,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ : 16 (ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ) ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತಗಳಿಗೆ ಸಂದಾಯ ಮಾಡವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 14,40,16,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 17 (ವಿಶ್ರಾಂತಿವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು) ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 312,79,97,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 18 (ಸರಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 6,30,000,00 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,17,00,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 20 (ಇತರ ವಿವಿಧ ಸೇವೆಗಳು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇತರೇ ವಿವಿಧ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 19,58,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,85,00,000 ರೂ.ಗಳ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 37 (ಚುನಾವಣೆಗಳು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 6,31,68,000ರೂಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ: 38 (ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,67,59,000ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 39 (ಸಚಿವಾಲಯ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 22,09,37,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 41 (ಸಾಮಾನ್ಯ ಆಡಳಿತ ಇತ್ಯಾದಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳಲಿರುವ ಆರ್ಥಿಕ ವರ್ಷದಲ್ಲಿ ಸಾಮಾನ್ಯ ಆಡಳಿತ ಇತ್ಯಾದಿ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ21,44,28,000ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ16,62,00,000ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ. ಹಾಗೂ ಅಭಿಯಾಚನೆ ಕ್ರಮಾಂಕ 42 (ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿ)
(ಯೋಜನೆ ಮತ್ತು ಸಾಂಖ್ಯಿಕ ಹಣಕಾಸು ಸಚಿವೆಯರಾದ ಶ್ರೀಮತಿ ಕೆ.ಎಸ್.ನಾಗರತ್ನಮ್ಮ ನವರ ಪರವಾಗಿ)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ, 123,42,19,000ರೂ.ಗಳಿಗಿಂತ ಮೀರಿದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ28,00,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 19 (ಸಣ್ಣ ಉಳಿತಾಯಗಳು ರಾಜ್ಯ ಲಾಟರಿ ಮತ್ತು ವಿಮೆಗಳು)

ಶ್ರೀ ಟಿ.ಎಂ.ಮಂಜುನಾಥ್ (ಸಣ್ಣ ಉಳಿತಾಯ ರಾಜ್ಯ ಲಾಟರಿ ಮತ್ತು ವಿಮೆ ರಾಜ್ಯ ಸಚಿವರು):- ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯ ರಾಜ್ಯ ಲಾಟರಿ ಮತ್ತು ವಿಮೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ30,78,81,000 ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ.

(ಪ್ರಸ್ತಾಪವನ್ನು ಸೂಚಿಸಲಾಯಿತು)

ಶ್ರೀ ಎ.ಕೆ.ಅನಂತಕೃಷ್ಣ (ಶಿವಾಜಿನಗರ):- ಉಪಾಧ್ಯಕ್ಷಿಣಿಯವರೇ ಇಂದಿನ ಆರ್ಥಿಕ ಒಂದು ಬೇಡಿಕೆಯ ವಿಷಯದಲ್ಲಿ 15,16,17,18,20,37,38,39,41,42,19 ಈ ಬೇಡಿಕೆಗಳಿಗೆ ನನ್ನ ಸಹಮತವನ್ನು ಈ ಸಭೆಯಲ್ಲಿ ಮಂಡಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಪ್ರಥಮವಾಗಿ ಈ ಕರ್ನಾಟಕ ರಾಜ್ಯ ಲಾಟರಿಯ ವಿಷಯವಾಗಿ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡಲು ಆಸೆ ಪಡುತ್ತೇನೆ. ನಮ್ಮ ರಾಜ್ಯದ ಲಾಟರಿ ಯೋಜನೆ ಏನು ಇದೆ. ಅದು ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲ ಇಡೀ ರಾಷ್ಟ್ರದಲ್ಲಿ ಬಹಳ ಹೆಸರುವಾಸಿಯಾಗಿದೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗುವುದಿಲ್ಲವೆಂದು ಭಾವಿಸುತ್ತೇನೆ. ನಾನು ಲಾಟರಿ ಟಿಕೇಟುಗಳನ್ನು ತೆಗೆದುಕೊಂಡವನು ಅಲ್ಲ ಮತ್ತು ತೆಗೆದುಕೊಳ್ಳುವುದೂ ಇಲ್ಲ. ಆದರೂ ಕೂಡ ಈ ಲಾಟರಿ ಜನತೆಯ ಒಂದು ಅಭಿಮಾನಕ್ಕೆ ಎಷ್ಟು ಪಾತ್ರವಾಗಿದೆ ಎಂದು ಹೇಳಿದರೆ, ರಾಷ್ಟ್ರದಾದ್ಯಂತ ಬೇರೆ ಬೇರೆ ರಾಜ್ಯಗಳ ಮತ್ತು ಖಾಸಗಿಯವರು ಏನು ಲಾಟರಿ ಟಿಕೇಟ್‌ಗಳನ್ನು ಮಾರಾಟ ಮಾಡುತ್ತಾರೆ ಅದಕ್ಕಿಂತ ಹೆಚ್ಚಾಗಿ ನಮ್ಮ ರಾಜ್ಯದ ಲಾಟರಿಗೆ ಪ್ರಾಶಸ್ತ್ಯ ದೊರಕಿದೆ. ಆದಾಗ್ಯೂ ಸಹ ನಮ್ಮ ಒಂದು ಲಾಟರಿ ಸ್ಕೀಮ್‌ಗಳ ಆಧಾರದ ಮೇಲೆ ಕೇವಲ 2 ಕೋಟಿ 34 ಲಕ್ಷ ರೂಪಾಯಿಗಳ ಆದಾಯ ಮಾತ್ರ ನಮ್ಮ ಸರ್ಕಾರದ ಬೊಕ್ಕಸಕ್ಕೆ ಅಂತಿಮವಾಗಿ ಹಿಂದಿನ ವರ್ಷ ದೊರಕಿದೆ. ಸುಮಾರು 12 ಕೋಟಿ 50 ಲಕ್ಷ ರೂಪಾಯಿ ಜಮಾ ಆಗಿದ್ದರೂ 10,15,80,000 ರೂ.ಗಳು ನಾನಾ ರೀತಿಯಲ್ಲಿ ಖರ್ಚಾಗಿದೆ, ಖರ್ಚು ಸೂಕ್ತವಾಗಿ ಆಗುತ್ತಿದೆಯೆಂದು ಹೇಳುವಾಗ ಇಷ್ಟು ಖರ್ಚು ಮಾಡುವಂತಹ ಒಂದು ಸಂದರ್ಭದಲ್ಲಿ ಯಾವ ಕಾರಣಕ್ಕೆ ನಾವು ಲಾಟರಿ ಸ್ಕೀಮನ್ನು ಹಾಕಿಕೊಂಡಿದ್ದೇವೆ. ಮತ್ತು ಅದರ ಮೂಲಭೂತ ತತ್ವ ಏನೆಂದರೆ ಸರ್ಕಾರಕ್ಕೆ ಹೆಚ್ಚು ಆದಾಯ ಬರಬೇಕು ಎಂಬುದು. ಅದೃಷ್ಟ ಶಾಲಿಗಳು ಅನ್ನುವವರು ಯಾರಾದರೂ ಇದ್ದು ಅದರ ಮೇಲೆ ನಂಬಿಕೆ ಇದ್ದಂತವರಿದ್ದರೆ, ಅವರಿಗೆ ಬಹುಮಾನ ಮೂಲಕ ಒಂದಷ್ಟು ಸಂಪಾದನೆಯಾಗಲಿ ಎನ್ನುವ ಕಾರಣದಿಂದ ಈ ಲಾಟರಿ ಯೋಜನೆ ಮಾಡಿದ್ದಾರೆ. ಆದರೆ ಮೂಲಭೂತವಾಗಿ ನಮ್ಮ ರಾಜ್ಯಕ್ಕೆ ಹೆಚ್ಚು ಆದಾಯ ಬರಬೇಕೆಂದು ಇದನ್ನು ಪ್ರಾರಂಭ ಮಾಡಿದ್ದು. ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ನಾವು ಖರ್ಚು ಇಟ್ಟುಕೊಂಡು ವರ್ಷಕ್ಕೊಮ್ಮೆ ಕೇವಲ 2 ಕೋಟಿ 34 ಲಕ್ಷ ರೂಪಾಯಿಗಳ ಆದಾಯ ಬಂದಿದೆ ಎಂದು ಹೇಳಿದರೆ ಇದನ್ನು ಮತ್ತಷ್ಟು ಹೆಚ್ಚಿನ ರೀತಿಯಲ್ಲಿ ಅದೇ ವ್ಯವಸ್ಥಿತವಾದ ಸಿಬ್ಬಂದಿಯವರ ಒಂದು ಸಹಾಯದಿಂದ ಮತ್ತು ನಮ್ಮ ರಾಜ್ಯಾಕ್ಕಿಂತ ಏನು ಪ್ರಚಾರ ಶಾಖೆಗಳು ಪ್ರಚಾರ ಮಾಡುತ್ತಿದ್ದಾರೆ, ಅವುಗಳ ಒಂದು ಪ್ರಭಾವದಿಂದ ಮತ್ತಷ್ಟು ಹೆಚ್ಚು ಪ್ರಚಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈಗ ತಾನೇ ಹೊಸದಾಗಿ ನಮ್ಮಲ್ಲಿ ಒಂದು ಮೈಸೂರು ಲಕ್ಷ್ಮಿ ಸಿಂಗಲ್ ಡಿಜಿಟ್ ಲಾಟರಿ ಎಂದು ಪ್ರಾರಂಭ ಮಾಡಿದ್ದಾರೆ. ಇದರ ಬಗ್ಗೆ ನಾನು ಒಂದು ಸಣ್ಣ ಸಲಹೆ ಮಾಡುತ್ತೇನೆ. ಆ ಮೈಸೂರು ಲಕ್ಷ್ಮಿ ಲಾಟರಿ ಬೇರೆ, ಬೇರೆ ಲಕ್ಷ್ಮೀನೆ ಬೇರೆ ಅಂತ ಅಲ್ಲ. ಆದರೆ ನಮ್ಮಲ್ಲಿ ಈ ಹೆಸರು ಕೊಟ್ಟಿರುವುದರಿಂದ ಮೈಸೂರು ಜನಕ್ಕೆ ಲಕ್ಷ್ಮಿ ಮನೆಗೇ ಬರುತ್ತಾಳೆ ಎಂದು ಅಭಿಮಾನ ಪೂರ್ವಕವಾಗಿ ಲಾಟರಿ ಟಿಕೆಟ್ ಕೊಂಡುಕೊಳ್ಳುತ್ತಾರೆ. ಎಂದು ಮಾನ್ಯ ಸಚಿವರು ಯೋಚನೆ ಮಾಡಿದ್ದಾರೆಂದು ಭಾವಿಸುತ್ತೇನೆ. ನನಗೆ ತಿಳಿದು ಬಂದ ಪ್ರಕಾರ ನಮ್ಮ ರಾಜ್ಯದಲ್ಲಿ ಬೇರೆ ಬೇರೆ ರಾಜ್ಯಗಳಿಂದ ಬಂದು ಮಟ್ಕಾ ರೀತಿಯಿಂದ ಸಟ್ಟಾ ರೀತಿಯಾದ ಒಂದು ಲಾಟರಿಗಳು ಏನು ಇವೆ, ಅದರಿಂದ ಜನಕ್ಕೆ ಏನು ಅನ್ಯಾಯವಾಗುತ್ತಿದೆ. ಜನ ಮೋಸ ಹೋಗುತ್ತಿದ್ದಾರೆ, ಅದನ್ನು ಸಾಧ್ಯವಾದ ಮಟ್ಟಿಗೆ ತಡೆ ಹಾಕುವುದಕ್ಕಾಗಿ ಮತ್ತು ಜನಕ್ಕೆ ಲಾಟರಿ ಸ್ಫೂರ್ತಿ ಏನಿದೆ, ಅದಕ್ಕೆ ಒಂದು ರೀತಿಯಲ್ಲಿ ಅನುಕೂಲ

ಮಾಡಿಕೊಡುವ ಪ್ರಯತ್ನವೆಂದು ಈ ಮೈಸೂರು ಲಕ್ಷ್ಮಿ ಲಾಟರಿಯನ್ನು ಜಾರಿಗೆ ತಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅದು ಎಷ್ಟರಮಟ್ಟಿಗೆ ಆ ಜನಕ್ಕೆ ಅನುಕೂಲವಾಗುತ್ತದೆ ಮತ್ತು ನಮ್ಮ ಜನ ಕೇವಲ ಈ ಲಾಟರಿಗಳ ಬೆಟ್ಟಿಗ್‌ನ್ನು ನಂಬಿಕೊಂಡು ಅವರ ವೈಯಕ್ತಿಕವಾದಂತಹ ಇನಿಷಿಯೇಟಿವ್ ಏನಿರುತ್ತದೆ, ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ, ಒಂದು ಎಂಟರ್ ಪ್ರೈಸಿಂಗ್ ಆಟಿಟ್ಯೂಡ್ ಏನು ಇರುತ್ತದೆ, ಅದಕ್ಕೆ ಧಕ್ಕೆ ಆಗದ ರೀತಿಯಲ್ಲಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಜನತೆಗೆ ನಾವು ಹೆಚ್ಚು ಹೆಚ್ಚು ಲಾಟರಿ ಸ್ಕೀಮ್‌ಗಳನ್ನು ಜಾರಿಗೆ ತಂದಿದ್ದೇ ಆದರೆ ನನ್ನ ಭಾವನೆಯಲ್ಲಿ ಲಾಟರಿ ಟಿಕೇಟ್ ಮಾರುವವರನ್ನು ಬಿಟ್ಟರೆ ಕೊಂಡುಕೊಳ್ಳುವವರೆಲ್ಲಾ ಈ ಲಾಟರಿ ಮೇಲೆ ಗಮನವೆಲ್ಲಾ ಇಟ್ಟುಕೊಳ್ಳುತ್ತಾರೆ. ರಮ್ಮಿ ಆಟ ಆಡುವವರು ಬೆಳಗ್ಗೆ ಆಫೀಸ್‌ಗೆ ಕೆಲಸ ಮಾಡಲು ಬಂದರೆ ಸಂಜೆ 6 ಗಂಟೆಯಾವಾಗ ಆಗುತ್ತದೆಂದು ಕಾಯುತ್ತಾರೆ, ಅವರ ತಲೆಯೆಲ್ಲಾ ಇಸ್ಪಿಟ್ ಕ್ಲಬ್ ಕಡೆ ಹೊರಟು ಹೋಗುತ್ತದೆ. ಅವರು ರಾತ್ರಿ ಮಲಗಿದ್ದಾಗಲೂ ಸಹ ಅದೇ ಕನಸಿನಲ್ಲಿ ಬರುತ್ತಿರುತ್ತದೆ. ಆ ರೀತಿ ಲಾಟರಿ ಟಿಕೇಟ್‌ಗಳು ಸಹ ಆಗಬಾರದೆಂದು ನಾನು ಹೇಳಬಯಸುತ್ತೇನೆ. ಈ ತರಹ ಲಾಟರಿ ಟಿಕೇಟ್ ಮಾರಾಟ ಮಾಡುವಾಗ ಈ ಸ್ಕೀಮ್‌ನಲ್ಲಿ ನನ್ನ ಸಲಹೆ ಏನೆಂದರೆ, ಒಂದು ಜನತೆಗೆ ಅನುಕೂಲವಾಗುವಂತಹ ರೀತಿಯಲ್ಲಿ ಕೆಲವು ಸ್ಕೀಮ್‌ಗಳನ್ನು ಹಾಕಿಕೊಳ್ಳಬೇಕು. ಈ ಯೋಜನೆಗಳಿಗಾಗಿಯೇ ಒಂದು ಲಾಟರಿ ಎಂದು ಮಾಡಿದ್ದೇ ಆದರೆ ಜನತೆ ಇಂತಹ ಒಂದು ಫೈನಾನ್ಸಿಯಲ್ ಮೊಬಿಲೈಜೇಷನ್ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗುತ್ತದೆ. ಉದಾಹರಣೆಗೆ, ನಾನು ನಮ್ಮ ಪೋಲೀಸ್ ಡಿಪಾರ್ಟ್‌ಮೆಂಟ್‌ನವರ ಹತ್ತಿರ ಮಾತನಾಡುತ್ತಿರಬೇಕಾದರೆ ತಿಳಿಯಿತು. ನಮ್ಮ ನಗರದಲ್ಲಿ ಈ ರಸ್ತೆ ಅಪಘಾತಗಳು ಏನು ಆಗತ್ತಿವೆ ಅದರಿಂದ ದಿನಕ್ಕೆ ಸುಮಾರು ಒಬ್ಬರು ಇಬ್ಬರು ಸಾಯುತ್ತಿರುತ್ತಾರೆ. ಆ ಸಾವು ನೋವಿಗೆ ಈಡಾಗುವಂತವರು ಮುಂದೆ ಏನು ಬೇಕಾದರೂ ಆಗಬಹುದು, ಭವಿಷ್ಯದಲ್ಲಿ ರಾಷ್ಟ್ರಪತಿಗಳು ಆಗಬಹುದು, ಪ್ರಧಾನ ಮಂತ್ರಿಗಳು ಆಗಬಹುದು, ದೊಡ್ಡ ಕಾರ್ಖಾನೆ ಮಾಲೀಕರು ಆಗಬಹುದು, ಉದ್ಯಮಿ ಆಗಬಹುದು, ವ್ಯಾಪಾರಸ್ಥ ಆಗಬಹುದು, ರಾಜಕೀಯವಾಗಿ ಮುಖ್ಯಮಂತ್ರಿಗಳು ಕೂಡ ಆಗಬಹುದು. ನಮ್ಮ ರಾಜ್ಯದಲ್ಲೇ ಇಂತಹವರು ಎಲ್ಲರೂ ಕೂಡ ಹತರಾಗುತ್ತಾರೆ. ಈ ಅಪಘಾತಗಳನ್ನು ತಪ್ಪಿಸಬೇಕಾದರೆ ನಮ್ಮ ನಗರದ ಪೋಲೀಸ್ ಇಲಾಖೆಯ ಟ್ರಾಫಿಕ್ ಡಿಪಾರ್ಟ್‌ಮೆಂಟ್‌ನವರು ಬಹಳ ಚೆನ್ನಾಗಿ ಆಧುನಿಕವಾಗಿ, ಯೋಜನಾ ಪೂರ್ವಕವಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕೆ ಸಾಕಷ್ಟು ಹಣ ಬೇಕು. ಆ ಹಣ ಇಲ್ಲದಿದ್ದರೆ ಮಾಡುವುದಕ್ಕೆ ಆಗುವುದಿಲ್ಲ. ಕೆಲವು ದಿವಸಗಳ ಹಿಂದೆ ನಾನು ಒಂದು ಸೆಮಿನಾರ್ ಅನ್ನು ಆರ್ಗ್ನೈಸ್ ಮಾಡಿದ್ದೆ. ಟ್ರಾಫಿಕ್ ಆಕ್ಸಿಡೆಂಟ್ ಟ್ರಾಫಿಕ್ ಕಂಟ್ರೋಲ್, ಡಿಸಿಪ್ಲೀನ್, ಪ್ರಿವೆನ್‌ಷನ್ ಆಫ್ ಆಕ್ಸಿಡೆಂಟ್ ಅಂತ ಹೇಳಿ ಸೆಮಿನಾರ್ ಮಾಡಿದಾಗ, ಅಲ್ಲೂ ಕೂಡ ಇದೇ ರೀತಿಯಾದ ಮಾತು ಬಂತು. ನಮ್ಮ ಸರ್ಕಾರದ ಬೊಕ್ಕಸದಲ್ಲಿ ಅಷ್ಟು ಹಣ ಅವರಿಗೆ ಇಲ್ಲ. ಅವರಿಗೆ ಕನಿಷ್ಟ 5 ಕೋಟಿ ರೂಪಾಯಿಗಳನ್ನು ದೊರಕಿಸಿದರೆ, ಈ ನಮ್ಮ ನಗರದಲ್ಲಿ ಏನು ಆಕ್ಸಿಡೆಂಟ್ಸ್, ಡೆತ್ಸ್ ಆಗುತ್ತಿದೆ, ಡ್ಯಾಮೇಜಸ್ ಆಗುತ್ತಿದೆ, ಇಂಜೂರೀಸ್ ಆಗುತ್ತಿದೆ, ಅದರಲ್ಲಿ ಶೇಕಡ 90 ಭಾಗ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಅದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇದಕ್ಕಾಗಿ ಒಂದು ಬೆಂಗಳೂರು ನಗರದ ನಾಗರೀಕರಿಗೆ ರಸ್ತೆ ಅಪಘಾತ ಆಗದ ರೀತಿಯಲ್ಲಿ ಒಂದು ಆಧುನಿಕ ಪದ್ಧತಿಯಲ್ಲಿ ಈ ಟ್ರಾಫಿಕ್ ಪೋಲೀಸ್ ಡಿಪಾರ್ಟ್‌ಮೆಂಟಿನ ಒಂದು ಕಾರ್ಯಕ್ರಮವನ್ನು ವಹಿಸಿಕೊಳ್ಳುವುದಕ್ಕಾಗಿ, ಅವರಿಗೆ ಬೇಕಾದಂತಹ

ಸವಲತ್ತುಗಳಿಗಾಗಿ ಎಷ್ಟು ಹಣ ಬೇಕಾಗುತ್ತದೆ ಎಂದರೆ 5-10 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅದನ್ನು ಒಂದು ಫೇಸ್ಡ್ ಬೇಸಿಸ್‌ನಲ್ಲಿ ಅವರಿಗೆ ಒದಗಿಸಿಕೊಡುವಂಥ ಒಂದು ಕೆಲಸದಲ್ಲಿ, ಒಂದು ಪಾಪ್ಯುಲರ್ ಲಾಟರಿ ಟಿಕೇಟ್ ಸ್ಕೀಮ್ ಅನ್ನು ಮಾಡಬೇಕು. ಅದನ್ನು ಮಾಡಿ ಜನತೆಗೆ ತಿಳುವಳಿಕೆಯನ್ನು ಕೊಟ್ಟಿದ್ದೇ ಆದರೆ, ನಮ್ಮ ಜನ, ನಮ್ಮ ನಾಗರೀಕರು ಇಂತಹ ರಸ್ತೆ ಅಪಘಾತಗಳಿಗೆ ಈಡಾಗುದಂಥ ರೀತಿಯಲ್ಲಿ ಒಂದು ಸಹಾಯ ಮಾಡುವುದಕ್ಕೆ ಅನುಕೂಲ ಆಗುತ್ತದೆ. ಎಂದು ತಿಳಿದುಕೊಂಡು ಜನ ಸಂತೋಷದಿಂದ ಆ ಟಿಕೇಟನ್ನು ಕೊಂಡುಕೊಳ್ಳುವುದರ ಸಾಧ್ಯವಾಗುತ್ತದೆ. ಆದ್ದರಿಂದ ಈ ಒಂದು ದೃಷ್ಟಿಯಲ್ಲಿ ಮಾನ್ಯ ಸಚಿವರು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ನಾನು ಹೇಳುವ ಮಾತನ್ನು ಅಷ್ಟು ಲಘುವಾಗಿ ಕೈಬಿಡಬಾರದು ಎಂದು ನಾನು ಪ್ರಥಮವಾಗಿ ಅವರನ್ನು ಕೇಳಿಕೊಳ್ಳುತ್ತೇನೆ. ಹಾಗೆಯೇ ನಮ್ಮ ನಗರದಲ್ಲಿ ಸಾಕಷ್ಟು ಸಿವಿಕ್ ಅಮಿನಿಟೀಸ್ ಕೊಡತಕ್ಕ ಕೆಲಸ ಇರುತ್ತದೆ. ಆ ಕೆಲಸಗಳಲ್ಲೂ ಕೂಡ ಆಗಿಂದಾಗ್ಗೆ ಈ ಲಾಟರಿ ಡಿಪಾರ್ಟ್‌ಮೆಂಟ್‌ನವರು ಸಾಕಷ್ಟು ತೀವ್ರಗೊಳಿಸಿ ಆಗಿಂದಾಗ್ಗೆ ಸರ್ವೆಮಾಡುತ್ತಾ ಹೋದರೆ ಜನತೆಗೆ ಏನೊಂದು ಅವಶ್ಯಕತೆ ಇದೆ, ಯಾವ ಯಾವ ಇಲಾಖೆಯಿಂದ ಏನು ಮಾಡಲಿಕ್ಕೆ ಆಗುತ್ತದೆ ಅದನ್ನು ಅದರ ಮೂಲಕ ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಇಲ್ಲದೇ ಹೋದರೆ ವರ್ಷಕ್ಕೆ ಕೇವಲ 2-3 ಕೋಟಿ ರೂಪಾಯಿ ಸಂಪಾದನೆ ಮಾಡುವುದಾಗಿದ್ದರೆ ಈ ಸ್ಕೀಮ್‌ಷ್ಟು ಅನ್ಯೋನ್ಯವಾಗಿ ಕಾಣುವುದಿಲ್ಲ. "ವ್ರತ ಕೆಟ್ಟರೂ ಒಳ್ಳೆಯ ಸಂಪಾದನೆ ಇರಬೇಕು " ಎಂದು ಹೇಳುತ್ತಾರೆ, ಹಾಗೆ ಈ ಸ್ಕೀಮ್ ನಿಂದ ನಮಗೆ ಹೆಚ್ಚು ಆದಾಯ ಬಂದು, ಮತ್ತೆ ಜನತೆಗೆ ಒಳ್ಳೆಯ ಅನುಕೂಲವಾಗುವಂತಹ ಕೆಲಸ ಮಾಡಿದ್ದೇ ಇದರೆ ಸಮಾಜ ಕೂಡ ಒಪ್ಪುತ್ತದೆ, ಇಲ್ಲದಿದ್ದರೆ ಕೇವಲ ಟಿಕೇಟ್‌ನಿಂದ ಸಾವಿರಕ್ಕೆ ಒಬ್ಬರಿಗೆ ಒಂದಿಷ್ಟು ಅನುಕೂಲವಾಗಬಹುದು, ಇನ್ನುಳಿದ 999 ಜನಕ್ಕೆ ಅನಾನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಬಹಳ ತೀವ್ರತೆಯಿಂದ ಹೇಳಬಯಸುತ್ತೇನೆ. ಇನ್ನು ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನ ಬಗ್ಗೆ ಒಂದು ಮಾತು. ಈ ಇಲಾಖೆಯವರು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಗೆ ಅಥವಾ ಇನ್ನೂ ಅನೇಕ ಇಲಾಖೆಗಳಿಗೆ ಅವರ ಆಡಿಟರ್ಸ್‌ನ್ನು ಕಳುಹಿಸಿಕೊಡುತ್ತಾರೆ. Financial controllers ಗಳನ್ನು ಕಳುಹಿಸಿಕೊಡುತ್ತಾರೆ. ಸಾಮಾನ್ಯ ವಾಗಿ ಸುಮಾರು 80 ಪರ್ಸೆಂಟ್ ಸಿಬ್ಬಂದಿವರ್ಗ ಈ ಇಲಾಖೆಯಿಂದ ಹೊರಗಡೆ ಹೋಗಿ ಕೆಲಸಮಾಡುತ್ತಾರೆಂದು ಹೇಳುತ್ತಾರೆ. ಇದೇರೀತಿ ಬೆಂಗಳೂರು ಮಹಾ ನಗರಪಾಲಿಕೆಯಲ್ಲಿ ಚೀಫ್ ಆಡಿಟರ್ ಅಂತ ಇರುತ್ತಾರೆ. ಅವರು ಆ ವಿಭಾಗದ ಇಲಾಖೆಗಳ ಮೇಲೆ ಸಾಕಷ್ಟು ಶಿಸ್ತು ಪರಿಪಾಲನೆ ಮಾಡುವುದಕ್ಕೆ ಆಸಕ್ತಿವಹಿಸಿ ಕೆಲಸಮಾಡುತ್ತಾರೆ ಮತ್ತು ಲೋಪದೋಷಗಳಾಗದ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಇದಕ್ಕಾಗಿ ಅವರಿಗೆ ತರಬೇತಿಯನ್ನೂ ಕೂಡ ಕೊಟ್ಟಿರುತ್ತದೆ. ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನವರು ಕೇಂದ್ರದಿಂದ ಅವರಮೇಲೆ ಒಂದುರೀತಿಯ ಹತೋಟಿ ಇಟ್ಟುಕೊಂಡಿರುತ್ತಾರೆ ಎಂಬ ಅಭಿಪ್ರಾಯ ಇಲ್ಲಿ ಕಾಣಿಸುತ್ತದೆ. ಈ ಕೆಲಸವನ್ನು ಮಾಡುವಾಗ ಅಲ್ಲಿ ಏನು ನಡೆಯುತ್ತದೆಂಬುದನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಅದು ಬೆಂಗಳೂರು ನಗರ ಕಾರ್ಪೊರೇಷನ್ ಇರಬಹುದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇರಬಹುದು ಅಥವಾ ಬೇರೆ ಸಂಸ್ಥೆ ಇರಬಹುದು, ಇಲ್ಲಿನ ಪರಿಸ್ಥಿತಿಯನ್ನು ನಾವು ಪ್ರತಿದಿನ ನೋಡಿ ಮಾತನಾಡುತ್ತಿದ್ದೇವೆ, ಕೇಳುತ್ತಿದ್ದೇವೆ, ಪತ್ರಿಕೆಗಳಲ್ಲಿ ಬರುತ್ತಿದೆ. ಸ್ಟೇಟ್ ಅಕೌಂಟ್ಸ್‌ನಿಂದ ಹೋದಂಥ ಆಡಿಟರ್ಸ್ ಅಲ್ಲಿ ಏನು ಕೆಲಸ ಮಾಡುತ್ತಾರೆಂಬುದನ್ನು ತಿಳಿದುಕೊಳ್ಳಬೇಕೆಂದು ಯಾರಾದರೂ ಇದ್ದರೆ ಅವರು ನೇರವಾಗಿ ಅಲ್ಲಿಗೆ ಹೋಗಿ ಅನುಭವವನ್ನು

ಪಡೆಯಬೇಕು. ಈ ಸಿಬ್ಬಂದಿಯವರು ಅಲ್ಲಿ ನಡೆಯುವಂಥ ಅಕ್ರಮಗಳನ್ನು, ಅನ್ಯಾಯಗಳನ್ನು ಹತೋಟಿಯಲ್ಲಿಟ್ಟುಕೊಂಡು, ಲೋಪದೋಷಗಳಿಲ್ಲದ ರೀತಿಯಲ್ಲಿ ನಗರದ ಜನತೆ ಕೊಟ್ಟಂಥ ತೆರಿಗೆಯನ್ನು ಸದುಪಯೋಗ ಮಾಡಬೇಕು, ಸೇವೆ ಮಾಡಬೇಕೆಂದಿದ್ದರೆ ಅದಕ್ಕೆ ತದ್ವಿರುದ್ಧವಾಗಿ ಏನು ಅಕ್ರಮಗಳು ನಡೆಯುತ್ತಿದೆ ಅದಕ್ಕೆ ಹೆಚ್ಚು ಬೆಂಬಲವನ್ನು ಕೊಡತಕ್ಕ ಎಕೆಲಸ ನಡೆಯುತ್ತಿದೆ ಎಂಬುದನ್ನು ನನ್ನ 30 ವರ್ಷಗಳ ಅನುಭವದಿಂದ ಹೇಳುತ್ತಿದೇನೆ. ಕೆಲವು ಆಡಿಟರ್ಸ್ ಯೋಗ್ಯ ಮಟ್ಟದವರಾಗಿರಬಹುದು, ದಕ್ಷತೆಯುಳ್ಳವರು ಆಗಿರಬಹುದು, ನಿಷ್ಠಾವಂತರು ಆಗಿರಬಹುದು. ಉದಾಹರಣೆಗೆ ಹೇಳುವುದಾದರೆ, ಸುಮಾರು 1 ವರ್ಷದ ಕೆಳಗೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೋಟ್ಯಾಂತರ ರೂ.ನಷ್ಟ ಪಬ್ಲಿಕ್ ವರ್ಕ್ಸ್‌ನ ಎಸ್ಟಿಮೇಟನ್ನು ತಯಾರು ಮಾಡಿದರು. ಆದರೆ ಆ ಕೆಲಸಗಳ ಅವಶ್ಯಕತೆ ಇದೆಯೋ, ಇಲ್ಲವೋ ಎಂಬುದನ್ನೂ ಕೂಡ ಯೋಚನೆ ಮಾಡದೆ ತಯಾರಿಸಿದರು. ಹೀಗೆ ತಯಾರಿಸುವಾಗ ಒಂದೊಂದು ಕೋಟಿ ರೂಗೆ ಒಂದು ಎಸ್ಟಿಮೇಟ್ ಮಾಡುವುದನ್ನು 10-10 ಲಕ್ಷ ರೂ. ಗಳಿಗೆ ಎಂದು ಹೇಳಿ 10 ರೀತಿಯ ಎಸ್ಟಿಮೇಟ್‌ನ್ನು ಮಾಡಿದರು. ಏಕೆಂದರೆ ಅವರದ್ದೇ ಆದ ಅಧಿಕಾರಿಗಳ ಅಧಿಕಾರ ವ್ಯಾಪ್ತಿಯಲ್ಲಿ ಬರುವ ರೀತಿಯಲ್ಲಿ ಮಾಡಿದರು. ಈ ಎಸ್ಟಿಮೇಟ್‌ಗಳಿಗೆ ವರ್ಕ್ಸ್ ಆರ್ಡರ್ ಕೂಡ ಸ್ಯಾಂಕ್ಷನ್ ಮಾಡಿದರು. ಕೆಲವು ಕಡೆ ಕೆಲಸ ನಡೆಯಿತು, ಇನ್ನು ಕೆಲವು ಕಡೆ ಕೆಲಸ ನಡೆಯಲಿಲ್ಲ. ಬಿಲ್‌ಗಳಂತೂ ಪಾಸ್ ಆಗಿ ಹೋದವು. ಈ ದಿಸೆಯಲ್ಲಿ ಕೋಟಿಗಟ್ಟಲೆ ಹಣ ಹೋಯಿತೆಂದರೆ ಯಾರಾದರೂ ನನ್ನ ಬಗ್ಗೆ ಆರೋಪವನ್ನು ಮಾಡಬಹುದು. ಆದರೆ ನಾನು ತಮ್ಮ ಮೂಲಕ ಹೇಳುತ್ತೇನೆ, ಇದಕ್ಕೆ ಸರಿಯಾದ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಮಾಡಿಸಿದರೆ ಎಷ್ಟು ಕೋಟಿ ರೂ.ಹೋಗಿದೆ, ಯಾವ ತರಹದ ಅನ್ಯಾಯ ನಡೆದಿದೆ ಎಂಬುದನ್ನು ತಾವು ತಿಳಿದುಕೊಳ್ಳಬಹುದು. ಇಂಥ ಸಂದರ್ಭದಲ್ಲಿ ಇಲಾಖೆಯಿಂದ ಹೋಗದಂಥ ಆಡಿಟರ್ಸ್ ಏನು ಮಾಡುತ್ತಿದ್ದರು. ಈಗ ಏನು ಮಾಡುತ್ತಿದ್ದಾರೆ. ಇವರು ಸರಿಯಾದ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡಲಿಲ್ಲ ಎಂದರೆ ಈ ಕೇಂದ್ರದ ಒಂದು ವಿಭಾಗ ಏನಿದೆ ಅದು ಯಾವರೀತಿ ಸೂಪರ್‌ವಿಷನ್ ಹಾಗೂ ಕಂಟ್ರೋಲನ್ನು ಈ ಸಿಬ್ಬಂದಿಯ ಮೇಲಿಟ್ಟಿದ್ದಾರೆಂಬುದನ್ನು ನಾವು ಬಹಳ ತೀವ್ರವಾಗಿ ಯೋಚನೆ ಮಾಡಬೇಕು. ಏಕೆಂದರೆ ಕೋಟ್ಯಾಂತರ ರೂಪಾಯಿಗಳನ್ನು ನಾವು ಈ ಸದನದಿಂದ ಒಂದೊಂದು ಕೆಲಸ ಕಾರ್ಯಗಳಿಗೆ ಕೊಟ್ಟರೂ ಸಹ ಅಲ್ಲಿ ಪರಿಪೂರ್ಣವಾಗಿ ಕೆಲಸ ಆಗಲಿಲ್ಲ, ನಾಗರೀಕರಿಗೆ ಅನುಕೂಲ ಆಗಲಿಲ್ಲ, ಎಂದರೆ ಈ ಆಡಿಟರ್‌ಗಳಿಂದ, ಆಡಿಟ್ ಡಿಪಾರ್ಟ್‌ಮೆಂಟ್‌ನಿಂದ ಏನು ಪ್ರಯೋಜನ ? ಇದರಲ್ಲಿ ಸೈಕಲಾಜಿಕಲ್ ಆಗಿ, ಒಂದು ಚೆಕ್ ಇದೆ, ಒಂದು ಬ್ಯಾಲೆನ್ಸ್ ಇದೆ ಅನ್ನುವ ಭಾವನೆಯೇ? ಇಲ್ಲ ಎಫೆಕ್ಟೀವ್ ಆಗಿ, ಫಿಸಿಕಲ್ ಆಗಿ, ಪರಿಣಾಮಕಾರಿಯಾಗಿ ಕೆಲಸಮಾಡುವಂಥ ಸನ್ನಿವೇಶಗಳನ್ನು, ಅನುಕೂಲವನ್ನು ಈ ಇಲಾಖೆ ಮಾಡುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು ಹಾಗೆಯೇ Effective supervision, control, guidance, directions, or enforcement of disciplinary action on those who do not follow the lione of action which an auditor has got to do. ಅದನ್ನು ಮಾಡದಿದ್ದರೆ ಇದಕ್ಕೆ ಬೇರೆ ಏನು ಮಾಡಬೇಕೆಂಬುದನ್ನು ಮಾನ್ಯಮುಖ್ಯ ಮಂತ್ರಿಗಳು ತೀವ್ರವಾಗಿ ಗಮನಿಸಬೇಕೆಂದು ಹೇಳುತ್ತೇನೆ. ಈಗ ಓಲ್ಡೇಜ್ ಪೆನ್‌ಷನ್ ಡಿಸ್ಟ್ರಿಬ್ಯೂಟ್, ವಿಡೋ ಪೆನ್‌ಷನ್, ಫಿಸಿಕಲಿ ಹ್ಯಾಂಡಿಕ್ಯಾಪ್ ಪೆನ್‌ಷನ್ ಬಗ್ಗೆ ಒಂದು ಮಾತು ಹೇಳುತ್ತೇನೆ. ನಮ್ಮ ನಾಗರೀಕರಿಗೆ ಸಹಾಯ ಮಾಡಬೇಕೆಂದು ಹೇಳಿ ಈ ಒಂದು ಕಾರ್ಯಕ್ರಮವನ್ನು ನಮ್ಮ ಮುಂದೆ ಹಾಕಿ ಕೊಂಡಿದ್ದೇವೆ, ಅದು ಬಹಳ

ಕಾಲದಿಂದಲೂ ನಡೆದುಕೊಂಡು ಬರುತ್ತಿದೆ. ಆದರೆ ಅವರು ಅಪ್ಲಿಕೇಷನ್ ಕೊಟ್ಟು ಅದು ಅಪ್ರೂವ್ ಆಗಿ ಪಾಸ್ ಆಗಿ ಅವರಿಗೆ ಏನಾದರೂ ಪೆನ್‌ಷನ್ ಬರಬೇಕೆನ್ನುವ ವೇಳೆಗೆ ಆ ಓಲ್ಡೇಜ್ ಜನ ಇನ್ನೂ ಉಸಿರಾಡುತ್ತಿರುತ್ತಾರೋ ಇಲ್ಲವೋ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಬಹಳ ಕಡೆ ಕೇಳುತ್ತಿದ್ದೇವೆ. ಆ ಒಂದು ಓಲ್ಡೇಜ್‌ಪೆನ್‌ಷನ್ ಆಗಿರಲಿ, ಡಿಸೆಬಿಲಿಟಿ ಕಮ್ಯುನಿಟಿ ಪೆನ್‌ಷನ್ ಆಗಿರಲಿ ಯಾವುದೇ ರೀತಿಯಾದ ಒಂದು ಸಾಮಾಜಿಕವಾಗಿ ನಾವು ಯೋಜನೆಯನ್ನು ತಯಾರು ಮಾಡಿ ಆರ್ಥಿಕ ಸಹಾಯ ಮಾಡಬೇಕೆಂದು ಹೇಳಿ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದು ಪರಿಣಾಮಕಾರಿಯಾಗಿ ಆಗಬೇಕು, ಜನತೆಗೆ ಒಳ್ಳೆಯದಾಗಬೇಕಾದರೆ, ನಮ್ಮ ಸರ್ಕಾರದಿಂದ ಈ ಪ್ರೊಸೀಜರನ್ನು ಎಷ್ಟು ಸಿಂಪ್ಲಿಫೈ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಷ್ಟು ಸಿಂಪ್ಲಿಫೈ ಮಾಡಿ ಅಂಥ ಒಂದು ಬಡವರಿಗೆ ಬಲಹೀನರಿಗೆ ಅವರ ಮನೆಗೆ ಹೋಗಿ ಅದು ಸೇರುವಂಥ ರೀತಿಯಲ್ಲಿ ಸಹಾಯ ಮಾಡುವಂಥ ಸಿಬ್ಬಂದಿ ಯಂತ್ರವನ್ನು ನಾವು ಏರ್ಪಾಡು ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಮಾತು. ಇದು ಬಹಳ ದೊಡ್ಡ ಡಿಪಾರ್ಟ್‌ಮೆಂಟ್. ಇದು ಸರ್ಕಾರದ ಒಂದು ಆರ್ಥಿಕ ಬೆನ್ನೆಲುಬು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಎಕ್ಸೈಸ್ ಡಿಪಾರ್ಟ್‌ಮೆಂಟ್ ಬಿಟ್ಟಮೇಲೆ ಈ ಡಿಪಾರ್ಟ್‌ಮೆಂಟ್ ಬರುತ್ತದೆ. ಇಷ್ಟು ದೊಡ್ಡ ಡಿಪಾರ್ಟ್‌ಮೆಂಟ್‌ನಲ್ಲಿ ನನ್ನ ವೈಯಕ್ತಿಕವಾದ ಅನುಭವ ಹೇಳಬೇಕೆಂದರೆ, ಯಾವುದೇ ಒಂದು ವ್ಯಾಪಾರವನ್ನು ಒಂದು ಅಂತಸ್ಥಿನ ಮೇಲಕ್ಕೆ ಒಂದು ಅಂತಸ್ಥಿನ ಮೇಲಕ್ಕೆ ಒಂದು ಹಂತದಿಂದ ಹೆಚ್ಚಾಗಿದ್ದರೆ ವಾಲೆಂಟರಿಯಾಗಿ ರಿಜಿಸ್ಟರ್ ಮಾಡಿಕೊಳ್ಳಬೇಕೆಂದು ಕಾನೂನು ಹೇಳುತ್ತದೆ. ಆದರೆ ವಾಲೆಂಟರಿಯಾಗಿ ರಿಜಿಸ್ಟರ್ ಮಾಡಿಕೊಳ್ಳಬೇಕೆಂದು ನಾನು ಹೋದರೆ, ಆ ಪ್ರೊಸೀಜರ್ ಸಿಂಪ್ಲಿಫೈ ಆಗಿದ್ದು ಅವರು ರಿಜಿಸ್ಟರ್ ಮಾಡುತ್ತಾರೆಯೇ ಅಂದರೆ, ಇಲ್ಲ ಅವರಿಗೆ ಕೊಡಬೇಕಾದ ಕಾಣಿಕೆಯನ್ನು ಕೊಟ್ಟಾಗ ಮಾತ್ರ ಮಾಡುತ್ತಾರೆ ಇಲ್ಲದಿದ್ದರೆ ಎಷ್ಟು ಸಲ ಸುತ್ತಿಸುತ್ತಾರೆ. ನನ್ನದೇ ಅಂದುಕೊಳ್ಳಿ, ನನ್ನ ಅಸಿಸ್ಟೆಂಟ್ ಕಳುಹಿಸಿಕೊಟ್ಟರೆ ರಿಜಿಸ್ಟರ್ ಮಾಡವುದಿಲ್ಲ. ನಿಮ್ಮ ಯಜಮಾನರನ್ನು ಕರೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಆದರೆ ನಾನು ಹೋಗಲಿಲ್ಲ. ನಾನು ಅಂಥ ಹಠಮಾರಿ. ದುಡ್ಡು ಕೊಟ್ಟು ನಾನು ನಮ್ಮ ಕಾನೂನನ್ನು ಪರಿಪಾಲನೆ ಮಾಡಬೇಕು. ಕಾನೂನು ಬಾಹಿರವಾಗಿ ಜೀವನ ಮಾಡುವಂಥವನ ಹತ್ತಿರಹೋಗಿ ಏನಾದರೂ ಲಂಚಗಿಂಚ ತೆಗೆದುಕೊಂಡು ಅವನಿಗೆ ಹೇಗೋ ತೆರೆಯಮರೆಯಲ್ಲಿ ಮಾಫ್ ಮಾಡುವುದಾದರೆ ಒಂದು ತರಹ ಕಾನೂನು ಪ್ರಕಾರ ಜೀವನ ನಡೆಸುವಂಥ ಒಬ್ಬ ನಾಗರೀಕನಿಗೆ ಈ ಡಿಪಾರ್ಟ್‌ಮೆಂಟ್‌ನಿಂದ ಕೊಡಬಾರದಂಥ ಕಷ್ಟ ಕೊಡುತ್ತಾರೆ. 2-3 ವರ್ಷದಿಂದ ನಾನು ಈ ಕಷ್ಟ ಅನುಭವಿಸಿದ್ದೇನೆ. ಈಗ ರಿಟರ್ನ್ ಸಬ್‌ಮಿಟ್ ಮಾಡಬೇಕು, ಟೈಮ್‌ಗೆ ಸರಿಯಾಗಿ ರಿಟರ್ನ್ ಸಬ್‌ಮಿಟ್ ಮಾಡುವವರು ಇದ್ದಾರೆ. ರಿಟರ್ನ್‌ನ್ನು ಸುಳ್ಳುಪಳ್ಳುಮಾಡಿ ಅಕ್ರಮದಿಂದ ಕೊಡುವವರಿದ್ದಾರೆ. 100 ರೂಪಾಯಿ ವ್ಯಾಪಾರವಾಗಿದ್ದರೆ 25 ರೂಪಾಯಿ ರಿಟರ್ನ್ ಕೊಡುವವರಿದ್ದಾರೆ. ಅವರದ್ದು ಬೇಗನೆ ತೀರ್ಮಾನವಾಗಿ ಬಿಡುತ್ತದೆ. ಆದರೆ 100 ರೂಪಾಯಿ ವ್ಯಾಪಾರ ಮಾಡಿ 100 ಕ್ಕೆ 100 ರೂಪಾಯಿ ಲೆಕ್ಕವನ್ನು ನಾನು ಕೊಟ್ಟರೆ ವರ್ಷವೆಲ್ಲಾ ನನ್ನದು ಅಸೆಸ್‌ಮೆಂಟ್ ಆಗುವುದಿಲ್ಲ. ನಮ್ಮ ಆಡಿಟರ್ ಹೋಗಲಿ, ನಮ್ಮ ಅಸಿಸ್ಟೆಂಟ್ ಹೋಗಲಿ, ಯಾರಾದರೂ ಹೋದರೆ, ಯಜಮಾನರನ್ನು ಕರೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಏನ್ರಿ ನಿಮ್ಮ ಯಜಮಾನರ ಮುಖವನ್ನು ಒಂದು ಸಲ ನೋಡಲಿಲ್ಲವಲ್ಲ ಎಂದು ಹೇಳುತ್ತಾರೆ. ಈ ಪದ್ಧತಿ ಇರುವುದನ್ನು

ಸುಮಾರು 1952ನೇ ಇಸವಿಯಿಂದಲೂ ನಾನು ಬಲ್ಲೆ. ಆವಾಗ ಬೆಂಗಳೂರು ಸಿಟಿ ಡೆಪ್ಯುಟಿ ಕಮೀಷನರ್ ಕೂಡ ಇನ್‌ಚಾರ್ಜ್ ಆಗಿದ್ದರು. ನನ್ನ ರಿಟರ್ನ್ಸ್ ಕಳುಹಿಸಿಕೊಟ್ಟಾಗ ಪ್ರತಿವರ್ಷ "ಏನ್ರಿ, ಒಂದೇ ರೀತಿ, ಒಂದೇ ತರಹ ಇದೆ, ಅವರು ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳಬೇಕೇನ್ರಿ, ಜಾಸ್ತಿ ಮಾಡಬೇಕಾಗುತ್ತದೆ ಎಂದು ಹೇಳಿದರು. ಆಗ ಒಂದು ಕಾಸು ಜಾಸ್ತಿ ಮಾಡಿದರೆ ನಿಮ್ಮ ಡಿಪಾರ್ಟ್‌ಮೆಂಟ್ ಉಳಿಯುವುದಿಲ್ಲ ಎಂದು ನಾನು ಹಠ ಹಿಡಿದಿದ್ದೆ. ನಾನು ಸತ್ಯವಾಗಿ ಕೊಟ್ಟಿರುವಂಥ ಲೆಕ್ಕವನ್ನು ಹೆಚ್ಚು ಮಾಡು ಎಂದರೆ ಅರ್ಥವೇನು? ಕಡೆಗೆ ಡೆಪ್ಯೂಟಿ ಕಮೀಷನರು ಹೇಳಿದರಂತೆ, ಇಲ್ಲ ಅವರನ್ನು ಕರೆಸ್ರಿ, ಇಲ್ಲದಿದ್ದರೆ ರಿಟರ್ನ್ ಜಾಸ್ತಿ ಮಾಡಬೇಕಾಗುತ್ತದೆ ಎಂದರಂತೆ. ಆಗ ನಾನು ಹೇಳಿದೆ Deputy Commissioneris on appeal to me to increase. Let him come to me. I will not go. I still remember the attitude I had taken. I refused to go. ಅಲ್ಲಿಗೂ ನನಗೆ ತೊಂದರೆ ಕೊಟ್ಟಾಗ,ನಾನು ಬಾಗಿಲನ್ನು ಹಾಕಿಬಿಟ್ಟು ವ್ಯಾಪಾರ ಕ್ಲೋಸ್ ಮಾಡುತ್ತೇನೆಂದು ಹೇಳಿ ಬೀಗದ ಕೈಯನ್ನು ಕೊಟ್ಟು ಕಳುಹಿಸಿಬಿಟ್ಟೆ. 1952ನೇ ಇಸವಿಯಲ್ಲಿ ನನಗೆ ಆದಂಥ ಅನುಭವದಿಂದ ಹೇಳಬೇಕೆಂದರೆ ಇವತ್ತಿಗೂ ಹೆಚ್ಚು ಕಡಿಮೆ ಯೋಗ್ಯರಾದಂಥ, ದಕ್ಷರಾದಂಥ, ನೀತಿವಂಥರಾದಂಥ ನಾಗರೀಕರಿಗೆ ಈ ರೀತಿ ತೊಂದರೆಯಾಗುತ್ತಿದೆ. ಇದನ್ನು ಹೇಗದೆ ತಡೆಗಟ್ಟುತ್ತೀರಿ? ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಡಿಪಾರ್ಟ್‌ಮೆಂಟ್ ಏನು ಮಾಡುತ್ತಿದೆ? ಸಾಕಷ್ಟು ಸರ್ವೆ ಮಾಡುತ್ತೇವೆ, ಈ ಇಲಾಖೆಯಲ್ಲಿ ಅಡ್ಮಿನಿಸ್ಟ್ರೇಟಿವ್ ಎಫಿಷಿಯೆನ್ಸಿ ತರುತ್ತೇವೆ, ಕರೆಪ್ಷನ್ ಮತ್ತು ಇನ್ ಎಫಿಷಿಯೆನ್ಸಿಯನ್ನು ದೂರ ಮಾಡಬೇಕೆಂದು ಡಿಪಿಎಆರ್ ಕಡೆಯಿಂದ ಮಾಡುತ್ತಿದ್ದೇವೆಂದು ರಿಪೋರ್ಟ್‌ನಲ್ಲಿ ಓದುತ್ತಿದ್ದೇವೆ. ಆದರೆ ಇದು ಇನ್ನೂ ನಡೆಯುತ್ತಿದೆಯಲ್ಲಾ, ಇದಕ್ಕೆ ಏನು ಹೇಳುತ್ತೀರಿ? ಮಾನ್ಯ ಮುಖ್ಯ ಮಂತ್ರಿಗಳು ಇದರ ಕಡೆಗೆ ತೀವ್ರ ಗಮನ ಕೊಡಬೇಕು. ನಿಷ್ಠಾವಂತ, ದಕ್ಷ ಯೋಗ್ಯ ನಾಗರೀಕರಿಗೆ ಈಗ ಏನು ತೊಂದರೆಯಾಗುತ್ತಿದೆ, ಅದು ಆಗದಂತೆ ಮಾಡಬೇಕು. ಎರಡನೆಯದು ನಾವು ನಾಗರೀಕರನ್ನು ನಂಬಬೇಕು. ನಂಬುವಾಗ ಒಂದು ಡಿಸ್ಕ್ರಿಪ್ಷನ್ ಯೂಸ್ ಮಾಡಬೇಕು. ಇವರನ್ನು ನಂಬಬಹುದೇ? ಮೊದಲ ಸಾರಿ ಇಲಾಖೆ ತಪ್ಪು ಮಾಡಬಹುದು. ಬರುವ ವರ್ಷ ಸುಧಾರಣೆಯಾಗಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಪ್ರತಿ ವರ್ಷವೂ ಯೋಗ್ಯರಾದವರಿಗೆ ತೊಂದರೆ ಕೊಡುತ್ತಾ ಹೋಗಿ, ಅಕ್ರಮ ಮಾಡುವವರಿಗೆ ಬಹಳ ವೇಗದಿಂದ ಅವರ ಫೈಲ್ಸ್ ಡಿಸ್‌ಪೋಸ್ ಮಾಡುತ್ತಾ ಹೋದರೆ ಎಷ್ಟು ತೊಂದರೆಯಾಗುತ್ತದೆ, ನಮ್ಮ ಖಜಾನೆಗೆ ಎಷ್ಟು ನಷ್ಟವಾಗುತ್ತದೆಎಂಬುದನ್ನು ನೋಡಬೇಕು. ನನಗೆ ಸಾಕಷ್ಟು ವ್ಯಾಪಾರಸ್ತರ ಸಂಪರ್ಕ ಇದೆ. ಚಿಕ್ಕ ವಯಸ್ಸಿನಿಂದ ನನಗೆ ಸಾವಿರಾರು ಜನರ ಪರಿಚಯ ಇದೆ. ಅವರು ನಮಗೆ ಹೇಳುತ್ತಾರೆ, ಈ ನಡುವೆ ನಮಗೆ ವ್ಯಾಪಾರದಲ್ಲಿ ಲಾಭ ಇಲ್ಲ. ಲಾಭ ಮಾಡಬೇಕಾದರೆ ಎಷ್ಟು ಸೇಲ್ಸ್ ಟ್ಯಾಕ್ಸ್, ಸೆಂಟ್ರಲ್ ಟ್ಯಾಕ್ಸ್ ಸೇವ್ ಮಾಡುವುದಕ್ಕಾಗುತ್ತದೆ ಅಷ್ಟು ನಮ್ಮ ಸಂಪಾದನೆ ಎಂದು. ಒಂದು ಲಕ್ಷ ರೂಪಾಯಿ ಟನ್ ಓವರ್ ಇದ್ದರೆ, 20 ಸಾವಿರ ರೂಪಾಯಿ ಟರ್ನ್ ಓವರ್ ಕೊಟ್ಟರೆ 75 ಪರ್ಸೆಂಟ್ ಟ್ಯಾಕ್ಸ್ ಉಳಿಸಿಕೊಳ್ಳುತೇವೆ. ಆ 75 ಪರ್ಸೆಂಟ್ ನಿಂದ ಜೀವನ ಮಾಡುವುದಕ್ಕಾಗುತ್ತದೆಂಬ ಮಟ್ಟಕ್ಕೆ ನಮ್ಮ ಜನ ಹೋಗಿದ್ದಾರೆ. ಅದಕ್ಕೆ ಪ್ರೋತ್ಸಾಹ ಕೊಡುವುದು, ಇಲಾಖೆಯ ಸಿಬ್ಬಂದಿ ವರ್ಗ. ಅವರಿಗೆ ಎಲ್ಲ ರೀತಿಯ ಸಹಾಯ ಮಾಡುವುದು ನಡೆದುಕೊಂಡು ಬಂದಿದೆ. ಇದನ್ನು ತೀವ್ರವಾಗಿ ಪರಿಗಣಿಸಿ ಕ್ರಮ ಕೈಗೊಂಡಿದ್ದೇ ಆದರೆ ನೂರಕ್ಕೆ ನೂರು ವ್ಯಾಪಾರ

ಏನಾಗುತ್ತದೆ ಅದನ್ನು ಸರಿಯಾದ ರೀತಿಯಲ್ಲಿ ಯೋಚನೆ ಮಾಡಿ ಸಿಬ್ಬಂದಿ ಸ್ಟ್ರಿಕ್ಟ್ ಆಗಿ, ನಿಷ್ಠಾವಂತರಾಗಿ, ರಾಜ್ಯದ ಆರ್ಥಿಕ ಮುಗ್ಗಟ್ಟನ್ನು ಪರಿಹಾರ ಮಾಡುವಂತಹ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಕೆಲಸ ಮಾಡಿದ್ದೇ ಆದರೆ ಸರ್ಕಾರ ಅನಾವಶ್ಯಕವಾಗಿ ಹೆಚ್ಚು ಹೆಚ್ಚು ಟ್ಯಾಕ್ಸನ್ನು ಜನರ ತಲೆ ಮೇಲೆ ಹೊರಿಸತಕ್ಕ ಆವಶ್ಯಕತೆ ಇಲ್ಲ. ಈ ಒಂದು ವಿಭಾಗದಲ್ಲಿ ಸಾಕಷ್ಟು ಹಣ ಬರುವುದಕ್ಕೆ ಅನುಕೂಲವಾಗುತ್ತದೆ. ಎರಡು ಪಟ್ಟಾದರೂ ಜಾಸ್ತಿ ದುಡ್ಡು ಬರುತ್ತದೆ. ಆದರೆ ಆ ಕೆಲಸವನ್ನು ನಾವು ಮಾಡುತ್ತಿಲ್ಲ. ಕೇವಲ Progress Report ರೀತಿಯಲ್ಲಿ ನಾವು ಹೇಳುತ್ತಿದ್ದೇವೆ. 1985-86ರಲ್ಲಿ 22.4 ಪರ್ಸೆಂಟ್ ಬಂತು, ನಂತರ 91-92ರಲ್ಲಿ 38 ಪರ್ಸೆಂಟ್ ಬಂತು. 1992ರ ಜನವರಿಗೆ 20.38 ಪರ್ಸೆಂಟ್ ಬಂತು. ಆದರೆ Diving deep into the malady of the whole system, unearthing the evasion of taxes, the culprits that destroythe very edifice of our society. ಅವರ ವಿಷಯದಲ್ಲಿ ಸರ್ಕಾರ ತೀವ್ರವಾಗಿ ಗಮನಿಸುತ್ತಿಲ್ಲ. ಎಷ್ಟು ತೀವ್ರವಾಗಿ ಮಾಡಬೇಕು ಎಷ್ಟು ತೀವ್ರವಾಗಿ ಆ ಕೆಲಸವನ್ನು ಮಾಡುತ್ತಿಲ್ಲ. ಅದನ್ನು ಮಾಡಿದ್ದೇ ಆದರೆ ಸರ್ಕಾರಕ್ಕೆ ಬರತಕ್ಕ ಹಣವನ್ನು ಎರಡು ಪಟ್ಟು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡಿದರೆ ಇವತ್ತಿನ ದಿವಸ ಏನು ಮುಖ್ಯ ಮಂತ್ರಿಗಳ ಆಶ್ರಯ ಯೋಜನೆ, ಶುಶ್ರೂಷಾ ಯೋಜನೆ, ಆರಾಧನಾ ಯೋಜನೆ ಎಂದು ಹೇಳಿ ನಾನಾ ರೀತಿಯ ಪ್ರಗತಿಶೀಲ ಯೋಜನೆಗಳು ಜನತೆಗೆ ಅನುಕೂಲವಾಗುವಂತೆ ಮತ್ತುಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಾನ ಮೇಲ್ಮಟ್ಟಕ್ಕೆ ಹೋಗಬೇಕೆಂದು ಇದೆ ಅದಕ್ಕೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ನಮ್ಮ ಸದನ ತೀರ್ಮಾನ ಮಾಡುತ್ತದೆ, ಅಂತಿಮ ನಾಗರೀಕನ ಮಧ್ಯೆ ಏನೇನು ಇಲಾಖೆಗಳು ಇವೆ, ಆ ಇಲಾಖೆಗಳ ಸಿಬ್ಬಂದಿ ವರ್ಗದವರು ಏನಿದ್ದಾರೆ ಅವರಿಗೆ ಅನುಕೂಲವಾಗುತ್ತದೆ. ಅದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಜನತೆಗೆ ಯಾರಿಗೆ ಅನುಕೂಲವಾಗಬೇಕಾಗಿದೆ ಅವರಿಗೆ ಅನುಕೂಲವಾಗುವುದಿಲ್ಲ. Somebody other than those who should be the beneficiaries, whould continue to perpetuate, to gain their own interests, ಎಂದು ನಾನು ಭಾವಿಸುತ್ತೇನೆ.

ಇನ್ನು ಮಾರಾಟ ತೆರಿಗೆ ಬಗ್ಗೆ ರಿಯಾಯಿತಿ ಕೊಡುವ ವಿಷಯದಲ್ಲಿ ಒಂದು ಮಾತು ಹೇಳಬಯಸುತ್ತಿದ್ದೇನೆ. ಈ ಸೇಲ್ಸ್ ಟ್ಯಾಕ್ಸ್ ರಿಯಾಯಿತಿ ಕೊಡುವಾಗ ಒಂದೊಂದು ಸಂದರ್ಭದಲ್ಲಿ ಯಾರು ಯಾರು ನಮ್ಮ ಮುಂದೆ ಅಪೀಲ್ ಮಾಡಿಕೊಳ್ಳುತ್ತಾರೆ ಅದನ್ನು ಯೋಚನೆ ಮಾಡಿ ಆಗಿಂದಾಗ್ಗೆ ನಾವು ರಿಯಾಯಿತಿಯನ್ನು ಕೊಡುತ್ತೇವೆ ಅಥವಾ ಕಡಿಮೆ ಮಾಡುತ್ತೇವೆ. ನನಗೆ ತಿಳಿದ ಹಾಗೆ ಬೆಂಗಳೂರು ನಗರದಲ್ಲಿ ಉದಾಹರಣೆಗೆ ಬೈಸಿಕಲ್ ವ್ಯಾಪಾರ ಇದೆ. ಈ ಬೈಸಿಕಲ್ ವ್ಯಾಪಾರ ಬೆಂಗಳೂರು ನಗರದಲ್ಲಿ ಹೆಚ್ಚಿದೆ. ಇಲ್ಲಿ ಆಗುವ ವ್ಯಾಪಾರಕ್ಕೆ ಹೆಚ್ಚು ಟ್ಯಾಕ್ಸ್ ಹಾಕಿದ್ದೇ ಆದರೆ, ಎಲ್ಲಾ ಕಳ್ಳಮಾಲುಗಳು ಬರುತ್ತವೆ. ನನಗೆ ಗೊತ್ತಿದೆ. ನನಗೆ ವ್ಯಾಪಾರಸ್ಥರು ಸಾಕಷ್ಟು ಜನ ಗೊತ್ತಿದ್ದಾರೆ. ವ್ಯಾಪಾರಸ್ಥರು ಪರ್ಸನಲ್ಲಾಗಿ ಹೇಳುತ್ತಾರೆ. ಹೆಚ್ಚಾಗಿ ಸ್ಮಗಲ್ ಆಗಿ ಬರುತ್ತದೆ, ಹೆಚ್ಚು ವ್ಯಾಪಾರ ಆಗುತ್ತದೆ, ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಗೆ ರಿಟರ್ನ್ಸ್ ಬರುವುದಿಲ್ಲ. ನಮಗೆ ಬರಬೇಕಾದ ಟ್ಯಾಕ್ಸ್ ಆ ಟರ್ನ್ ಓವರ್ ಮೇಲೆ ಬರುವುದಿಲ್ಲ. ಅದು ಒಂದು ಕಡೆ ನಷ್ಟ ಮತ್ತೊಂದು ಕಡೆ ನಷ್ಟ ಎಂದರೆ ನಮ್ಮ ವ್ಯಾಪಾರ ಎಲ್ಲಾ ಕರ್ನಾಟಕದ ಬಾರ್ಡರ್ ಏರಿಯಾದಲ್ಲಿ ತಮಿಳುನಾಡು ಮತ್ತು ಆಂಧ್ರ ಬಾರ್ಡರ್ ಮತ್ತು ಮಹಾರಾಷ್ಟ್ರ ಬಾರ್ಡರ್‌ನಲ್ಲಿರುವಂಥ ಬೇರೆ ಬೇರೆ ರಾಜ್ಯದ ಜಿಲ್ಲೆಗಳಲ್ಲಿ ವ್ಯಾಪಾರಗಳು ನಡೆದುಹೋಗುತ್ತವೆ. ಅಂದಮೇಲೆ ನಮ್ಮಲ್ಲಿ

ನ್ಯಾಯವಾಗಿ ಯಾವರೀತಿ ವ್ಯಾಪಾರ ಆಗಬೇಕಾಗಿತ್ತು ಆ ಗ್ರಾಸ್ ಟರ್ನ್‌ಓವರ್‌ಗೂ ಸಾಧ್ಯವಾಗುವುದಿಲ್ಲ. ಹಾಗೇ ಬೇರೆ ಬೇರೆ ಪದಾರ್ಥಗಳ ವಿಷಯದಲ್ಲೂ ಕೂಡ ಸಾಕಷ್ಟಿದೆ. ಉದಾಹರಣೆಗೆ ಒಂದು ಮಾತು ಹೇಳುತ್ತೇನೆ. ಮುಖ್ಯ ಮಂತ್ರಿಗಳು ಟ್ಯಾಕ್ಸ್ ಬಹಳ ಜಾಸ್ತಿ ಮಾಡುವುದರಿಂದ ಸರ್ಕಾರದ ಖಜಾನೆಗೆ ಬಹಳ ಹೆಚ್ಚು ದುಡ್ಡು ಬರುತ್ತದೆ ಎಂಬ ಭಾವನೆ ಇದ್ದರೆ ನನ್ನ ವೈಯಕ್ತಿಕ ತಿಳುವಳಿಕೆ ಮತ್ತು ಅನುಭವದಿಂದ ಹೇಳಬಯಸುತ್ತೇನೆ ಅದು ಸಾಧ್ಯವಿಲ್ಲ. ನಮ್ಮ ಬ್ಯುರೋಕ್ರೆಸಿ ಏನಿದೆ ಅದರ ಅನುಕೂಲಕ್ಕಾಗಿ ಟ್ಯಾಕ್ಸ್ ಜಾಸ್ತಿ ಮಾಡಿ ಅವರ ಅನುಕೂಲವಾಗುತ್ತದೆಯೇ ಹೊರತು ಜನತೆಗೆ ಅನುಕೂಲತೆ ಆಗುವುದಿಲ್ಲ. (ಇವರು ಮಾತನಾಡುವಾಗ ಸಭೆಯಲ್ಲಿ ಕೆಲವರು ಗುಂಪುಗೂಡಿ ಮಾತನಾಡುತ್ತಿದ್ದರು. ಅದನ್ನು ಗಮನಿಸಿ) ಇವರಿಗೆ ಯಾರಿಗೂ ಇಂಟರೆಸ್ಟ್ ಇಲ್ಲ ಅಂದರೆ ನಾನು ಕುಳಿತುಕೊಳ್ಳುತ್ತೇನೆ. If I am boring, I will just resume my seat. ಅವರೆಲ್ಲಾ ಮಾತನಾಡುವಾಗ ನಾನು ಕ್ವೈಟಾಗಿ ಕೂತಿರುತ್ತೇನೆ. ಮಂತ್ರಿಗಳಾಗಿ ನಮಗೆ ಅಡ್ಡ ಬಂದರೆ ಏನು ಮಾಡೋಣ? ದಯಮಾಡಿ ಕ್ಷಮಿಸಿ. If it is boring, you can go and do whatever you like. The Chair can also pull me up. You can appeal to the Chair. ಬೆಟ್ಟಿಂಗ್ ಟ್ಯಾಕ್ಸ್ ವಿಷಯ ಒಂದು ಹೇಳುತ್ತೇನೆ. ನಾನು ವ್ಯಾಪಾರ ಬಿಟ್ಟಿದ್ದೇನೆ. ನನಗೆ ಸಂಬಂಧ ಇಲ್ಲ. ನಾನು ರೇಸ್‌ಕೋರ್ಸ್‌ಗೆ ಹೋದವನೂ ಅಲ್ಲ, ಬೆಟ್ಟಿಂಗ್ ಮಾಡಿದವನೂ ಅಲ್ಲ, ಲಾಟರಿ ಟಿಕೆಟ್ ಕೊಂಡುಕೊಂಡವನೂ ಅಲ್ಲ ಎಂದು ಹೇಳಿದ್ದೇನೆ.

(ಮತ್ತೆ ಸಭೆಯಲ್ಲಿ ಕೆಲವರು ಮಾತಸಾಡುತ್ತಿದ್ದುದನ್ನು ಗಮನಿಸಿ)

I think you may just adjourn the meeting for some time so that our friends can have free time to talk. It is diverting my attention and disturbing me. They can talk without disturbing me. ನನಗೆ ಸಾಕಷ್ಟು ರೇಸ್ ಹಾರ್ಸ್ ಓನರ್ಸ್ ಗೊತ್ತಿದ್ದಾರೆ. ಟ್ರೇನರ್ಸ್ ಗೊತ್ತಿದ್ದಾರೆ ಮತ್ತು ಬೆಟ್ ಮಾಡುವ ಪಂಟರ್ಸ್, ಬುಕೀಸ್ ಎಲ್ಲಾ ಗೊತ್ತಿದ್ದಾರೆ. ಅವರು ನನ್ನ ಕ್ಷೇತ್ರದಲ್ಲಿದ್ದಾರೆ. ಮೊದಲು ನಗರ ಸಭೆ ಸದಸ್ಯನಾಗಿದ್ದಾಗ ಆ ಕ್ಷೇತ್ರದಲ್ಲಿದ್ದರು, ಈಗ ಶಾಸನಸಭಾ ಸದಸ್ಯನಾಗಿದ್ದಾಗ ಇಲ್ಲೂ ಜಾಸ್ತಿ ಇದ್ದಾರೆ. ದುಡ್ಡು ಹೇಗೆ ಮಾಡುತ್ತಾರೆ ಎಂಬುದನ್ನು ಬಹಳ ಚೆನ್ನಾಗಿ ಅವರು ನನಗೆ ಹೇಳುತ್ತಾರೆ. ಬೆಟ್ಟಿಂಗ್ ಟ್ಯಾಕ್ಸ್ ಕೊಟ್ಟರೆ ನಮಗೇನೂ ಉಳಿಯುವುದಿಲ್ಲ, ಎಷ್ಟು ಬೆಟ್ಟಿಗ್ ಟ್ಯಾಕ್ಸನ್ನು ನಾವು ಸಪ್ರೆಸ್ ಮಾಡುತ್ತೇವೆ. ಆ ಟರ್ನ್ ಓವರ್ ಏನು ಸಪ್ರೆಸ್ ಮಾಡುತ್ತೇವೆ ಎಂದು ಅಷ್ಟು ಟ್ಯಾಕ್ಸನ್ನು ಸೇವ್ ಮಾಡುತ್ತೇವೆ. ಅಷ್ಟು ಹಣ ಸಂಪಾದನೆ ಮಾಡುತ್ತೇವೆ ಎಂದು ಹೇಳುತ್ತಾರೆ. ಲಕ್ಷಾಂತರ ರೂಪಾಯಿ ಲೆಕ್ಕದಲ್ಲಿ ತೋರಿಸಿದ ರೀತಿಯಲ್ಲಿ ಬೆಟ್ಟಿಂಗ್ ನಡೆಸಿ ಅವರು ಸಂಪಾದನೆ ಮಾಡುತ್ತಾರೆ. ಸುಮಾರು 20-30 ವರ್ಷದಿಂದ ಮಾಡುತ್ತಿದ್ದಾರೆ. ಇವತ್ತಿಗೂ ಮಾಡುತ್ತಿದ್ದಾರೆ. ಅಂದಮೇಲೆ ನಮ್ಮ ಸರ್ಕಾರದ ಪ್ರತಿನಿಧಿಗಳು ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿದ್ದಾರೆ. ನಮ್ಮ ಅಧಿಕಾರಿಗಳು ಟರ್ಫ್ ಕ್ಲಬ್ ಮೆಂಬರ್ ಆಗಬೇಕು ಎಂದು ಪೈಪೋಟಿಯಲ್ಲಿ ಹೋಗುತ್ತಿದ್ದಾರೆ. ನಮ್ಮ ಆಡಳಿತ ವರ್ಗದಲ್ಲಿ ಸಾಕಷ್ಟು ಜನ ರೇಸ್ ಕೋರ್ಸ್‌ನಲ್ಲಿ ರೇಸ್ ನಡೆಯುವಾಗ ಇರುತ್ತಾರೆ. ಮಾನ್ಯ ಗುಂಡೂರಾವ್ ಅವರು ಮಂತ್ರಿಯಾಗಿದ್ದಾಗ, ಮುಖ್ಯ ಮಂತ್ರಿಯಾಗುವ ಮೊದಲು ಇಂತಹವರ ಬಗ್ಗೆ ಏನು ಮಾಡಿದರು ಎಂಬುದು ಇಡೀ ಜನತೆಗೆ ಗೊತ್ತಿದೆ. ಅಂದಮೇಲೆ ಈ ಅಕ್ರಮ ನಡೆಯುತ್ತಾ ಇದೆ ಎಂದು ಯಾರಿಗೆ ಗೊತ್ತಿಲ್ಲ ಹೇಳಿ. ಆ

ಅಕ್ರಮದ ರೇಸ್‌ಕ್ಲಬ್‌ಗೆ, ಟರ್ಫ್ ಕ್ಲಬ್‌ಗೆ ನಾವು ಬೆಂಗಳೂರು ನಗರದಲ್ಲಿ, ಬೆಂಗಳೂರಿನ ಸೆಂಟರ್ ಪ್ಲೇಸ್‌ನಲ್ಲಿ ಬಹಳ ದೊಡ್ಡ ಜಾಗವನ್ನು ಕೊಟ್ಟಿದ್ದೇವೆ. ಅವರಿಗೆ ಸಾಕಷ್ಟು ರಿಯಾಯಿತಿಯನ್ನು ನಾವು ಮಾಡಿಕೊಟ್ಟಿದ್ದೇವೆ. ಎಷ್ಟು ರಿಯಾಯಿತಿ ಮಾಡಿದ್ದೇವೆಂದರೆ, ಅದು ಹೇಳತೀರದು. ಯಾರು ಸಮಾಜಘಾತುಕವಾದಂತಹ ಕೆಲಸ ಮಾಡುತ್ತಾರೆ, ಎಂಟರ್‌ಟೈನ್‌ಮೆಂಟ್ ಎಂದು ಹೇಳಿ, ಸ್ಪೋರ್ಟ್ಸ್ ಎಂದು ಹೇಳಿ ಅದರಲ್ಲಿ ಯಾರು ಯಾರು ಈ ಸಮಾಜದಲ್ಲಿ ಮೇಲ್ ಹಂತದ ಜನರು ನಡೆಸುತ್ತಿದ್ದಾರೋ, ಈ ಸಮಾಜದ ಪ್ರತಿನಿಧಿಗಳು ಆಗಿರುವವರು ಅಲ್ಲಿದ್ದಾರೆ. ಮತ್ತೆ ಸಮಾಜಕ್ಕೆ ಇರುವ ಒಂದು ಸರ್ಕಾರವಾಗಿ ನಾವಿದ್ದೇವೆ. ನಮ್ಮ ಪ್ರತಿನಿಧಿಗಳಿದ್ದಾರೆ. ಇಷ್ಟೆಲ್ಲಾ ಆದರೂ ಕೂಡಾ self-deception ಏಕೆ? ನಿಮ್ಮ ಈ self-deception ನಿಂದ ಈ ಸರ್ಕಾರಕ್ಕೆ ಬರುವ ಹಣಕ್ಕೆ ಧಕ್ಕೆ ಬರುವ ರೀತಿಯಲ್ಲಿ ಪ್ರೋತ್ಸಾಹ ಕೊಡುವುದಾದರೆ ಯಾವ ರೀತಿ ಕೊಡುತ್ತಿದ್ದಾರೆ. ಹೇಗೆ ಕೊಡುತ್ತಿದ್ದಾರೆ ಎಂಧು ತಿಳಿದುಕೊಳ್ಳಬೇಕಾಗಿದೆ. ನಮಗೆ ಎಷ್ಟು ಹಣ ಬರಬೇಕೋ ಅಷ್ಟು ಬರುತ್ತಾ ಇಲ್ಲ. ಬರುತ್ತಾ ಇಲ್ಲ ಎಂದಮೇಲೆ ಏನು ಮಾಡಬೇಕು? ಅದನ್ನು ಓಪನ್ ಸ್ಪೇಸ್ ಆಗಿಟ್ಟು ಲಂಗ್ ಸ್ಪೇಸ್ ಆಗಿಟ್ಟು ಜನರಿಗೆ ಒಳ್ಳೆಯ ಗಾಳಿ ಬರುವಂತೆ ಇಟ್ಟುಕೊಳ್ಳೋಣ. ಆದರೆ ಬರಬೇಕಾದ ಹಣ ಖಜಾನೆಗೆ ಬರದೇ ಇದ್ದರೆ, ಆ ಹಣದಿಂದ ಜನರಿಗೆ ಮಾಡಬೇಕಾದ ಪ್ರಗತಿ ಸೇವೆಯನ್ನು ಮಾಡುವುದಕ್ಕೆಸಾಧ್ಯವಿಲ್ಲವೆಂದಮೇಲೆ ಈ ಸ್ಪೋರ್ಟ್ಸ್ ಏಕೆ, ಈ ಗ್ಯಾಂಬ್ಲಿಂಗ್ ಏಕೆ? ಮತ್ತು ಇವತ್ತು ಹೈಯಸ್ಟ್ ಲೆವೆಲ್‌ನಿಂದ ಲೋಯೆಸ್ಟ್ ಲೆವೆಲ್‌ವರೆಗೂ, ಆಂಟಿ ಸೋಷಿಯಲ್ ಆಕ್ಟಿವಿಟೀಸ್ ಮಾಡುವಂಥವರಿಗೆ ಪ್ರೋತ್ಸಾಹ ಮಾಡುವುದಾದರೂ ಏತಕ್ಕೆ ಎಂದು ಕಳಕಳಿಯಿಂದ ನಾನು ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಕೇಳಬೇಕೆಂದು ಆಸೆಪಡುತ್ತೇನೆ. ಅದುದರಿಂದ ಇದು ಡೌನ್‌ವರ್ಡ್ ರಿವಿಜನ್ ನೋಡಿ ಈ ಬೆಟ್ಟಿಂಗ್ ಟ್ಯಾಕ್ಸ್‌ಗೆ, ಕಾರಣ ಏನೇ ಇರಬಹುದು. You can give any explanation. ಬಡಜನರಿಗೆ ಹೋಗಬೇಕಾದ ಟ್ಯಾಕ್ಸ್ ಕಡಿಮೆ ಮಾಡೋಣ ಎಂದರೆ ಎದಕ್ಕೆ ಎಕ್ಸ್‌ಪ್ಲನೇಷನ್ ಇಲ್ಲ. ಮತ್ತು ಏನು ನಮ್ಮ ಮೋಸ್ಟ್ ಎಸೆನ್ಸಿಯಲ್ ಕಮಾಡಿಟೀಸ್ ಇವೆ. ಆ ಪದಾರ್ಥಗಳಿಗೆ ರಿಯಾಯಿತಿ ಕೊಡುವುದಕ್ಕೆ ಏನು ಯೋಜನೆ ಇಲ್ಲ. ಆದರೆ ಇವರಿಗೆ ಆಫ್‌ಕೋರ್ಸ್ ಬೆಟ್ಟಿಂಗ್‌ನಲ್ಲಿ 20 ಪರ್ಸೆಂಟ್‌ನಿಂದ 15 ಪರ್ಸೆಂಟ್‌ಗೆ ಇಳಿಸಿದ್ದಾರೆ 1991-92ರಲ್ಲಿ. ಹಾಗೇ ಆಫ್‌ಕೋರ್ಸ್‌ನಲ್ಲಿ 20 ರಿಂದ 10 ಪರ್ಸೆಂಟ್‌ಗೆ ಇಳಿಸಿದ್ದಾರೆ. ಮತ್ತೆ ಜಮುಖಾನಾಕ್ಕೆ 20 ಪರ್ಸೆಂಟ್ ನಿಂದ 15 ಪರ್ಸೆಂಟ್‌ಗೆ ಇಳಿಸಿದ್ದಾರೆ. ಜಮುಖಾನಾ ಎಂದರೆ, ಜಮುಖಾನ ಹಾಕಿಕೊಂಡು ಕುದುರೆ ಓಡಿಸಿದರೂ ಕುದುರೆ ಓಡುವುದು ಅಷ್ಟೇ ಇದೆ. ಆ ಕುದುರೆಗಳು ಹೋಯಿತು ನಮ್ಮಲ್ಲಿ. ಈ ಟೋಟಲೈಸರ್ ಟ್ಯಾಕ್ಸ್ ನಲ್ಲಿ 20 ರಿಂದ 15ಕ್ಕೆ ಇಳಿಸಿದ್ದೀರಿ. ನನಗೆ ಈ ಬಗ್ಗೆ ಸರಿಯಾದ ಅರ್ಥ ಗೊತ್ತಿಲ್ಲ. ನಾನು ರೇಸ್‌ಕೋರ್ಸ್‌ಗೆ ಹೋಗುವುದಿಲ್ಲ. ಆ ವಿಷಯ ಗೊತ್ತಿಲ್ಲ. ಆದರೆ ತಾವು ಕೊಟ್ಟ ರಿಪೋರ್ಟ್ ಪ್ರಕಾರ ಆದಾಯ ಕಡಿಮೆ ಮಾಡಿಕೊಂಡು ಸಮಾಜಘಾತುಕ ಪ್ರವೃತ್ತಿಯನ್ನು ಬೆಳೆಸಿಕೊಂಡು ಹೋಗುವ ಅವಶ್ಯಕತೆ ಏನಿತ್ತು ? What is the social standing or social status symbol that you want to present to the people of our state with this kind of a vast scale massive gambling organisation? I have best of my friends there, known acquaintances. ಬಹಳ ಅಭಿಮಾನಿಗಳು ಇದ್ದಾರೆ, ನನ್ನ ಕಂಡರೆ. But I am not prepared to stand by them. If I think in terms of millions of people outside the race course, and

the large number of families who are ruined because their husbands, brothers and wives go to the race course, I don't think there is need for any more continuity of this Bangalore Turf Club and certainly not in the Bangalore City Centre, The sooner we abolish horse racing, gambling, whatever form it is, and sooner we take over the entire land for something better for the city and the civic interest, we would have done a greater service to the people. ನಾನು ಬಹಳ ತೀವ್ರವಾಗಿ ಹೇಳಬಯಸುತ್ತೇನೆ. ನಮ್ಮ ಟೂರಿಸಂ ಡಿಪಾರ್ಟ್‌ಮೆಂಟ್ ಮಂತ್ರಿಗಳಿಗೆ ಒಂದು ಮಾತು ಹೇಳುತ್ತೇನೆ. ಇವತ್ತು ಅವರಿಗೆ ಸ್ಥಳ ಬೇಕೆಂದು ಬಹಳ ಕಾತುರರಾಗಿದ್ದಾರೆ. ಬೆಂಗಳೂರು ರೇಸ್ ಕ್ಲಬ್ ಭೂಮಿ ನಮ್ಮದೇ ಆಗಿದೆ. ಅಲ್ಲಿಂದ ಅವರನ್ನು ಹೊರಗೆ ಕಳುಹಿಸಿಬಿಡಿ, ನಿಮಗೆ ಭೂಮಿ ಸಿಗುತ್ತದೆ. ನೀವು ಒಳ್ಳೆಯ ಕೆಲಸ ಮಾಡುವುದಕ್ಕೆ ಅನುಕೂಲ ಆಗುತ್ತದೆ. ಇವತ್ತು ಒಂದು ಗಾದೆ ಇದೆ. "ಬಗಲ್ ಮೆ ಬಚ್ಚಾ, ಗಾವ್‌ಬರ್ ಢೂಂಡಾ" ಎಂದು. ಎಂದರೆ "ಕಂಕುಳಲ್ಲಿ ಮಗು ಇದ್ದರೂ ಕೊಟೆಯಲ್ಲೆಲ್ಲಾ ಹುಡುಕಿದರು, ನನ್ನ ಮಗು ಎಲ್ಲಿ ನನ್ನ ಮಗು ಎಲ್ಲಿ ಎಂದು ಹೇಳಿ". ಹಾಗೇ ಇನ್ನೊಂದು ಹೇಳುತ್ತಾರೆ. "ದುಷ್ಮನ್ ಕಿದರ್ ಹೈ ಎಂದರೆ ಬಗಲ್‌ಮೆ ಹೈ"ಅಂತ. ವೈರಿ ಎಲ್ಲಿದ್ದಾನೆಂದರೆ ಕಂಕುಳಲ್ಲಿದ್ದಾನೆ. ಎಂಬಂತೆ ನಮಗೆ ಸಮಾಜಘಾತುಕರು ಸಮಾಜಕ್ಕೆ ವೈರಿಗಳಾಗಿರತಕ್ಕವರಿಗೆಲ್ಲಾ ನಾವು ಪ್ರಚಂಡವಾಗಿ ಪ್ರೋತ್ಸಾಹವನ್ನು ಕೊಟ್ಟು ಈ ಕೆಲಸ ಮಾಡುತ್ತಿದ್ದೇವೆ. ನಾನು ಮೇಯರ್ ಆಗಿದ್ದಾಗ ನನ್ನನ್ನೂ ಸಹ ಕರೆದಿದ್ದರು. ಪ್ರತಿ ವರ್ಷ ಮೇಯರ್‌ಗಳನ್ನು ಕರೆದುಕೊಂಡು ಹೋಗಿ ದೊಡ್ಡ ಹಾರ ಹಾಕಿ ಅವರ ಹೆಸರಿನಲ್ಲಿ ರೇಸ್ ಮಾಡುತ್ತಾ ಇದ್ದರು. ನನ್ನನ್ನು ಕರೆದರು. ನಾನು ಬರುವುದಿಲ್ಲವೆಂದು ಹೇಳಿದೆ. ಏಕೆಂದರೆ ಈ ಪವಿತ್ರವಾದ ಕೆಲಸವನ್ನು ಮಾಡುವಂತಹ ಅಪವಿತ್ರ ನಾನಲ್ಲವೆಂದು ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳು ಹೋಗುತ್ತಾರೆ. ಗೌರ್ನರ್‌ರವರು ಹೋಗುತ್ತಾರೆ. ಅದೊಂದು ವಾಡಿಕೆ ಬಂದಿದೆ. ಅವರಿಗಿಂತ ದೊಡ್ಡವರು ಇದ್ದರೆ ಅವರೂ ಹೋಗುತ್ತಾರೆ. ಅದೊಂದು Tradition. ದೇವಾಲಯಕ್ಕೆ ಹೋಗುವುದು ಒಂದು ವಾಡಿಕೆ. ಅದರಲ್ಲಿ ಅರ್ಥವಿದೆ.

ಉಪಾಧ್ಯಕ್ಷಿಣಿಯವರು:ಸ್ಪೀಕರ್ ಕಪ್ ಎಂದೂ ಇದೆ. ಅದಕ್ಕೆ ನಮ್ಮನ್ನು ಕರೆಯುತ್ತಾರೆ. ನನ್ನನ್ನೂ ಕರೆದರು. ನಾನು ಹೋಗಲಿಲ್ಲ.

SRI A.K.ANANTHAKRISHNA:- I am grateful to you. I am really happy. I am proud. I am not finding fault with those who have gone. Bug, I am finding fault with the system, the perpetuals of the tradition which is anti-people, which is against those who are ecomomically and socially very much backward. ನೀವು ನೋಡಿ ಅಲ್ಲಿ. 90% of the people who go there do not belong to the upper crest of the social or the economic order. But, those who exploit are the 10% out of the 90%. ಹಾಗೆ ನಮ್ಮಲ್ಲಿ ಒಂದು ಆರ್ಥಿಕ ಬೆಳವಣಿಗೆಯಲ್ಲಿ ಸುಮಾರು ಶೇಕಡ 80 ಜನ ಬಹಳ ಶ್ರಮವಹಿಸಿ ಪ್ರೊಡ್ಯೂಸ್ ಮಾಡುತ್ತಾರೆ.

ಅದನ್ನು ಕೇವಲ 20 ಪರ್ಸೆಂಟ್ ಜನ ತಿಂದು ಹಾಕುತ್ತಾರೆ. They enjoy and the 20% exploit the 80%. ನಾರ್ಮಲ್ ಎಕನಾಮಿಕ್ ರೇಟ್‌ನಲ್ಲಿ, ಇದೇ ಸಿಸ್ಟಮ್ ಹಾಗೆಯೇ ಮುಂದುವರಿಯುತ್ತಾ ಇದೆ. ಆದ್ದರಿಂದ ಮುಖ್ಯಮಂತ್ರಿಯವರು ಬಡವರ ವಿಷಯದಲ್ಲಿ ಅನುಕಂಪವಿರುವವರು, ಹಿಂದುಳಿದ ವರ್ಗದವರ ಬಗ್ಗೆ ಹೆಚ್ಚು ಅನುಕಂಪವಿರುವವರು, ಸಮಾಜ ವಾದದಲ್ಲಿ ನಂಬಿಕೆಯುಳ್ಳವರು ಈ ರೇಸ್ ಕೋರ್ಸ್‌ನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇದೊಂದು ಸಹರೆ ಇತ್ತು. ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು, ಆದರೆ ಏತಕ್ಕೆ ಕೈಬಿಟ್ಟು ಹೋಯಿತೋ ಗೊತ್ತಿಲ್ಲ. ನಮ್ಮ ಸರ್ಕಾರದಲ್ಲಿರುವ ಮುಖ್ಯಕಾರ್ಯದರ್ಶಿಯವರು ಮತ್ತು ದೊಡ್ಡವರು ಅದರಲ್ಲಿದ್ದಾರೆ. ಇಲ್ಲಿ ಒಂದು ಆರ್ಡರ್ ಮಾಡಿದರೆ ಮುಂದೆ ಅಲ್ಲಿಂದ ತೆಗೆದುಹಾಕುತ್ತಾರೆ. ಇನ್ನೊಂದು ತರಹ ಇನ್‌ಫ್ಲುಯೆನ್ಸ್ ಮಾಡಿ ಈ ರೀತಿ ಮಾಡುತ್ತಾರೆ. ಇದರ ಬಗ್ಗೆ ತೀವ್ರವಾಗಿ ಮುಖ್ಯಮಂತ್ರಿಗಳು ಯೋಚನೆ ಮಾಡಬೇಕು. ಎಷ್ಟು ಬೇಗ ನೋಟೀಸ್ ಕೊಡಬೇಕೋ ಕೊಡಿ. ರೇಸನ್ನು ಅಬಾಲಿಷ್ ಮಾಡುವುದು ಇದ್ದರೆ ಮಾಡಿ. ಇದಕ್ಕಾಗಿ 20-30 ಮೈಲಿ ದೂರದಲ್ಲಿ ಜಾಗವನ್ನು ತೆಗೆದುಕೊಂಡಿರಬೇಕೆಂದು ಕಾಣುತ್ತದೆ. ಆದರೆ ಅವರು ಅಲ್ಲಿಗೆ ಹೋಗುವುದಿಲ್ಲ. ಸೆಂಟ್ರಲ್ ಜೈಲನ್ನು ಶಿಫ್ಟ್ ಮಾಡಬೇಕೆನ್ನುವ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿದ್ದೆವು. ಬೆಂಗಳೂರು ನಗರದ ಮಧ್ಯಭಾಗದಲ್ಲಿ ಕ್ರಿಮಿನಲ್ಸ್ ಇದ್ದಾರೆನ್ನುವ ಭಾವನೆ ಮಕ್ಕಳಲ್ಲಿ ಬರುವುದು ಬೇಡ. ಅದರ ದುಷ್ಪರಿಣಾಮ ಮಕ್ಕಳ ಮೇಲೆ ನಾನಾ ರೀತಿಯಲ್ಲಾಗುತ್ತದೆ. ಅದು ಆಗಬಾರದು ಎನ್ನುವ ಬಗ್ಗೆ ಕೂಡ ಯೋಚನೆ ಮಾಡಿದ್ದೇವೆ. ಆ ಜೈಲಿಗಿಂತ ಹೆಚ್ಚು ದುಷ್ಪರಿಣಾಮ ಆಗುತ್ತಿರುವುದು ಈ ರೇಸ್ ಕ್ಲಬ್‌ನಿಂದ. ಇದನ್ನು ತಕ್ಷಣ ಮಾಡಲು ಸರ್ಕಾರ ಎಷ್ಟು ತೀವ್ರಗತಿಯಿಂದ ನಮ್ಮ ಸರ್ಕಾರ ಕೆಲಸ ಮಾಡುತ್ತದೆ ಅಷ್ಟೂ ಒಳ್ಳೆಯದಾಗುತ್ತದೆಂದು ನಾನು ಭಾವಿಸುತ್ತೇನೆ.

ಹಾಗೆಯೇ ಲಾಟರಿಯ ಬಗ್ಗೆ ನನಗೆ ವೈಯಕ್ತಿಕವಾಗಿ ನಂಬಿಕೆಯಿಲ್ಲ. ಬೇಡ ಎಂದು ನಾನು ತೀರ್ಮಾನ ಮಾಡಿದ್ದೆ. ನಾನು ರಷ್ಯಾ ಮತ್ತು ಈಸ್ಟ್ ಯುರೋಪಿಯನ್ ದೇಶಗಳಿಗೆ ಅವರ ಆಹ್ವಾನದ ಮೇಲೆ ಹೋಗಿದ್ದಾಗ ಸುಮಾರು 15-20 ದಿವಸ ಪ್ರವಾಸ ಮಾಡಿದಾಗ ಮಾಸ್ಕೋದಲ್ಲಿ ಕೂಡ ಈ ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದರು. ನಾನು ಆಗ ಅವರನ್ನು ಕೇಳಿದೆ, ಇದೇನಿದು, ಸಮಾಜವಾದಿ ರಾಷ್ಟ್ರ ತಮ್ಮದು, ಸಮಾಜವಾದದ ಮೇಲೆ ನಂಬಿಕೆ ಇರುವವರು, ನೀವೂ ಲಾಟರಿ ಮಾರಾಟ ಮಾಡುತ್ತಿದ್ದೀರಲ್ಲಾ, It is very much against the very philosophy of socialism. ಅಲ್ಲವೇ ಎಂದು ನಾನು ಕೇಳಿದೆ. ಆಗ ಅವರು ನನಗೆ ಹೇಳಿದರು, ಲಾಟರಿ ಟಿಕೆಟ್ ಮಾರುವುದು ಕೆಲವು ಸಮಾಜಕ್ಕೆ ನೇರವಾಗಿ ಸೇವೆ ಮಾಡುವ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದರಿಂದ ಪ್ರಗತಿಶೀಲ ಕಾರ್ಯಕ್ರಮಗಳಿಗೆ ಹಣವನ್ನು ಒದಗಿಸಿಕೊಳ್ಳುವುದಕ್ಕೆ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿದ್ದೇವೆಂದು ಹೇಳಿದರು. ನಾನು ಅದರ ಬಗ್ಗೆ ಡಿಪ್ ಆಗಿ ಎನ್‌ಕ್ವೈರಿ ಮಾಡಲಿಲ್ಲ. ಈ ಲಾಟರಿ ಟಿಕೆಟ್ ವ್ಯವಹಾರ ಏನಿದೆ ಅದನ್ನು ಇಂತಹ ಕೆಲಸಗಳಿಗಾಗಿ ಮಾಡುತ್ತಿದ್ದೇವೆಂದು ತಾವು ಹೇಳಬೇಕು. ಯಾವುದೇ ಸಣ್ಣ ಪುಟ್ಟ ಕೆಲಸ ಮಾಡುವುದಕ್ಕೆ Playgrounds improvement in aid of the school buildings, ಮತ್ತೊಂದು ಎಂದು ಹೇಳಿ ಮನೆಗಳಿಗೆ ಬಂದು ತೆಗೆದುಕೊಂಡು ಹೋಗುತ್ತಾರೆ. That is absolutely a civic need and a civic benefit to be given. It is only a sort of a collective contribution of the society for getting back the

benefit to our children. ಆ ರೀತಿ ಮಾಡಬೇಕು ಅಂತ ನಾನು ಹೇಳಿದ್ದು. ಅದಕ್ಕಾಗಿ ನಾನು ಹೇಳಿದೆ ಶ್ರೀ ಮದನಗೋಪಾಲ್ ನಾಯಕ್ ನಮ್ಮ ರಾಜ್ಯದಲ್ಲಿ ಈ ಲಾಟರಿ ಟಿಕೇಟುಗಳನ್ನು ಮಾರುತ್ತಿದ್ದಾರೆ. ಇದನ್ನು ಆ ಅರೀತಿಯ ಬೆನಿಫಿಟ್‌ಗೋಸ್ಕರ ಮಾಡುತ್ತಿದ್ದಾರೆಯೇ? ಅದೂ ಅಲ್ಲದೆ, ಈಗ ಒಂದು ನಂಬರಿನ ಲಾಟರಿ ಬಂದಿದೆ. ಅದು ಬಹಳ ಪ್ರಗತಿಪರವಾಗಿದೆ. ದಿವಸದಿವಸವೂ ಡ್ರಾ ಮಾಡತಕ್ಕದ್ದು ಈಗ ಬಂದಿದೆ.

ಶ್ರೀ ಎ.ಕೆ.ಅನಂತಕೃಷ್ಣ: ಆ ವಿಷಯ ನಾನು ಹೇಳಿದ್ದೇನೆ. ಅದು ಹೇಗಿದೆ ಎಂದರೆ ಒಂದು ಅಪರಾಧ ಬೆಳೆದುಕೊಂಡು ಮುಂದೆ ತಳ್ಳಿಕೊಂಡು ನಮ್ಮ ರಾಜ್ಯದಲ್ಲಿ ಬರುತ್ತಿರುವ ಅಪರಾಧ ಏನಿದೆ, ಆದಕ್ಕೆ ತಡೆ ಹಾಕಬೇಕು ಅಂತ ಇದನ್ನು ಮಾಡಿದ್ದಾರೆ ಎಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. It is one evil wanting to fight another evil. Personally, speaking, I am certainly opposed to it, because the one who will be ruined is the most backward sections and those who are over-averages amongst the middle class. Above and beyond, those peope don't do, because they have other methods of making money. ಆದ್ದರಿಂದ ನಾನು ಹೇಳುವುದು, ಪ್ರಗತಿಶೀಲವಾದಂಥ ಒಂದು ಕಾರ್ಯಕ್ರಮವನ್ನು ಸಾರ್ವಜನಿಕರಿಗಾಗಿ ಮಾಡುವಂಥ ವಿಷಯದಲ್ಲಿ ತಾವು ಲಾಟರಿ ಟಿಕೇಟು ಮಾರಾಟ ಮಾಡುವುದರಲ್ಲಿ ನಾನು ತೀವ್ರವಾಗಿ ಆಕ್ಷೇಪ ಮಾಡುವುದಿಲ್ಲ. ನಾವು ಸಮಾಜದ ಪ್ರತಿನಿಧಿಗಳಾಗಿ ಆಡಳಿತವನ್ನು ನಿರ್ವಹಣೆ ಮಾಡುವಾಗ ದುಡ್ಡು ಬೇಕೆಂದರೆ ಪ್ರಗತಿಶೀಲವಾದಂಥ, ಬಹಳ ಪುರೋಗಾಮಿಯಾದಂಥ ಯೋಜನೆಗಳನ್ನು ಹಾಕಿಕೊಂಡು ಸಂಪಾದನೆ ಮಾಡತಕ್ಕದ್ದು ಬಹಳ ಇದೆ. There are not attempting at anything like a creative approach to raise money. ಅದೇ ಹಳೇ ಪದ್ಧತಿ. ಒಬಿರಾಯನ ಕಾಲದಿಂದ ಹಾಕಿದಂಥ ಅದೇ ಪೇಜು, ಅದೇ ಕಾಲಮ್ಮು, ಅದೇರೀತಿ, ಅದೇರೀತಿಯಾದ ಮೆಥೆಡ್ಸ್‌ನಲ್ಲಿ ತೆಗೆದುಕೊಂಡು ಹೋಗುತ್ತಿದ್ದೇವೆ. We are not prepared to fight to unearth black-money. We are not prepared to unearth the hoarders. We are not prepared to do so many things which have got to be done, which people like late lamented Hon.Prime Minister Jawaharlal Nehru said, soon after the country becomed free, the first black-marketeer and a hoarder, I will hang him to the lamp pole in the street ಅಂತ ಹೇಳಿದರು.

(ಶ್ರೀ ಜೆ.ಎಚ್.ಶಿವನಂಜಪ್ಪನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಚಿಕ್ಕವಯಸ್ಸಿನಲ್ಲಿ ಇದನ್ನು ಕೇಳುವುದಕ್ಕೆ ಬಹಳ ಚೆನ್ನಾಗಿತ್ತು. ನಾನು ಫ್ರೀಡಂ ಮೂವ್‌ಮೆಂಟ್‌ನಲ್ಲಿ ಬಹಳ ಕೆಲಸ ಮಾಡಿದೆ. ಆದರೆ ಅದು ಆಗಲಿಲ್ಲ. ಅದು ಎರಡನೇ ಮಾತು. ಆದರೆ ನಮ್ಮನ್ನು ಅಂತಹ ಒಂದು ಕೆಟ್ಟ ಕೆಲಸಕ್ಕೆ ಇಳಿಯಿರಿ ಅಂತ ಹೇಳದೇ ಹೋದರೆ ಸಾಕು, ನಮ್ಮ ಮೇಲೆ ಅದರ ಪ್ರಭಾವ ಬಾರದೇ ಇದ್ದರೆ ಸಾಕು ಎಂಬುದು ನನ್ನ ಭಾವನೆ. ಈ ಡಿಪಾರ್ಟ್‌ಮೆಂಟ್ ಆಫ್ ಕ್ಯಾಬಿನೇಟ್ ಅಫೇರ್ಸ್‌ನ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. "The Department of Cabinet Affairs and the Department of Personnel and Administrative Reforms mainly deal with the Management

of personnel and ensures implementation of policies relating to personnel management in various Departments. It provides advice and guidance in all service matters. The administrative Reforms wing of the Departments in administration with a view to increasing work efficiency and suggesting measures for improvement in quality of work in every spehere of administration."

It is a very,very laudable objective. Every institution, every organisation, everyone has got to go through it. Whether we urge it or not, it has to be done. Whether it has to be done with the earnestness in implementing what is being done, or being assessed what is being done or we are just being a continuing character in the continuing system so that we present some sort of a thing to the Legislature and also to the people? Have the people come to know that this Department has really made any effective contribution for achieving kthe objective for which it has been done? It is a matter which has got to be very seriously considered. Tdhese are the factors which our House has to seriously think of. So, here I will only take a few functions. I go to the third item: 'Discipline and morable in services including administrative vigilance.' If one is discipline; honest actions on the part of the administrative officials or the officers concerned, it influences the morale of the rest of the top officials. It is in my personal experience as an officer, as an executive in my Life, whether it was a business organisation or whatever organisation it was or my own organisations, so, disciplined, enforcement of discipline leads to achievement of a morale in any administration. Then that leads to further administrative vigilance. Everyone will be vigilant to see what the next man in the office or the Department does, whether he alone has got to struggle consistent with what is expected of his objective, what the others won't do. I have also the experience. It is the one officer who does, nine others don't do. The one officer becomed desparate. I have also done. 10 officers job; I have done. But, I am an optimist and hard hitting fighter; So,

I have not got very tired. But, most people get tired. ಇಷ್ಟು ನಮ್ಮಲ್ಲಿ ಬಹಳ ಕಾಂಪಿಟೆಂಟಾಗಿ ಏಬಲ್ ಆಫೀಸರ್ಸ್ ಇದ್ದು, ಕಮಿಟೆಡ್ ಆಫೀಸರ್ಸ್ ಕೆಲಸ ಮಾಡುತ್ತಿರುವಾಗ, ಸುತ್ತಮುತ್ತಲಿರುವ ವಾತಾವರಣ ಅದಕ್ಕೆ ವ್ಯತಿರಿಕ್ತವಾಗಿದ್ದರೆ, ಇಡೀ ಡಿಪಾರ್ಟ್‌ಮೆಂಟ್ ಏನಾಗುತ್ತದೆ, ಯಾವರೀತಿ ಜನರಿಗೆ ಸೇವೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ? How can we give an efficiency, discipline, a committed service to the people for their progress? It is a very vital factor. ಈ ವಿಷಯದಲ್ಲಿ ತಾವು ವಿಚಾರ ಮಾಡಿ. It is a very fine thing. ಇದು ಯಾರು ಏನುತಾನೆ ತೆಗೆನುಕೊಂಡು ಬಂದು ಹೇಗೆ ಬರುತ್ತಾರೋ ನನಗಂತೂ ಗೊತ್ತಿಲ್ಲ. ನನ್ನ 30 ವರ್ಷಗಳ ನಗರಪಾಲಿಕೆಯ ಅನುಭವದಲ್ಲಿ, ಕಮೀಷನರ್ ಅವರನ್ನು ಲಂಡನ್‌ಗೆ ಕಳುಹಿಸಿದ್ದೇನೆ, ನಮ್ಮ ಇಂಜಿನಿಯರುಗಳೂ ಎಲ್ಲೆಲ್ಲೋ ಹೋಗಿದ್ದಾರೆ, ನಾನು ಕೆಲವು ಕಡೆಗಳಿಗೆ ಹೋಗಿ ಬಂದಿದ್ದೇನೆ. What is the change in the character of the people whom we have trained, on whom we spend lot of money to train? Are we thinking in terms of finding out why it is and what we have to do to correct the situtation? Next Research and personality in personnel administration. We have only got to go to BDA, Housing Board, Bangalore city corporation, and water supply Board to find out what an amount of research in personnel administration has been gone through? How much personnel commitment is there to serve the cause for which those institutions have been established. I am not cynically critical. I am pained to say what Iam saying, because over 50 years I have served the state and the country and the people. With so much modernity, so much of advance in everything-education, knowledge, enlighterment, materials, computer, A,B,C,D. I don't know what not, yet we are again far beyond the Bullock cartage, as for as the service to the people is concerned. Thousands of crores of rupees are provided in our budgetary provision. Where all that is going? Are we getting effective results ? That is the point. Here is the most important aspect: Substantive functions - (i) Controlling and regulating I.A.S., the state Services like K.A.S. and the State Secretariat Services. I have raised also some questions which nobody would like to answer. It may not find an answer. 'No, does not arise' It is a very simple answer. I was saying about lent officers from the State to various statutory bodies, public sector bodies,

public sector undertakings and joint sector undertakings everywhere to the Health Department of the Corporation, to the Engineering Department of the Corporation, to the Revenue Department of the Corporation, everywhere. 'Who is keeping track of the lent officers service at the other end?'ಅಂತ ಕೇಳಿದರೆ, The answer was the 'Chief of the Department takes care of it. He prepares a confidential Report in his personal file. So, he is in the know of it.' But when the Chief of the organisation and the executive of the organisation and the officers whom we lend for service to those department, both are in league with each other to destory the very edifice by which they want to builds, who has control? ಅಂತ ಹೇಳಿದರೆ, ಒಬ್ಬ ಕಳ್ಳ, ಇನ್ನೊಬ್ಬ ಕಳ್ಳನನ್ನು ಚೆನ್ನಾಗಿ ನೋಡಿಕೊಳ್ಳುವುದು ಅಂದಹಾಗೆ ಆಗಿದೆ. When the commissioner fails to behave like a respectable, honest, efficient officer who is expected of to do it, doing better job as a lent officer in the Corporation, he under-rates all mal-practices, he under-rates all corruptions, he under rates all irregularitities, he under-rates everything that should not be let up. Who is to check? The Chief Secretary has no control over him or influence on him. The HUD Secretary is helpless, who lifts his hands if you tell him that this is the postion and the Ministers have no time. The Chief Minister has hardly any time to see what is happening at all points of time. I am not finding fault with him. But, it is a fact. What if the British monarch could extend the sphere dof his influence and command and his sovereignty throughout the world, and every nook and corner could be efficiently and effectively taken care of for the benefit of the Crown, 5000, 6000, 10,000 miles away from London, I don't understand that here from Vidhana Soudha we don't reach the neighbour office in the neighbouring building. Is this what we have inherited from that very effective administrative and executive control of our previous monstrosity of masters? We did not fight for freedom to see what we are today. There is a very important factor in this when I say. I would only appeal either don't create a statuitory body, lent people; don't have branches, lent people. Centralise the whole thing. Have

an absolutely dictatorship and go on dictating and dealing with the matters, or if you believe in democratisation, decentralisation, either send people who are men of character, intergrity, abilityandservice and efficiency, or keep a thorough watch on them with such men on the helm of affairs who are capable of influencing the service at the other end. Because I told you, only during the past year and odd, tens of crores of rupees have been drained off in the unkept, uncleaned drains of Bangalore City Corporation.

Now, political pensions. I know the difficulties of the state, its economic position. But, at the same time, no amount of explanation would be satisfacotry for those thousands of people who fought for the freedom of our country, who fought for removal ofthe Princely order in the State. Very recently, we have recognised, how belated it may be, we have also freedom fighers for Goa's freedom. We are adding. But, then when a spirit of recognition at a freedom fighter is accepted, in actual reality, why do we not give them the recognition allowance? It is not pension. It is a recognition allowance to somebody, with due recognition of their services to this country. But, for 20 year or 25 years if sombody does some service in any department of the government, he draws his fat salary, he gets all the fringe benefits, he gets everything, he gets gratuity, pension. His children get the benefit. But, the people who staked their lives and their careers at that time for the freedom of this country, who staked their life for the freedom of our down people in our state, from the Maharaja's rule at that time have not been properly recognised. But I was also one of those who shouted against the British to quit India. I have not registered myself as a freedom fighter. I am not going to do it. But, there are thousands of thers who feel why are we being neglected by the state. Here, I have no other answer except that the bureaucracy is not in support of these freedom fighters. They don't want to recognise the services of the very people who were committed to the cause of the country. The moment

anything comes in the name of the freedom fighters, either as pension or a bus pass or an educational or a medical facility, they say 'oh', our financial position is very bad. The financial constraints don't allow us to provide anything.' I don'twant to quote what concessions are given to what class of people, how it is done. I have just quoted about the Face Club, about somebody else. How long are they going to live ? I am also at the end of my journey. They are 75 years or 80 years of age. They may not live after 10 years. As one of our friends Sri Ramakrishna Hegde, during his speech said after 4 years there won't be any freedom fighters. I thought he has shortened my life, if he has declared it But,there is truth in the spirit of what he said 10 years maximum we pay,-Afterwards you will not pay: there won't be anybody to take it. So, my request to the Hon'ble Chief Minister, please broaden your mind, broaden your heart,extend your noble services of the state to the people who fought for the State. So, My request is that though the Hon'ble Chief Minister has provided an increment from Rs.300 to 400 last year, he desired it should be Rs.500/- and he made an offer of increasing it to Rs.500/- in an conference in which I was present. They are all very much upset. How is that our own Government does not keep their word. How much are you going to lose on that. 22,000 people are the number that is given may be 300,400 or 500 additions. There are bogus there. After all we are in a society of bogus people with a bogus system. They are also part of it. When lakhs and lakhs people are getting the benefit without having done anything or corrupting the entire body politics of the society and the political structure of the society,- what is the grant this 22,000 people and their families have done not to be recognised to the extent of pension pay, some political pension - you call it as such - I have met people in East Germany. i.e. it was them GDR. I met number of Anti-facist who have been paid with honour. They don't call it a grace. They paid with honour. They get such an wonderful treatment from the State the moment he was told that he is

known as Anti-facist, he fought the Hitler as Nazist - he is given all recognition. I have travelled with them for 20 - 25 days studying the GDR system. Now, unfortunately GDR system is not there; I know it will comeback but for sometime we have to suffer with it. What I am saying is that the recognition of a political sufferer in the cause of the freedom must be there. Mr. Azeez Sait, Hon'ble Minister for Transport is firm in putting down-anybody may give the concessional bus passes. I will not give it. Very nice of him to say it; but those who belong to the freedom fighters fraternity cannot digest that kind of statement. You can limit it to 1,000 km., 2000 km. or 5,000 kms for the whole year. If you can tolerate thousands and thousands, lakhs and lakhs of ticketless travellers, you can tolerate thousands and thousands of conductors who pilfer everything; The Drivers are having share with it; The Inspectors and others loot at the whole KSRTC: you cannot think in terms of providing something for those who have honestly fought for the country. What is the logic, I don't understand. By purchase of tyres, you make millions of rupees;by sale of equipments, you make lot of money; disposal of workshops and in stores, you make lot of money; you buy material worth tens and tens of lakhs of rupees but the material does not reach the stores - the money goes somewhere else and all this is known to everybody. How can you take this stand ? This is very admant stand that we have no money, we cannot give concession. We talk of privatisation as only the answer. Somehow this play of this word has caught the imagination of everybody whoever has never thought of. My experience in the recent days is that the Police Department have a wonderful team of people who are artistes, poets, writers, Sportsmen and people involved in cultural activities. The Department has no money to help them to encourage. Our state Department for Kannada and Culture they can go a little and not beyond. So, my suggestion is, separate provision is made to see that these disciplined forces who have got the capacity to take part of the social and cultural life of our society are given

enough encouragement to see that they make further progress in the matter.

Sir, while talking about the General Administration and officers, I would like the Hon'ble Chief Minister to take serious note of one aspect. Our Bangalore City Corporation tops heavy in its establishment. They don't have enough work except to count time, to collect money and to go home. I have told them number of times even at the highest level during the day do maximum work, give all your service, during night time collect whatever you want in any manner you like. But, the unfortunate part of it is that they want to keep on collecting during the day and night, they would like to spend time elsewhere. So, in such a situation, I don't understand why the State would allow the Commissioner of the Corporation or whoever it is, even the elected body for that matter to add more and more Deputy Commissioners for Revenue. One Deputy Commissioner political masters. If the State fails, you should pinpoint who is accountable to this; who is responsible to this. Instead of finding fault with the bureaucracy who is untrained to handle the public sector industries or the public sector organisation and if he fails to take it over or refuse to go because he does not merit occupying the place who should be responsible for this ? So many suggestion is, always talk about accountability, and responsibility If a public sector executive who is an IAS or IPS officer is incapable of delivering the goods, which he has been given the responsibility, what guarantee if he is placed as Secretary of a Department in any Senior office of responsibility he will do better ? The quality, cha acter, ability, efficiency is consistent with the main whatever place you place him. Unless I don't merit that place I cannot run the office, I want to quit out of it, I would not accept the responsibility which I am not capable of handling but at what cost the public exchequer and whatcost to the public at large and at what cost to the Labour who set to run the public organisation ? When you what to close down, when you want to dis-invest, when you want to hand over

it to somebody else, you have no thought about the life of the poor workers, tens and thousands of them-KIMCO we have an illustration today. We don't know what are you going to do with that - We are dismantling that. Where do they go ? What is to happen to them? Is there any-body feeling for them ? One should have sense of feeling, sensitiveness must be there with regard to the people and as well as the workers with whom so much of labour is there, so much of money is there. So, I suggest that honest efforts are made to see that the right man is placed to the right place and for tne ritht execution for getting a right delivery. If that is not done, I am afraid you will not be able to achieve anything.

I would only appeal to the Hon'ble Chief Minister in respect of assistance to the Government servants. In one of the departments where I found considerable in adequacy in providing the facilities i.e., the Police Department, particularly the Fire Force & the Reserve Police. I am not talking about the Traffic Department or the Law & Order Department, the Crime Department-all of usknow how they can possibly make up whatever they lose by way of remuneration from the Government, but these Reserve Police, the Fire Services people they have no other means except what they draw regularly from their own offices. These Reserve Police as well as Firce Force people when they retire, they have to vacate their quarters; when they vacate where their quarters do they go? I would suggest, on a priority basis, the State should make all efferts and to take steps to see that adequate sites are provided to them sufficiently inadvance so that they can build the houses before they retire and they can go privatisation have also begun to talk. Even our worshipful Mayor has began to talk of privatisation of the community halls of the Banglaore city because we are losing. What we are providing is a matter of civic benefit to the people. What is the service you are going to give if you want to charge people exhorbitantly for everything. So, my request on behalf of the political sufferers and freedom fighters to the Hon'ble

Chief Minister is, please this time when you before make up your mind to reply extend or rather increase it from Rs.400 to Rs.500 and bus pass facility given to a very limited extent so that we give them a token for our love, demonstrate the token of our love.

Now, I am coming to this Public Sector. This monitoring of the performance ofthe public sector enterprises, in depth study - so many things - I don't know. . . I really feel breaking down the moment I see all there things. Who is responsible for this Public Sector to talk in terms of de-investment, to talk in terms of disinvestment, to talk in terms of privatisation. Whose cry is this ? Who is the provocation of this cry ? Who are the people, who established these industries, did the people establish the industry; is there contribution there ? Have the people ready to purchase you material ? Have the people come in the way of your production or your marketing ? Have the people come in the way of your effective administration of your own department? It is absolutely within the control of the bureaucracy; the over-all supervision of the- - - - for Revenue has not enough work. I see him sitting pretty relaxing - So, add more Deputy Commissioners, One Health Officer does not do any work because you send a man who is incapalbe of doing any work, you give him the retirement benefit, or pre-retirement benefit go and have a cushy time. So, you add additional Health Officers one Chief Engineer, you send from here who cannot handle an ordinary clerk. The Clerk dictates to him and to him, add one more Chief Engineer or Additional Chief Engineer, whatever you like to call it. Similarly, we have number of people like that. It is not duplication of work. More than duplication, triplication, multiplication of corruption that is not I am talking for which all these people are kept and paid for; but what I am saying is, where is the need to have an additional Deputy Commissioner ? Deputy Commissioner for Anarchy(A), Deputy Commissioner for Disaster (D), Deputy Commissioner for Robbery (R), Deputy Commissioner for something else and the

Commissioner for commissioning; I really don't understand why do you want to have more officers when you don't require it? You have large number of Assistant Revenue Officers; a large number of Deputy Revenue Officers. It is army of officers and officers; all because me share with you the fact every promotions, every fresh appointments at an important place, does not gather dust, but gathers enough paper weight. Now, my request is, whatever attempt is being made at the level of the Bangalore City Corporation to appoint additional officers please have an immediate check and see that no further additons are made to the exising officers and enforce discipline to see that the officers do their jobs correctly.

This clearing of the backlog for SC/ST vacancies. We have been hearing every day and my hon'ble colleauges have been also raising this question. I don't know when we start clearing it and when you close it, but I know for certain that the SC/ST quota of 18%, 20% whatever is a thing is not being filled. Even when I was the Mayor, I fought tooth and nail and tried my best to see that it is implemented even out of turn, if necessary, but to some extent, I have successful but the compliance is not there. So, I would request that whatever the declarations we make, very piously, are very very sincerely implemented and I appeal to the Chief Minister to see that he takes note of all that I have said with the best of intentions, with the desire to have the best of the administration, to get the best of service to the people who require the most Thank you very much.

+ ಶ್ರೀ ಹೆಚ್.ವಿಶ್ವನಾಥ: (ಕೃಷ್ಣರಾಜಸಾಗರ):- ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಈ ಸದನದ ಮುಂದಿಟ್ಟಿರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತ ಮಾಡುತ್ತಾ, ಯಾವುದೇ ಅಂಕಿಅಂಶಗಳನ್ನು ಅಥವಾ ಗೊಡ್ಡ ದೊಡ್ಡ ಪುಸ್ತಕಗಳನ್ನು ಸಹಾ ಓದದೇ ಒಬ್ಬ ಸಾರ್ವಜನಿಕ ಪ್ರತಿನಿಧಿಯಾಗಿ ಜನರ ಜೊತೆಗೆ ಬೆಳೆದು ಜನರ ಕೆಲಸಕ್ಕೆ ಸರಕಾರಿ ಕಚೇರಿಯಲ್ಲಿ ತಿರುಗಾಟ ಮಾಡುತ್ತಾ ಅವರ ಸಮಸ್ಯೆಗಳನ್ನು ಮತ್ತು ಅವುಗಳ ಪರಿಹಾರದ ಬಗ್ಗೆ ಅಧಿಕಾರಿಗಳ ವರ್ತನೆ ಮತ್ತು ನಮ್ಮ ಆಡಳಿತ ವ್ಯವಸ್ಥೆಯ ದಕ್ಷತೆಯನ್ನು ನಾನು ಪ್ರಾಮಾಣಿಕವಾಗಿ ತಿಳಿಸಬಯಸುತ್ತೇನೆ. ಒಂದು ಸರ್ಕಾರ ಸಾರ್ವಜನಿಕರಿಂದ ಬೊಕ್ಕಸಕ್ಕೆ ಹಣವನ್ನು ತೆರಿಗಯ ಮೂಲಕ ಪಡೆಯುವುದು ಮತ್ತು ಪಡೆದಂತಹ ಹಣವನ್ನು ವಿನಿಯೋಗ ಮಾಡುವುದಾಗಲಿ ತನ್ಮೂಲಕ ಜನಗಳಿಗೆ ಕಲ್ಯಾಣಪರ ಕಾರ್ಯಗಳ ಮೂಲಕ ಅವರನ್ನು ಆರ್ಥಿಕವಾಗಿ ಮೇಲೆತ್ತುವುದಾಗಲಿ ಮತ್ತು

ಎಲ್ಲಾ ಅಂಗಗಳಲ್ಲೂ ಕೂಡ ಇಡೀ ಸಮಾಜವನ್ನು ಸಮೃದ್ಧಗೊಳಿಸುವುದರ ಮೇಲೆ ಹೋಗುತ್ತದೆ. ಇದನ್ನು ಕೂಡ ಜನ ಅಳೆಯುತ್ತಾರೆ. ಆದರೆ ಈವತ್ತು ಸರ್ಕಾರ ಸಾರ್ವಜನಿಕ ಬೊಕ್ಕಸದ ಮೂಲಕ ಹಲವಾರು ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ಘೋಷಿಸಿದೆ. ಸಾಮಾಜಿಕ ಹಿನ್ನೆಲೆಯ ಸಿದ್ಧಾಂತದಲ್ಲಿ ಬಂದಂತಹ ಮುಖ್ಯ ಮಂತ್ರಿ ಮಾನ್ಯ ಬಂಗಾರಪ್ಪನವರು ಹಲವಾರು ಕಾರ್ಯಕ್ರಮಗಳನ್ನು ಈ ರಾಜ್ಯದ ಜನರಿಗೆ ಘೋಷಿಸಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳೂ ಕೂಡ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ಬರಬೇಕೆಂದರೆ ಅದನ್ನು ಅನುಷ್ಠಾನ ಮಾಡುವಂತಹ ಅಧಿಕಾರಿಗಳಲ್ಲಿ ದಕ್ಷತೆ ಇರಬೇಕು, ಅದು ಅವಶ್ಯಕ. ನಾವು ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಕೊಟ್ಟು ಅಧಿಕಾರಿಗಳಲ್ಲಿ ಸರಕಾರಕ್ಕಿರುವ ಇಂಗಿತ ಮನೋಭೂಮಿಕೆ ಇಲ್ಲದಿದ್ದರೆ ಆ ಕಾರ್ಯಕ್ರಮ ಕೊಟ್ಟು ಪ್ರಯೋಜನವಾಗುವುದಿಲ್ಲ. ಆದ್ದರಿಂದ ಸರ್ಕಾರದ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನ ಆಗಬೇಕೆಂದರ ಯಾವ ವರ್ಗದ ಸಲುವಾಗಿ ಯಾರ ಸಲುವಾಗಿ ನಾವು ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೋ ಅದು ಅವರಿಗೆ ತಲುಪಬೇಕಾದ ಆ ನಮ್ಮ ಕಾರ್ಯಾಂಗದ ಅಧಿಕಾರಿಗಳು ಚೆನ್ನಾಗಿ ಕೆಲಸಮಾಡಬೇಕು. ಆ ಅಧಿಕಾರಿಶಾಹಿಯನ್ನು ಸರಿಯಾದ ವ್ಯವಸ್ಥೆಯಲ್ಲಿ ಇಡುವವರು ಯಾರೆಂದರೆ ಶಾಸಕಾಂಗ ಮತ್ತು ಸರ್ಕಾರದಲ್ಲಿ ಆಡಳಿತ ಮಾಡುವವರು. ಅದು ಬಿಗಿ ತಪ್ಪಿದರೆ ಸಂಪೂರ್ಣವಾಗಿ ನಾಶವಾಗುವುದನ್ನು ನಾವು ಕಾಣುತ್ತೇವೆ. ಇವತ್ತು ನಮ್ಮ ಆಶ್ರಯ, ವಿಶ್ವ, ಆರಾಧನಾ, ಹನಿತೆನೆ ಹೀಗೆ ನೂರೆಂಟು ಕಾರ್ಯಕ್ರಮಗಳಿವೆ. ಒಂದು ಆಶ್ರಯ ಕಾರ್ಯಕ್ರಮ ತೆಗೆದುಕೊಳ್ಳಿ. ಏನೂ ಇಲ್ಲದೇ ಇರುವ ಒಬ್ಬ ಬಡವನಿಗೆ ಅಥವಾ ತನ್ನನ್ನು ಹೂಳುವುದಕ್ಕೂ ಕೂಡ ಮೂರಡಿ ಆರಡಿ ಜಾಗ ಇಲ್ಲದೇ ಇರುವ ಒಬ್ಬ ಬಡವನಿಗೆ ಅವನ ಜೀವನದಲ್ಲಿ 20X30ಸೈಟ್ ಕೊಟ್ಟರೆ ಅವನು ಬೆಳಿಗ್ಗೆ ಎದ್ದು ಒಂದು ಬೀಡಿ ಹಚ್ಚಿ ಒಂದು ಸಲ ತಿರುಗಿ ನೋಡುತ್ತಾನೆ, ನನ್ನ ಆಸ್ತಿ ಇದೆ ಎಂದು. ಆದರ ಮೇಲೊಂದು ಮನೆ ಕಟ್ಟಿಕೊಂಡು ತನ್ನ ಮಕ್ಕಳು ಮರಿ ಕೂಡ ಸಂತೋಷವಾಗಿ ವಾಸಮಾಡಬೇಕೆಂದು ಮನಸ್ಸು ಬರುತ್ತದೆ. ಮತ್ತೆ ಅವನಿಗೆ ನಮ್ಮ ಅಭ್ಯುದಯ ಕಾರ್ಯಕ್ರಮಗಳ ಮೂಲಕ ಹಸು, ಎಮ್ಮೆ, ಕೋಳಿ ಎಲ್ಲಾ ಕೊಟ್ಟು ಅವನನ್ನು ಆರ್ಥಿಕವಾಗಿ ಸ್ವಾವಲಂಬನೆ ಮಾಡುವುದಕ್ಕೆ ಮತ್ತು ಸಾಮಾಜಿಕವಾಗಿ ಕೂಡ ಅವನು ಎಲ್ಲರಂತೆ ಸಮಾನವಾಗಿ ಬದುಕಬೇಕೆಂಬುದು ಸರ್ಕಾರದ ನೀತಿ. ಆಗಿರುವಾಗ ಅದನ್ನು ಪಾಲನೆ ಮಾಡುವ ಅಧಿಕಾರಿಯ ಮನೋಭೂಮಿಕೆ ಹೇಗಿದೆ ಎಂಬುದನ್ನು ನೋಡಬೇಕು. ಏಕೆಂದರೆ ಒಂದು ದೊಡ್ಡ ಮಹಡಿ ಮನೇಲಿರುವವನಿಗೆ, ಸದಾ ಕಾರ್‌ನಲ್ಲಿ ತಿರುಗುವಂಥವನಿಗೆ ಸದಾ ವಿಸ್ಕಿ ಕುಡಿದು ಮೋಜು ನಡೆಸುವವನಿಗೆ ಆ ಬಡವನ ಕಷ್ಟ ಅರ್ಥವಾಗ್ತದಾ ? ಅವನಿಗೆ ಆ ಸಣ್ಣ ಮನೆಯಲ್ಲಿ ಎಷ್ಟು ಶುಚಿಯಾಗಿರ್ತಾನೆ ಎನ್ನುವುದು ಅರ್ಥವಾಗ್ತದಾ ? ಅದನ್ನು ಅರ್ಥೈಸಿಕೊಳ್ಳುವ ಅಧಿಕಾರಿಗಳ ಆವಶ್ಯಕತೆ ಇದೆ. ಆಗಲೇ ನಾವು ಜಾರಿಗೆ ಕೊಟ್ಟ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬರುತ್ತವೆ. ನಾನು ಕಳೆದ ಸಾಲಿನಲ್ಲೂ ಕೂಡ ಮುಖ್ಯಮಂತ್ರಿಯವರ ಬೇಡಿಕೆ ಮೇಲೆ ಮಾತನಾಡುತ್ತಾ ನನ್ನ ಒಂದು ಬೇಡಿಕೆಯನ್ನು ಮುಂದಿಟ್ಟೆ. ಆಡಳಿತದಲ್ಲಿ ಸುಧಾರಣೆ ತರುವ ಬಗ್ಗೆ ನಾವು ಸಲಹೆ ಕೊಡ್ತೇವೆ, ವಿಶೇಷವಾಗಿ ನೀವು ಒಂದು ವಾರದ ಕಾಲದ ವಿಧಾನಸಭೆಯನ್ನು ಕರೆಯಬೇಕು. ನಾವು ಇದನ್ನು ನಮ್ಮ ಅನುಭವದಿಂದ ಹೇಳುತ್ತಿದ್ದೇವೆ. ಆದರೆ ಈಗ ಆಡಳಿತದಲ್ಲಿ ಕೆಲವು ಸುಧಾರಣೆಗಳು ತರುವ ಬಗೆ ಪ್ರಯತ್ನ ಮಾಡಿದ್ದಾರೆ. ಈ ಅಧಿಕಾರಿಗಳನ್ನು ತಿದ್ದುವ ಮತ್ತು ಅವರ ತಪ್ಪಿಗೆ ಶಿಕ್ಷೆ ಕೊಡುವ ವಿಚಾರಗಳೂ ಸೇರಿವೆ. ಅಧಿಕಾರಿಯಾಗಲಿ, ರಾಜಕಾರಣಿಯಾಗಲಿ, ಇದು ನನ್ನ ಕರ್ತವ್ಯವೆಂದು ಮಾಡತಕ್ಕವರು ಬಹುಶಃ ನೂರಕ್ಕೆ 10 ಜನ ಇರಬಹುದು. ಇನ್ನು 90 ಜನರು

ಹೇಗೆ ಕೆಲಸ ಮಾಡುತ್ತಾರೆ ಎಂದರೆ ಹೆದರಿಕೆಯಿಂದ ಮಾಡಬೇಕಾಗುತ್ತದೆ. ಇದನ್ನು ಮಾಡದಿದ್ದರೆ ಇನ್ನು ಹೇಗೆ ಆಗುತ್ತದೋ ? ಬಹುಶ: 1976ನೇ ಇಸವಿಯಲ್ಲಿ ಈ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಲ್ಲಿ ಇದ್ದಾಗ ಆದಂಥಹ ಕೆಲಸಗಳು ಈತನಕ ಕೂಡ ಆಗಲಿಕ್ಕೆ ಸಾಧ್ಯನಾಗಲಿಲ್ಲ. ಏಕೆಂದರೆ ತುರ್ತು ಪರಿಸ್ಥಿತಿಯ ಕಾಲದಲ್ಲಿ ನನ್ನನ್ನು ಏನು ಮಾಡುತ್ತಾರೋ , ನಾನು ಕೆಲಸ ಮಾಡದೇ ಹೋದರೆ, ಆ ಚಾಟಿಯನ್ನು ಇಟ್ಟುಕೊಂಡು ನಿಂತಾಗ ಹೆದರಿ ಕೆಲಸಗಳು ಆಗುತ್ತಿತ್ತು. ಇವತ್ತು ಏನು ಆಗಿದೆ ? ಅಂದರೆ ಮತ್ತೆ ತುರ್ತು ಪರಿಸ್ಥಿತಿಯನ್ನು ಅಪೇಕ್ಷೆ ಮಾಡುವುದು ಅಲ್ಲ. ಅಂದರೆ ನನ್ನ ಇಂಗಿತ ಆಗ ಹೆದರಿಕೆಯಿಂದ ಜನ ಕೆಲಸ ಮಾಡತಕ್ಕಂಥದ್ದು ಇತ್ತು. ಒಬ್ಬ ರಾಜಕಾರಣಿ ನನಗೆ ಚುನಾವಣೆ ಮುಂದಿನ ಚುನಾವಣೆಯಲ್ಲಿ ಎಲ್ಲಿ ಜನ ಓಟು ಹಾಕುವುದಿಲ್ಲವೋ ಎಂದು ಹೆದರಿ ಕೆಲಸ ಮಾಡುತ್ತಿದ್ದರು. ನಾವೂ ಕೂಡ ಕೆಲಸ ಮಾಡಬೇಕು ಎಂದು ಅವರು ಮಾಡುತ್ತಾರೆ. ಆದುದರಿಂದ ಈ ಅಧಿಕಾರಿಗಳನ್ನು ತಿದ್ದತಕ್ಕಂಥ ಅವರು ಮಾಡಿರತಕ್ಕಂಥ ತಪ್ಪಿಗೆ ಶಿಕ್ಷೆಯನ್ನು ಕೊಡತಕ್ಕಂಥದ್ದು ಅದಕ್ಕೆ ನಮ್ಮಲ್ಲಿ ಎರಡು ವಿಧಗಳನ್ನು ಇಟ್ಟುಕೊಂಡಿದ್ದೇವೆ. ಒಂದು ಲೋಕಾಯುಕ್ತ, ಈ ಲೋಕಾಯುಕ್ತ ಯಾವ ಅಧಿಕಾರಿ ಭ್ರಷ್ಟಾಚಾರದಲ್ಲಿ ಮುಳುಗಿರುತ್ತಾನೋ ಮತ್ತು ಯಾವ ಅಧಿಕಾರಿ ಸಿಕ್ಕಾಪಟ್ಟೆ ಆಸ್ತಿ ಮಾಡಿ ಮೆರೆಯುತ್ತಾನಲ್ಲಾ, ಅವನನ್ನು ಬಲಿ ಹಾಕುವುದಕ್ಕೋಸ್ಕರವಾಗಿ ಈ ಲೋಕಾಯುಕ್ತ ಇದೆ. ಈ ಲೋಕಾಯುಕ್ತಕ್ಕೆ ನಾವು ಯಾರನ್ನು ಹಾಕುತ್ತೇವೆ ? ನಮ್ಮ ಹತ್ತಿರ ಬರುತ್ತಾರೆ. ಸಬ್-ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ಸ್‌ಗಳು ಇವರೆಲ್ಲರೂ ಬರುತ್ತಾರೆ. ಸಾರ್ , ನಾನು ಮೂರು ವರ್ಷ ಆಯಿತು, ಲೋಕಾಯುಕ್ತದಲ್ಲೇ ಇದ್ದೇನೆ, ನನಗೆ ಎಲ್ಲಿಯಾದರೂ ಒಳ್ಳೆಯ ಸ್ಟೇಷನನ್ನು ಕೊಡಿಸಿಕೊಡಿ ಎಂದು ಶಾಸಕರ ಭವನಕ್ಕೆ ಬಂದು ಕೇಳುತ್ತಾರೆ. ಅಂದರೆ ಅದು ಕೆಲಸಕ್ಕೆ ಬಾರದ ಜಾಗ ಎಂದು ಅವರು ತಿಳಿದುಕೊಂಡಿದ್ದಾರೆ. ಏನೋ ಏತಕ್ಕೋ ಹಾಕಿದ್ದಾರೆ ಅವನನ್ನು ಅಲ್ಲಿಗೆ. ಅಂದರೆ ಅವನ ಮನೋಭೂಮಿಕೆ ಆ ರೀತಿ ಇದ್ದರೆ, ಲೋಕಾಯುಕ್ತದ ಒಬ್ಬ ಅಧಿಕಾರಿಯ ಮನೋಭೂಮಿಕೆ ಮತ್ತು ಒಬ್ಬ ಕಳ್ಳನನ್ನು ಹಿಡಿಯುವುದಕ್ಕೆ ಇನ್ನೊಬ್ಬ ಕಳ್ಳನನ್ನು ಅಲ್ಲಿ ಹಾಕಿದರೆ, ಅದು ಲೋಕಾಯುಕ್ತವಾಗಲಾರದು. ಮತ್ತು ಇದರಿಂದ ಯಾವ ಸಾಧನೆಯೂ ಕೂಡಾ ಆಗಲಾರದು ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಎರಡನೆಯದಾಗಿ, ದಕ್ಷತೆ ಪರಿಶೋಧನೆ ಮತ್ತು ಜಾಗೃತಿ ವಿಭಾಗ ಎಂದು ಕೂಡಾ ಮಾಡಿದ್ದಾರೆ. ಒಂದು ಭ್ರಷ್ಟಾಚಾರದಲ್ಲಿ ಅವನನ್ನು ಹಿಡಿಯತಕ್ಕಂಥದ್ದು, ಇನ್ನೊಂದರಲ್ಲಿ ಅವನು ಅಧಿಕಾರಿ ಅದಕ್ಷನಾಗಿದ್ದರೆ, ಕರ್ತವ್ಯದಲ್ಲಿ ಲೋಪವಾಗಿದ್ದರೆ, ಕರ್ತವ್ಯದಲ್ಲಿ ಚ್ಯುತಿಯನ್ನು ಮಾಡಿದ್ದರೆ ಅಂಥವರನ್ನು ಹಿಡಿದು ಬಲಿ ಹಾಕುವುದಕ್ಕೆ ಈ ದಕ್ಷತೆ ಪರಿಶೋಧನಾ ಇಲಾಖೆ ಎಂದು ಕೂಡ ಮಾಡಿದ್ದಾರೆ. ಅದು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತದೋ ಅದು ಯಾರಿಗೂ ಕೂಡಾ ಗೊತ್ತಿರಲಾರದು. ದಕ್ಷತೆ ಪರಿಶೋಧನಾ ಇಲಾಖೆಯವರು ಹೊರಗಡೆ ಒಂದು ಡಬ್ಬವನ್ನು ಇಟ್ಟಿದ್ದಾರೆ, ನಿಮ್ಮ ಸಲಹೆಗಳನ್ನು ಅದರಲ್ಲಿ ಹಾಕಿ ಎಂದು ಇದೆ. ಈಗ ನೋಡುತ್ತಿದ್ದೇವೆ. ಅದರಿಂದ ಯಾವ ಉದ್ದೇಶದ ಸಲುವಾಗಿ ನಾವು ಈ ಎರಡು ಇಲಾಖೆಗಳನ್ನು ಇಟ್ಟುಕೊಂಡಿದ್ದೇವೋ, ಅವುಗಳು ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡುವುದಕ್ಕೆ ಆಗುತ್ತಿಲ್ಲ. ಮಾಡುವುದಕ್ಕೆ ಆಗುತ್ತಿಲ್ಲ ಎಂದರೆ ಅಲ್ಲಿ ಸರಿಯಾದಂಥ ಅಧಿಕಾರಿಗಳನ್ನು ಕಠಿಣವಾದಂಥ ಅಧಿಕಾರಿಗಳನ್ನು ಹಾಕಿ ಈ ಇಲಾಖೆಗಳನ್ನು ಬಲ ಮಾಡಿ ತನ್ಮೂಲಕ ಆಡಳಿತದಲ್ಲಿ ಶಿಸ್ತನ್ನು, ದಕ್ಷತೆಯನ್ನು ತರುವುದಕ್ಕೆ ನಾವು ವ್ಯವಸ್ಥೆ ಯನ್ನು ಮಾಡಬೇಕಾಗಿದೆ. ಮತ್ತೆ, ನಮ್ಮ ಈ ಆಡಳಿತದ ವ್ಯವಸ್ಥೆ, ನಾನು ಮೊದಲೇ ಹೇಳಿದ್ದೇನೆ. ಯಾವ ಕಾರ್ಯಕ್ರಮಗಳೂ ಕೂಡಾ ನಮಗೆ ಸರಿಯಾಗಿ ಆಗಬೇಕು ಎಂದು

ಹೇಳಿ ಈ ವ್ಯವಸ್ಥೆ ಸರಿಯಾಗಬೇಕು. ಇವತ್ತು ವ್ಯವಸ್ಥೆ ಏನು ಇದೆ, ಯಾರೋ ಬ್ರಿಟಿಷರ ಕಾಲದ ವ್ಯವಸ್ಥೆ ಇವತ್ತಿಗೂ ಮುಂದುವರೆಯುತ್ತಿದೆ. ಒಬ್ಬರ ಮೇಲೆ ಒಬ್ಬರು ಸೂಪರ್‌ವಿಷನ್, ಇನ್ನೊಬ್ಬರ ಮೇಲೆ ಇನ್ನೊಬ್ಬರು ಸೂಪರ್‌ವಿಷನ್. ಇವತ್ತು ಇಂಡಿಯನ್ ಅಧಿಕಾರಿಗಳು ಇದರಲ್ಲಿ ಒಬ್ಬರನ್ನು ಒಬ್ಬರು ಹಿಡಿಯುವುದಕ್ಕೋಸ್ಕರ ಇತ್ತು. ಇವತ್ತು ಹೇಗಿದೆ ಎಂದರೆ ನಾನು ನಮ್ಮ ಊರಿನ ರೆವಿನ್ಯೂ ಇನ್ಸ್‌ಪೆಕ್ಟರ್ ಮೇಲೆ ಕಂಪ್ಲೇಂಟನ್ನು ಕೊಟ್ಟರೆ ಕಂದಾಯ ಮಂತ್ರಿಗಳಿಗೆ, ಕಂದಾಯ ಮಂತ್ರಿಗಳು ರೆವಿನ್ಯೂ ಕಮೀಷನರ್‌ಗೆ ಬರೆಯುತ್ತಾರೆ. ರೆವಿನ್ಯೂ ಕಮೀಷನರ್ ಪಿಎಸ್, ಡೆಪ್ಯುಟಿ ಸೆಕ್ರೆಟರಿ, ಅಂಡರ್ ಸೆಕ್ರೆಟರಿ, ಡಿವಿಜನಲ್ ಕಮೀಷನರ್, ಡೆಪ್ಯುಟಿ ಕಮೀಷನರ್, ಅಸಿಸ್ಟೆಂಟ್ ಕಮೀಷನರ್ ತಹಶೀಲ್ದಾರ್ ಮತ್ತು ಅದು ಕೊನೆಗೆ ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಬರುತ್ತದೆ. ರೆವಿನ್ಯೂ ಇನ್ಸ್‌ಪೆಕ್ಟರ್ ಮೇಲೆ ಕಂಪ್ಲೇಂಟನ್ನು ಕೊಟ್ಟರೆ ಅವನ ಹತ್ತಿರವೇ ಅದು ಹೋಗುತ್ತದೆ. ಮತ್ತೆ ತಿರುಗಿ ಅವನಿಂದ ಬರುವುದಿಲ್ಲ ಇದು ಎಷ್ಟು ವಿಳಂಬವಾಗುತ್ತದೆ ಮತ್ತು ಇದರ ಜೊತೆಗೆ ಇದರಿಂದ ಭ್ರಷ್ಟಾಚಾರ ಕೂಡ ಜಾಸ್ತಿಯಾಗುತ್ತದೆ. ಹೀಗೆ ಪ್ರತಿಯೊಂದು ಹಂತದಲ್ಲೂ ಕೂಡಾ ಎಲ್ಲಾ ಟೇಬಲ್‌ಗಳನ್ನೂ ಕೂಡ ನೋಡುತ್ತಾ ಹೋಗಬೇಕಾಗುತ್ತದೆ.

ಶ್ರೀಮತಿ ಮೋಟಮ್ಮ: ಅವನು ಸಸ್ಪೆಂಡ್ ಆಗಿದ್ದಾನೋ, ಡಿಸ್‌ಮಿಸ್ ಆಗಿದ್ದಾನೋ ಎಂದು ಹೇಳಲಿಲ್ಲವಲ್ಲಾ?

ಶ್ರೀ ಹೆಚ್.ವಿಶ್ವನಾಥ್: ಆದ್ದರಿಂದ ಈ ಆರೋಹಣ ಅವರೋಹಣ ಪದ್ಧತಿ ತಪ್ಪಬೇಕು. ನೇರವಾಗಿ ಕೆಲಸಗಳು ಆಗಬೇಕು. ಮೊನ್ನೆ ಒಂದು ನನಗೆ ಎಕ್ಸ್‌ಪೀರಿಯೆನ್ಸ್ ಆಯಿತು. ಅದಕ್ಕೆ ನಾನು ಹೇಳಿದ್ದು, ಅನುಭವ ಆಗಬೇಕು ಇದೆಲ್ಲಾ ಎಂದು. ನಮ್ಮ ಊರಿನಲ್ಲಿ ಒಂದು 35 ಲಕ್ಷ ರೂಪಾಯಿಯ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಬರೆದದ್ದು ಅವರಿಂದ ಆರ್.ಡಿ.ಪಿ.ಆರ್ ಸೆಕ್ರೆಟರಿಗೆ ಹೋಯಿತು, ಅಲ್ಲಿಂದ ಡಿ.ಎಸ್.ಗೆ ಹೋಯಿತು, ಡಿ.ಎಸ್.ಗೆ ಹೋಯಿತು, ಡಿ.ಎಸ್‌ಯಿಂದ ಅಂಡರ್ ಸೆಕ್ರೆಟರಿ, ಅಂಡರ್-ಸೆಕ್ರೆಟರಿಯಿಂದ ಜಿಲ್ಲಾಪರಿಷತ್ತು, ಅಲ್ಲಿಂದ ನಮ್ಮ ಊರಿನ ಇಂಜಿನಿಯರ್‌ಗೆ ಹೋಗಿ ಅಲ್ಲಿ ಪ್ಲಾನ್ ಎಸ್ಟಿಮೇಟ್ ಮಾಡಿ ತಿರುಗಿ ಪುನಃ ವಾಪಸ್ಸು ಬಂತು. ಅಲ್ಲಿಂದ ಬಂದಿದ್ದು ಪುನಃ ಎಲ್ಲಿಗೆ ಹೋಗುತ್ತದೆ ಎಂದರೆ ಜಿಲ್ಲಾಪರಿಷತ್ತಿನಲ್ಲಿರುವ ಪ್ಲಾನಿಂಗ್ ಮತ್ತು ಫೈನಾನ್ಸ್‌ಗೆ ಹೋಗುತ್ತದೆ. ತಿರುಗಿ ಅಲ್ಲಿಂದ ಬಂತು. ನಂತರ ಇಲ್ಲಿಯ ಫೈನಾನ್ಸ್ ಕಮೀಷ್‌ನರ್, ಅಡಿಷ್‌ನಲ್ ಫೈನಾನ್ಸ್ ಕಮೀಷನರ್, ಡಿ.ಎಸ್, ಅಂಡರ್ ಸೆಕ್ರೆಟರಿ ಇವರೆಲ್ಲರೂ ನೋಡಿದ ಮೇಲೆ ಒಪ್ಪಿಗೆ ಕೊಟ್ಟರು. ಒಪ್ಪಿಗೆ ಕೊಟ್ಟ ಮೇಲೆ ದುಡ್ಡನ್ನು ಬಿಡುಗಡೆ ಮಾಡಿ ಎಂದರೆ ಆರ್.ಡಿ.ಪಿ.ಆರ್.ನ ಡಿ.ಎಸ್. ರವರು ಒಂದು ಸರ್ಕಾರದ ಆದೇಶವನ್ನು ಇದಕ್ಕೆ ಹೊರಡಿಸಬೇಕು ಎಂದರು. ಮತ್ತೆ ಸರ್ಕಾರದ ಆದೇಶವಾಗಿ ಇಲ್ಲಿಗೆಲ್ಲಾ ಬರಬೇಕು. ಹೀಗೆ ಪ್ರತಿ ಹೆಜ್ಜೆಗೂ ಕೂಡ ಹುಡುಕಿಕೊಂಡು ಒಬ್ಬ ಶಾಸಕ ಕುಡಿಯುವ ನೀರಿನ ವ್ಯವಸ್ಥೆಗಾಗಿ, ಸಾರ್ವಜನಿಕ ಕೆಲಸಕ್ಕಾಗಿ, ಈ ರೀತಿ ತಿರುಗುವಂತಹ ವ್ಯವಸ್ಥೆ ಇದ್ದರೆ ನೀವು ಕುಡಿಯುವ ನೀರಿನ ಸಲುವಾಗಿ ಸಾವಿರ ಕೋಟಿ ರೂಪಾಯಿ ಇಟ್ಟರೂ ಕೂಡ ಸರಿಯಾದ ರೀತಿಯಲ್ಲಿ ಖರ್ಚಾಗುವುದಿಲ್ಲ. ಅದರಲ್ಲಿ ಡ್ರಿಂಕಿಂಗ್ ವಾಟರ್‌ಗೆಂದು 200 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. 200 ಲಕ್ಷ ರೂಪಾಯಿಗಳನ್ನು ಕೊಟ್ಟು ಒಂದು ವರ್ಷವಾಯಿತು. ನೀವು ನನಗೆ ಮೊನ್ನೆ 11.5 ಲಕ್ಷ ರೂಪಾಯಿಗಳನ್ನು ಕೊಟ್ಟ ಮೇಲೆ ಇನ್ನೂ 10 ಲಕ್ಷ ಉಳಿದಿದೆ. ಕುಡಿಯುವ ನೀರಿನ ದುಡ್ಡಿಗೆ ನಾವು ಎಷ್ಟು ಜನ ಶಾಸಕರು ಹಾಹಾಕಾರ ಮಾಡುತ್ತಿದ್ದೇವೆ. ಆದರೆ ಈ ವ್ಯವಸ್ಥೆಯಿಂದ , ಈ ವಿಳಂಬ ನೀತಿಯಿಂದ ಇವತ್ತು ನಮ್ಮ ಕಾರ್ಯಕ್ರಮಗಳು ಕುಂಠಿತವಾಗುತ್ತಿವೆ. ಏನೋ ಅಧಿಕಾರಿಗಳಾದವರು

ಯಾರೋ ಪುಣ್ಯಾತ್ಮರು ಇದ್ದು ಚಕ ಚಕ ಚಕ ಹೋಪರೆ ಸರಿ, ಅದನ್ನು ಬಿಟ್ಟು ಅದಕ್ಕೆ ಒಂದು ಕೊಕ್ಕೆ ಹಾಕಿ ವಾಪಸ್ಸು ಕಳುಹಿಸಿದಗೆ ಮುಗಿದೇ ಹೋಯಿತು. ಏಕೆಂದರೆ ಕೊಕ್ಕೆ ಹಾಕುವವರು ಯಾರು? ಕೊಕ್ಕೆ ಹಾಕುವವರಿಗೆ ಇದೆಲ್ಲಾ ಅರ್ಥವಾಗುವುದಿಲ್ಲ. ದೊಡ್ಡ ಮಹಡಿ ಮನೆಯಲ್ಲಿ ಕುಳಿತಿರುವ ಅಧಿಕಾರಿಗೆ ಆಶ್ರಯ ಯೋಜನೆಯ ಕೆಳಗೆ 10 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಸೈಟುಗಳನ್ನಾಗಿ ಮಾಡಿಕೊಡಿ ಅಂದರೆ ಅವರು ಹುಟ್ಟುವಾಗಲೇ ಬಾಯಲ್ಲಿ ಬೆಳ್ಳಿ ಚಮಚೆ ಇಟ್ಟುಕೊಂಡು ಬಂದಿರುವ ಐ.ಎ.ಎಸ್ ಅಧಿಕಾರಿಯಾಗಿದ್ದರೆ, ಅವರಿಗೆ ಈ ಬಡವನ ಕಷ್ಟ ಅರ್ಥವಾಗಬೇಕಲ್ಲಾ? ಜಮೀನನ್ನು ಸ್ವಾಧೀನ ಮಾಡಿಕೊಂಡು ಬೇಗ ಬಡವರಿಗೆ ಸೈಟನ್ನು ವಿಂಗಡಿಸಿ ಕೊಡಬೇಕೆಂದು ಸರ್ಕಾರ ಹೇಳಿದೆ. ಆದರೆ ಅದರಂತೆ ಕೆಲಸಗಳು ಆಗುತ್ತಿಲ್ಲ. ಆದ್ದರಿಂದ ಇಂದಿನ ಆಡಳಿತದ ವ್ಯವಸ್ಥೆ ಸರಿಯಾಗಬೇಕಾದರೆ ಮೂಲಾಗ್ರವಾಗಿ ಬದಲಾವಣೆಯಾಗಬೇಕು. ನಾವು 224 ಜನ ಶಾಸಕರು ಇದ್ದೇವೆ. ಈ ಕಡೆ ಪತ್ರಿಕಾ ಬಳಗ ಇದೆ. ಆ ಕಡೆ ನಮ್ಮ ಅಧಿಕಾರ ಶಾಹಿ ಇದೆ. ಇಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ರೀತಿಯ ಅನುಭವ ಇದೆ. ಜನರ ಜೊತೆಗೆ ಬೆರೆತು ಅದರಿಂದ ಬಂದಿರುವ ಅನುಭವವನ್ನು ಇಲ್ಲಿ ಹೇಳುತ್ತಿದ್ದೇನೆ. ನಾವು ಬೇಕಾದಷ್ಟು ಕಾನೂನುಗಳನ್ನು ಮಾಡಿದ್ದೇವೆ. ಅದನ್ನು ಅನುಭವಿಸುತ್ತಾ ಅನುಭವಿಸುತ್ತಾ ಹೋಗುತ್ತಾ ಹೋಗುತ್ತಾ ತಿದ್ದುಪಡಿ ಮಾಡುತ್ತಾ ಹೋಗುತ್ತಿದ್ದೇವೆ. ಇಷ್ಟೆಲ್ಲಾ ಮಾಡಿದರೂ ಕೂಡ ಈ ಆಡಳಿತ ವ್ಯವಸ್ಥೆಯನ್ನು ನಾವು ಇಲ್ಲಿಯತನಕ ಬದಲಾವಣೆ ಮಾಡಿಕೊಂಡಿಲ್ಲ. ಇಷ್ಟೊಂದು ಅನುಭವವನ್ನು ಪಡೆದುಕೊಂಡು ಅನುಭಾವಿಕ ಮಾರ್ಗದರ್ಶಿಯಾಗಿ ಅಂದರೆ ಒಬ್ಬ ಅಧಿಕಾರಿಯಾಗಲಿ, ಅಥವಾ ಒಬ್ಬ ರಾಜಕಾರಣಿಯಾಗಲಿ, ಅದಕ್ಕೆ ಒಂದು ಮಾತನ್ನು ತಮಗೆ ಹೇಳಬೇಕೆಂದರೆ ಎ.ಪಿ.ವೆಂಕಟೇಶ್ವರನ್ a senior bureaucrat in the External Affairs Ministry in the Union Govt., He was impeached by Mr.Rajiv Gandhi, the then Prime Minister . . . . . .ಅವನು ಈಚೆಗೆ ಬಂದ, ಪ್ರೆಸ್‌ನವರೆಲ್ಲಾ ಇದ್ದರು. Yes Mr.Venkateswaran, What is your reaction for your impeachment? ಅಂತ ಹೇಳಿದರು. ಅದಕ್ಕೆ ಅವನು ಒಂದು ಮಾತಿನಲ್ಲಿ ಹೇಳಿದ;ಏನೆಂದರೆ Sir, a man can acquire beauty and complexion by inheritance, a man can acquire property by inheritance, but a man cannot acquire experience by inheritance. ಎಂದು; ಒಬ್ಬ ವ್ಯಕ್ತಿ ತನ್ನ ತಂದೆತಾಯಿಗಳಿಂದ ತನ್ನ ಬೆಡಗುಬಿನ್ನಾಣಗಳನ್ನು ಪಡೆಯಬಲ್ಲ, ಒಬ್ಬ ವ್ಯಕ್ತಿ ತನ್ನ ತಂದೆ ತಾಯಿಗಳಿಂದ ಅನುವಂಶಿಕವಾಗಿ ಆಸ್ತಿಯನ್ನು ಪಡೆಯಬಲ್ಲ, ಆದರೆ ಒಬ್ಬ ವ್ಯಕ್ತಿ ಅನುವಂಶಿಕವಾಗಿ ಅನುಭವವನ್ನು ಪಡೆಯಲಾರ. ಅಂದರೆ ಶ್ರೀಮತಿ ಇಂದಿರಾಗಾಂಧಿಯವರಿಗೆ ಅನುಭವ ಇತ್ತು, ಈಗ ಇಲ್ಲ ಅನ್ನತಕ್ಕ ಮಾತನ್ನು ಹೇಳಿದೆ. ಅದು ಎಷ್ಟು ಸತ್ಯ ? ಹಿಂದೆ ಬಸವಣ್ಣನವರ ಕಾಲದಿಂದಲೂ ನಾವು ನೋಡಿದ್ದೇವೆ. ಅನುಭವ ಮಂಟಪದಲ್ಲಿ ಕುಳಿತು ಚರ್ಚೆ ಮಾಡಿ ನಂತರ ಜನಕ್ಕೆ ಒಳ್ಳೆಯದನ್ನು ಮಾಡಿತ್ತಿದ್ದಂತಹ ಬಿಜ್ಜಳನ ಕಾಲದ ಮಹಾಮಂತ್ರಿ ಭಕ್ತಿ ಭಂಡಾರಿ ಬಸವಣ್ಣನವರ ಕಾಲದಿಂದಲೂ ನೋಡುತ್ತಿದ್ದೇವೆ. ಆದ್ದರಿಂದ ನಮ್ಮ ಅನುಭವವನ್ನು ಇಲ್ಲಿ ಹೇಳಿ, ತನ್ಮೂಲಕ ಈ ಆಡಳಿತಕ್ಕೆ ಆಮೂಲಾಗ್ರವಾದ ಬದಲಾವಣೆ ಆಗಬೇಕೆಂದು ನಾವೆಲ್ಲರೂ ಕೂಡ ಸಲಹೆಯನ್ನು ಮಾಡುತ್ತಿದ್ದೇವೆ. ಸರ್ಕಾರ ಏನೂ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ ತನ್ನ ಈ ಅಧಿಕಾರದ ಅವಧಿಯಲ್ಲಿ ಈ ಆಡಳಿತದ ಸುಧಾರಣೆ ಯನ್ನು ತರತಕ್ಕಂಥ ಕ್ರಮವನ್ನು ಮಾಡಿತು. ಆಡಳಿತ ಸುಧಾರಣೆಗೆಂದು ನೇಮಕವಾದಂಥ

ಸಮಿತಿಯ ವರದಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ "Caste leads to corruption" ಆದುದರಿಂದ, ಯಾರೇ ಮಂತ್ರಿ ಮಹೋದಯರಾಗಲಿ, ಯಾರೇ ಹಿರಿಯ ಅಧಿಕಾರಿಗಳಾಗಲಿ ತಮ್ಮ ಆಪ್ತ ಸಿಬ್ಬಂದಿಯನ್ನು ಸ್ವಜಾತಿಯವರನ್ನು ಇಟ್ಟುಕೊಳ್ಳಬಾರದು ಎನ್ನತಕ್ಕಂಥ ಮಾತು. There is a resolution of the Cabinet also. ಆದರೆ, ಇವೊತ್ತು ಏನಾಗಿದೆಯೆಂದರೆ, ಯಾರೇ ಮಂತ್ರಿಗಳನ್ನು ತೆಗೆದುಕೊಂಡರೂ ಅವರ ಪ್ರೈವೇಟ್ ಸೆಕ್ರೆಟರಿ ಅವರ ಜಾತಿಯವನು, ಅವರ ಆಪ್ತ ಸಿಬ್ಬಂದಿ ಅವರ ಜಾತಿಯವನು, ಅವರ ಕಾರ್ ಡ್ರೈವರ್ ಅವರ ಜಾತಿಯವನು, ಎಲ್ಲ ಜಾತಿಯವರು ಒಂದು ಕಡೆ ಕುಳಿತುಕೊಂಡು ಬೇರೆ ಜಾತಿಯವರನ್ನು ಬೇರೆ ಬೇರೆ ತರಹ ನೋಡುತ್ತಿದ್ದಾರೆ. ಆಗ ಏನಾಗುತ್ತದೆ? ಆದುದರಿಂದಲೇ, "Caste leads to corruption" ಎಂದು ಹೇಳಿ, ನೀವು ಬೇರೆ ಬೇರೆ ಜಾತಿಯವರನ್ನು ಇಟ್ಟುಕೊಳ್ಳಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್.ಮಲ್ಲಾರಿಗೌಡ ಪಾಟೀಲ್: ಕೆಲವೊಂದು ಜನ ಆ ರೀತಿ ಇರಬಹುದು. ಎಲ್ಲರೂ ಆ ತರಹ ಇದ್ದಾರೆಂದು ಹೇಳುವುದು ಸರಿಯಲ್ಲ.

(ಗೊಂದಲ)

ಮಾನ್ಯ ಅಧ್ಯಕ್ಷರೇ, ನಾನು ಕೇಳುವುದು ಏನೆಂದರೆ, ನಾನು ಹೇಳುವುದಕ್ಕೆ ಎದ್ದು ನಿಂತಾಗ ಎಲ್ಲರೂ ಮಾತನಾಡುವುದು ಸರಿಯಲ್ಲ. ನೀವು ಅವಕಾಶ ಕೊಟ್ಟರೆ ಮಾತ್ರ ನಾನು ಮಾತನಾಡುತ್ತೇನೆ. ನಾನು ಹೇಳುವುದೇನೆಂದರೆ ಎಲ್ಲಾ ಮಂತ್ರಿಗಳ ಬಗ್ಗೆ ಈ ರೀತಿ ಟೀಕೆ_ಟಿಪ್ಪಣಿ ಮಾಡುವುದು ಸರಿಯಲ್ಲ. ಯಾರು ಆ ತರಹ ಇಟ್ಟುಕೊಂಡಿದ್ದಾರೋ, ಅವರನ್ನು ಬದಲಾವಣೆ ಮಾಡಬೇಕೆಂದು ಪ್ರಸ್ತಾವನೆ ಮಾಡಿ ತಿಳಿಸಿ. ಸುಮ್ಮನೆ ಹಿಂದೆ ಕುಳಿತುಕೊಂಡು ಏನಾದರೊಂದು ಹೇಳಿಕೊಂಡು ಹೋಗುವುದಲ್ಲ. ಅವರು ಮಂತ್ರಿಯಾಗಿದ್ದಾಗ ಯಾರನ್ನು ತೆಗೆದುಕೊಂಡಿದ್ದರು? ಅದನ್ನು ಹೇಳಬೇಕಾಗುತ್ತದೆ. ನಾನು ಮಂತ್ರಿಯಾದಾಗ ನಾನು ಯಾರನ್ನು ತೆಗೆದುಕೊಂಡಿದ್ದೇನೆ ಎಂಬುದನ್ನು ಹೇಳುವುದಕ್ಕೆ ತಯಾರಾಗಿದ್ದೇನೆ. ಆದರೆ, ಮಾನ್ಯ ಸದಸ್ಯರಾದ ಶ್ರೀ ವಿಶ್ವನಾಥ್ ಅಂತಹವರು ಎಲ್ಲರನ್ನೂ ಸಾರಾಸಗಟಾಗಿ ಹೇಳಿದರೆ ಏನು ಪ್ರಯೋಜನ ? ಯಾರು ಆ ತರಹ ಇಟ್ಟುಕೊಂಡಿದ್ದಾರೋ, ಅಂತಹವರ ಮೇಲೆ ಆರೋಪ ಹೊರಿಸುವುದು ಒಳ್ಳೆಯದು.

ಶ್ರೀ ಎಲ್.ಆರ್.ಶಿವರಾಮೇಗೌಡ: ಮಾನ್ಯ ಸದಸ್ಯರು ಮಂತ್ರಿಯಾದ ಮೇಲೆ, ಯಾರ್ಯಾರನ್ನು ತೆಗೆದುಕೊಳ್ಳುತ್ತೀರೆಂಬುದನ್ನು ನಾವು ನೋಡಬೇಕಾಗಿದೆ.

ಶ್ರೀ ಹೆಚ್.ವಿಶ್ವನಾಥ್: ನಾನು ಮಂತ್ರಿಯಾಗುವುದಕ್ಕಿಂತ ಮುಂಚೆ ಶ್ರೀ ಶಿವರಾಮೇಗೌಡರು ಮಂತ್ರಿ ಆಗಿಬಿಟ್ಟಿದ್ದಾರೆ. ಆದುದರಿಂದ, ಶ್ರೀ ಮಲ್ಲಾರಿಗೌಡ ಪಾಟೀಲರು ಕ್ಷಮಿಸಬೇಕು. ನಾನು ಎಲ್ಲರ ಬಗ್ಗೆ ಹೇಳಲಿಲ್ಲ, ಕೆಲವರು ಆ ರೀತಿ ಇದ್ದಾರೆ. ನೀವು ಆ ರೀತಿ ಮಾಡಿದ್ದರೆ ನಿಮಗೆ ಆಗುತ್ತದೆ, ನೀವು ಆ ರೀತಿ ಮಾಡಿಲ್ಲವೆಂದರೆ, ತಮ್ಮ ವೈಶಾಲ್ಯತೆಗೆ ನಮ್ಮ ಸ್ವಾಗತವಿದೆ. ಆದುದರಿಂದ, Caste leads to corruption, ಇದ ಬದಲಾವಣೆಯಾಗಬೇಕು. ಕಾಸ್ಟ್ ಎಂದರೆ ನಿಮಗೆ ಹೇಗೆ ಅನ್ವಯ ಆಗುತ್ತದೆ?

ಶ್ರೀ ಎಂ.ಮಹದೇವ್: ಈಗ ಒಂದು ಸಲಹೆ ಏನೆಂದರೆ, ಎಲ್ಲ ಶಾಸಕರೂ ಸೇರಿ ಒಂದು ತೀರ್ಮಾನ ಮಾಡೋಣ. ಏನೆಂದರೆ, ಯಾರಿಗೆ ವರ್ಗಾವಣೆ ಆಗಲಿ ಅಥವಾ ಇನ್ನೊಂದಕ್ಕೆ ಆಗಲಿ ಆಯಾ ಜನಾಂಗದ ನೌಕರರುಗಳನ್ನು ಆಯಾ ಜನಾಂಗದವರು ಶಿಫಾರಸ್ಸು ಮಾಡಬಾರದೆನ್ನುವ ಒಂದು ಒಮ್ಮತದ ತೀರ್ಮಾನಕ್ಕೆ ಬರೋಣ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ:- ಶಿಫಾರಸು ಮಾಡುವುದಕ್ಕೂ, ಇದಕ್ಕೂ ಸಂಬಂಧವಿಲ್ಲ. ಅವರು ಆಯಾ ಜಾತಿಯವರನ್ನು ಇಟ್ಟುಕೊಳ್ಳದಿದ್ದರಾಯಿತು.

ಶ್ರೀ ಜಿ. ರಾಜುಗೌಡ: ಆಯಾ ಮಂತ್ರಿಗಳು ಆಯಾ ಜಾತಿಯ ಪ್ರೈವೇಟ್ ಸೆಕ್ರೆಟರಿಗಳಾಗಿ ಇಟ್ಟುಕೊಳ್ಳಬಾರದೆಂಬುದು ಈಗಾಗಲೇ ಸಚಿವ ಸಂಪುಟದ ತೀರ್ಮಾನವಾಗಿದೆ. ಆ ತೀರ್ಮಾನದ ಬಗ್ಗೆ ಅವರು ಸಲಹೆ ಕೊಡುತ್ತಿದ್ದಾರೆ. ದಯವಿಟ್ಟು ಅದನ್ನು ಸ್ವೀಕಾರ ಮಾಡಿ.

ಶ್ರೀ ಅಲ್ಲಂ ವೀರಭದ್ರಪ್ಪ: ಆಯಾ ಜಾತಿಗಳವರನ್ನು ತೆಗೆದುಕೊಂಡರೆ ತಪ್ಪೇನಿಲ್ಲ. ಇಲ್ಲಿ ಕೆಲಸ ಮುಖ್ಯವೇ ಹೊರತು ಜಾತಿ ಮುಖ್ಯವಲ್ಲ.

ಶ್ರೀ ಹೆಚ್. ವಿಶ್ವನಾಥ್: ಆದುದರಿಂದ, ಸರ್ಕಾರ ಈಗ ಆಡಳಿತದಲ್ಲಿ ಸುಧಾರಣೆ ಮತ್ತು ಆರ್ಥಿಕ ಮಿತವ್ಯಯ ತರುವ ಸಲುವಾಗಿ ಹಲವಾರು ಹುದ್ದೆಗಳನ್ನು ರದ್ದುಪಡಿಸಿದೆ. ಈಗ ಡಿವಿಜನಲ್ ಕಮೀಷನರ್ಸ್, ಅಸಿಸ್ಟೆಂಟ್ ಕಮೀಷನರ್ಸ್, ಜಾಯಿಂಟ್ ಡೈರೆಕ್ಟರ್ಸ್, ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ, ಎ ಇ ಓ ಗಳು ಮತ್ತು ಈ ತರಹ ಕೆಲಸಕ್ಕೆ ಬಾರದವರನ್ನು ತೆಗೆದುಬಿಡುತ್ತೇವೆಂದು ಹೇಳಿರಿ. ಆದರೆ, ಇದರಲ್ಲಿ ನನ್ನ ಒಂದು ಸಲಹೆ ಏನೆಂದರೆ, ಅಸಿಸ್ಟೆಂಟ್ ಕಮೀಷನರ್, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್‌ನಂತಹ ಹುದ್ದೆಗಳನ್ನು ಉಳಿಸಿಕೊಂಡು ಹೋಗತಕ್ಕಂಥಾದ್ದು ಸ್ವಲ್ಪ ಸೂಕ್ತವೆಂದು ನನಗಾದರೂ ಅನ್ನಿಸುತ್ತದೆ. ಏಕೆಂದರೆ, ಹಲವಾರು ವಿಚಾರಗಳಲ್ಲಿ ಬಹಳ ಟ್ರೆಡಿಷನ್ ಆಗಿ ಬಂದಿರತಕ್ಕಂಥ ಕಛೇರಿ ಇದು. ಮತ್ತು ಅದಕ್ಕೂ ಕೂಡ ಹೆಚ್ಚಿನ ಶಕ್ತಿ ಕೊಟ್ಟು ಮಾಡಬಹುದೆಂದು ನನ್ನ ಅಭಿಪ್ರಾಯವಾಗಿದೆ. ನಮ್ಮ ಐ.ಎ.ಎಸ್. ಮತ್ತು ಕೆ.ಎ.ಎಸ್. ಅಧಿಕಾರಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಕೆ.ಎ.ಎಸ್.ಅಧಿಕಾರಿಗಳು ನಮ್ಮ ಕರ್ನಾಟಕ ರಾಜ್ಯದ ಹಾಗೂ ನಾಡಿನ ಅಧಿಕಾರಿಗಳು. ಇವತ್ತು ತಮಿಳುನಾಡಿನ ಸರ್ಕಾರದವರು ತಮ್ಮೆಲ್ಲಾ ಕಾರ್ಯಕ್ರಮಗಳನ್ನು ಸರಿಯಾಗ ರೀತಿಯಲ್ಲಿ ಅನುಷ್ಠಾನಕ್ಕೆ ತಂದರು. ಅಲ್ಲಿ ಅಣ್ಣಾದೊರೈಯವರ ಕಾಲದಲ್ಲಿ ಅಲ್ಲಿನ ಕೆ.ಎ.ಎಸ್. ಅಧಿಕಾರಿಗಳು ಏನಿದ್ದಾರೆ, ಅವರುಗಳಿಗೆ ಸೂಪರ್ ಟೈಮ್ ಸ್ಕೇಲ್ ಅನ್ನು ಕೊಟ್ಟರು ;ಡೆಪ್ಯೂಟಿ ಕಮೀಷನರ್ ಪೋಸ್ಟ್ ಕೊಟ್ಟರು ಮತ್ತು ಅವರ ಸಚಿವಾಲಯದಲ್ಲಿಯೂ ಕೂಡ ಅವರನ್ನು ಜಾಯಿಂಟ್ ಸೆಕ್ರೆಟರಿಗಳಾಗಿ ಮಾಡಿ ಅವರಿಗೆ ಅಧಿಕಾರವನ್ನು ಕೊಟ್ಟರು. ಇಲ್ಲಿ ಈ ಕನ್ನಡ ನಾಡಿನ ಮನೋಭೂಮಿಕೆಯ ಬಗ್ಗೆ ಕನ್ನಡ ನಾಡಿನ ಅಧಿಕಾರಿಗಳಿಗೆ ಚೆನ್ನಾಗಿ ತಿಳಿದಿರುತ್ತದೆ. ಆದುದರಿಂದ, ಕೆ.ಎ.ಎಸ್. ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ತಮಿಳುನಾಡಿನಲ್ಲಿರತಕ್ಕ ರೀತಿಯಲ್ಲಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅವರೂ ಕೂಡ ಕೋರ್ಟಿಗೆ ಹೋದರು. ಆದರೆ, ಕೋರ್ಟು ಅದನ್ನು ಟರ್ನ್ ಡೌನ್ ಮಾಡಿತು. The nature of work and allotment ಅನ್ನು ಕೊಡುವ ಅಧಿಕಾರ ಸರ್ಕಾರಕ್ಕೆ ಇದೆಯೇ ಹೊರತು ಅದನ್ನು ಪ್ರಶ್ನೆ ಮಾಡಲು ಬರುವುದಿಲ್ಲವೆಂದು ಸರ್ಕಾರ ಹೇಳಿತು. ನೀವು ಎಲ್ಲಿಯತನಕ ಐ.ಎ.ಎಸ್.ಅಧಿಕಾರಿಗಳನ್ನು ಮುಂಚೂಣಿಯಲ್ಲಿಟ್ಟುಕೊಂಡು ಕೆಲಸ ಮಾಡಲು ಹೋಗುತ್ತೀರೋ, ಅಲ್ಲಿಯವರೆಗೆ ಈ ಮಂತ್ರಿಗಳು ಅವರ ಮುಂದೆ ಹಸುಗಳಂತೆ ನಿಲ್ಲಬೇಕಾಗುತ್ತದೆ. ದಯಮಾಡಿ ಇದನ್ನು ತಾವು ಯೋಚನೆ ಮಾಡಬೇಕು. ಇವತ್ತು ನಾವು ವಿಧಾನಸೌಧದ ಮುಂದೆ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಸ್ಥಾಪಿಸಿದ್ದೇವೆ. ನಾವು ಶ್ರೀಮಾನ್ ದೇವರಾಜ ಅರಸು ಅವರನ್ನು ನೆನೆದುಕೊಳ್ಳಬೇಕು. ಏಕೆಂದರೆ, ಅವರ ಕಾಲದಲ್ಲಿ ಆದಂಥ ಆಡಳಿತ, ಅವರ ಕಾಲದಲ್ಲಿ ಆದಂಥ ಒಳ್ಳೆಯ ಕೆಲಸ ಯಾರ ಕಾಲದಲ್ಲೂ ಆಗಿಲ್ಲ. ಯಾವಾಗಲೂ ಒಳ್ಳೆಯ ಕಾಲದಲ್ಲಿ ಒಳ್ಳೆಯ ಕೆಲಸವಾದರೆ ಅದು ಚೆನ್ನಾಗಿ ಆಯಿತೆಂದು ಹೇಳುತ್ತೇವೆ. ಮತ್ತೆ ವಿಧಾನಸೌಧದ

ಮುಂದೆ ಒಂದು ಬೋರ್ಡ್ ಹಾಕಿದ್ದಾರೆ. ಏನೆಂದರೆ "ಸರ್ಕಾರದ ಕೆಲಸ ದೇವರ ಕೆಲಸ" ಎಂದು. ಆದರೆ, ಇವತ್ತು ಏನಾಗಿದೆಯೆಂದರೆ, ಸರ್ಕಾರದ ಕೆಲಸ ಯಾರ ಕೆಲಸವೂ ಅಲ್ಲ, ಆದರೆ, ಸರ್ಕಾರದ ದುಡ್ಡು ಮಾತ್ರ ಎಲ್ಲರ ದುಡ್ಡು ಎನ್ನತಕ್ಕ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಇನ್ನು ಈ ಸಚಿವಾಲಯದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈ ಸಚಿವಾಲಯದಲ್ಲಿ ನೀವು ಯಾವಾಗ ಬೇಕಾದರೂ ಹೋಗಿ ನೋಡಿ, 11.30 ಗಂಟೆಯ ಸಮಯದಲ್ಲಿ ಹಿಂಡು-ಹಿಂಡಾಗಿ ನೌಕರರು ತಿರುಗಾಡುತ್ತಾರೆ. ಅವರು ಹಿರಿಯ ಗುಮಾಸ್ತರಿರಬಹುದು, ಕಿರಿಯ ಗುಮಾಸ್ತರಿರಬಹುದು, ಅವರನ್ನು ಹೇಳುವವರು, ಕೇಳುವವರು ಯಾರೂ ಇಲ್ಲ. ಹೋಗಲಿ, ಯಾರಾದರೂ ಅವರಿಗೆ ಎಷ್ಟು ದಿನಕ್ಕೆ ಎಷ್ಟು ಫೈಲುಗಳನ್ನು ಮೂವ್ ಮಾಡಿದೆ, ನಿಮ್ಮ ಕೆಲಸವೇನು ಎನ್ನುವುದನ್ನು ಯಾರೂ ಕೇಳುವುದಿಲ್ಲ. ಕ್ಯಾಂಟೀನ್‌ಗೆ ಹೋದರೆ 200-300 ಜನರಿರುತ್ತಾರೆ. ಈ ರೀತಿ ನಡೆಯುತ್ತಿರುವುದೆಲ್ಲಿ? ಅದೂ ವಿಧಾನ ಸೌಧದಲ್ಲಿ, ಮಂತ್ರಿಗಳು ಇರತಕ್ಕ ಜಾಗದಲ್ಲಿ, ಶಾಸಕರು ಇರತಕ್ಕ ಜಾಗದಲ್ಲಿ, ಯಾರು ಈ ರಾಜ್ಯದ ಆಡಳಿತವನ್ನು ಹಿಡಿದುಕೊಂಡಿದ್ದಾರೋ, ಯಾರು ಈ ರಾಜ್ಯದ ಆಡಳಿತವನ್ನು ನಡೆಸುತ್ತಿದ್ದಾರೋ ಅಂಥ ವಿಧಾನ ಸೌಧದಲ್ಲಿ ಅಧಿಕಾರಿಗಳ ಎಲ್ಲ ಖುರ್ಚಿಗಳೂ ಖಾಲಿ ಬಿದ್ದಿರುತ್ತವೆ. ಇವತ್ತು ಬಿಹಾರ್‌ನಲ್ಲಿ ಲಲ್ಲೂಪ್ರಸಾದ್ ಯಾದವ್‌ರವರು ಯಾವುದಕ್ಕೋಸ್ಕರ ಅವರು ಅಷ್ಟು ಪ್ರಸಿದ್ಧರಾಗಿದ್ದಾರೆಂದರೆ ಅವರು ಎಲ್ಲಿಗೇ ಹೋಗಲಿ, ಅಲ್ಲಿ ಒಂದು ಕಛೇರಿಗೆ ನುಗ್ಗಿ surprise inspection ಮಾಡುತ್ತಾರೆ. ನಮ್ಮಲ್ಲಿ ಎಷ್ಟು ಜನ ಮಂತ್ರಿಗಳು ಈ ರೀತಿ surprise inspection ಮಾಡಿದ್ದಾರೆ? ಎಲ್ಲಿ ಹೋಗಿ ಯಾರನ್ನು ಸಸ್ಪೆಂಡ್‌ಮಾಡಿದ್ದಾರೆ? ಯಾವುದಾದರೂ ಕಛೇರಿಗೆ ಹೋಗಿ ಏತಕ್ಕೋಸ್ಕರ ಇಷ್ಟೊಂದು ಅರ್ಜಿಗಳನ್ನು ಇಲ್ಲಿ ಇಟ್ಟುಕೊಂಡಿದ್ದೀರಿ, ಈ ಅರ್ಜಿಗಳ ಬಗ್ಗೆ ಏಕೆ ಕ್ರಮತೆಗೆದುಕೊಂಡಿಲ್ಲ ಎಂದು ಹೇಳಿ ಯಾರನ್ನಾದರೂ ಸಸ್ಪೆಂಡ್ ಮಾಡಿದ್ದೀರಾ? ಉಪಾಧ್ಯಕ್ಷರೇ, ಹಳ್ಳಿಗಾಡಿನಿಂದ ಬಂದಂಥ ಜನರು ಅರ್ಜಿಯನ್ನು ಬರೆಯುತ್ತಾರೆ, ಮಾನ್ಯ ದೇವರಾಜ ಅರಸುರವರು ಅಂಥ ಅರ್ಜಿಯ ಬಗ್ಗೆ ಒಂದು ಆರ್ಡರ್ ಬರೆದಿದ್ದರು. ಅವರು ಬರೆದಿರುವುದನ್ನು ಇನ್ನೂ ಕೂಡ ಕಟ್ಟುಹಾಕಿಸಿ ಇಟ್ಟಿದ್ದಾರೆ. ಅದೇನೆಂದರೆ ಹೆಗ್ಗಡದೇವನಕೋಟೆಯಿಂದ ಕಕಬಂದಂಥ ಒಬ್ಬ ಗ್ರಾಮೀಣ ರೈತ ಬೆಂಗಳೂರಿನವರೆಗೆ ನಡೆದುಕೊಂಡು ಬಂದು ಅರ್ಜಿಯನ್ನು ಕೊಡುತ್ತಾನೆ. ಆಗ ದೇವರಾಜ ಅರಸುರವರು ಡೆಪ್ಯೂಟಿ ಕಮೀಷನರ್‌ರವರಿಗೆ ಎಂಡಾರ್ಸ್ ಮಾಡಿದ್ದಾರೆ. ಹೆಗ್ಗಡದೇವನಕೋಟೆ ಯಿಂದ ಒಬ್ಬ ರೈತ ರಾಜಧಾನಿ ಬೆಂಗಳೂರಿಗೆ ಬಂದು ಮುಖ್ಯಮಂತ್ರಿಯವರನ್ನು ಕಾಣುವಷ್ಟರ ಮಟ್ಟಿಗೆ ನೀನು ಬಿಟ್ಟಿದ್ದೀಯಲ್ಲಾ, ಜಿಲ್ಲಾ ಆಡಳಿತ ಏನಾಗಿದೆ ಎಂದು, ಉಪಾಧ್ಯಕ್ಷಿಣಿಯವರೇ ಅವನು ಬರೆದಿರುವ ಪ್ರತಿ ಅರ್ಜಿಯಲ್ಲಿಯೂ ಅವನ ಕಷ್ಟವನ್ನು ತೋಡಿಕೊಂಡಿರುತ್ತಾನೆ, ತನ್ನ ಕಣ್ಣೀರ ಹನಿಗಳಿಂದ ಸಹಿಯನ್ನು ಹಾಕಿರುತ್ತಾನೆ. ಆದರೆ ಯಾರಾದರೂ ಒಬ್ಬರು ಇದನ್ನು ನೋಡುತ್ತಾರೆಯೇ? ಕೊನೆಗೆ ಶ್ರೀಮಾನ್ ಗುಂಡೂರಾವ್‌ರವರ ಕಾಲದಲ್ಲಾದರೂ ಕೂಡ ಜಿಲ್ಲೆಯ ಮಂತ್ರಿಗಳು ಹೋಗಿ ಕೆಲವರನ್ನು ಸಸ್ಪೆಂಡ್ ಆದರೂ ಮಾಡಿ ಬರುತ್ತಿದ್ದರು. ಒಂದು ಸಲ ವರ್ಗಾವಣೆಯಾದರೆ ಮೂರು ವರ್ಷ ಅವನನ್ನು ಅಲ್ಲಿಂದ ತೆಗೆಯುವಂತಿಲ್ಲ, ಅಂಥ mass transfers ನ ವ್ಯವಸ್ಥೆ ಇತ್ತು. ನನ್ನ ಒಂದು ಸಲಹೆ ಏನೆಂದರೆ, ವರ್ಗಾವಣೆಯಲ್ಲಿ political interference ಕೂಡ ಜಾಸ್ತಿ ಇರಬಾರದು ಎಂಬುದು, ನಾವೂ ಸಹ ವರ್ಗಾವಣೆ ಮಾಡಿ, ಇವರನ್ನು ವರ್ಗಾವಣೆ ಮಾಡಿ ಎಂದು ಬರೆದು ಕೊಡುವುದು ನಿಜ, ಆ ರೀತಿಯ ವರ್ಗಾವಣೆಯ ಪದ್ಧತಿಯನ್ನು ನೀವು ಮಾಡಿ ಇಟ್ಟಿದ್ದೀರಿ, ಆದುದರಿಂದ ನಾವು ವರ್ಗಾವಣೆ ಬರೆದು ಕೊಡುತ್ತೇವೆ. ನೀವು ಒಬ್ಬ

ಎಸ್.ಐ.ಟ್ರಾನ್ಸ್‌ಫರನ್ನು ಇಲ್ಲೇ ಕುಳಿತುಕೊಂಡು ಮಾಡಬಹುದು. ಒಂದು ಕಡೆ ಅಕ್ಯುಮಲೇಟ್ ಮಾಡಿಕೊಂಡು ಹಾಗೂ ನಿಮ್ಮ ಸೂಪರ್‌ವಿಷನ್ ಎಲ್ಲಾ ಡಿ.ಐ.ಜಿ.ಗೆ ಬಿಡಿ. ಅವರು ಮಾಡುತ್ತಾರೆ, ಅಂತಹವರು ಇದ್ದಾರೆ. ಅವರಿಗೆ ಪವರ್ಸ್‌ಅನ್ನು ಡೆಲಿಗೇಟ್ ಮಾಡಿ, ಈವತ್ತು ಒಂಗು ಎ.ಎನ್.ಎಂ.ಟ್ರಾನ್ಸ್‌ಫರ್‌ಅನ್ನು ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್ ಮಾಡಬಹುದು. ಒಂದು ಜಿಲ್ಲೆಯಲ್ಲಿ 4900-5000 ತನಕ ಎ.ಎನ್.ಎಂ. ಗಳಿದ್ದಾರೆ. ಆ ಎ.ಎನ್.ಎಂ.ಗಳಿಗೆ ಆನಂದರಾವ್ ಸರ್ಕಲ್‌ನಿಂದಲೇ ಆರ್ಡರ್ ಹೋಗುವುದು. ಆದ್ದರಿಂದ ಎಲ್ಲವನ್ನೂ ಕೂಡ ಸ್ವಲ್ಪ ವಿಕೇಂದ್ರೀಕರಣ ಮಾಡಿ, ಈ ವರ್ಗಾವಣೆಯಲ್ಲಿ. .

ಡಾ.ಎನ್.ಬಿ.ನಂಜಪ್ಪ: ಕೇವಲ ಎ.ಎನ್.ಎಂ.ಗಳ ಬಗ್ಗೆ ಮಾತನಾಡುತ್ತಿದ್ದಾರೆ. ಬೇರೆಯವರ ಬಗ್ಗೆ ಮಾತನಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಹೆಚ್. ವಿಶ್ವನಾಥ್: ಎಲ್ಲಾ ಹೇಳುವುದಕ್ಕೆ ಆಗುತ್ತದೆಯೇ? ಇದು ಏಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಪುಟ್ಟಸ್ವಾಮಿಗೌಡರ ಹೆಸರು ಹೇಳಿದರೆ ನೀವು ಎದ್ದೇಳುತ್ತೀರಿ, ಮಲ್ಲಾರಿಗೌಡರ ಹೆಸರು ಹೇಳಿದರೆ, ಮಹದೇವ್‌ರವರು ಎದ್ದೇಳುತ್ತಾರೆ. ಏನಿದು?

ಶ್ರೀ ಎಂ.ಮಹದೇವ್: ಈಗ ರಾಜ್ಯದ ನೌಕರರು ಅಂದರೆ ಎಲ್ಲರೂ ಒಂದೇ ಅನ್ನುವ ದೃಷ್ಟಿಯನ್ನು ನಾವು ಇಟ್ಟುಕೊಂಡಿದ್ದೇವೆ. ಅಲ್ಲಿ ನಮಗೆ ಯಾವ ತಾರತಮ್ಯವೂ ಕಾಣುವುದಿಲ್ಲ. ಆದ್ದರಿಂದ ರಾಜ್ಯದ ನೌಕರರು ಅಂತ ಹೇಳಿದರೆ, ಅವರ ಬಗ್ಗೆ ಯಾವ ಒಂದು ತಾರತಮ್ಯವಾಗಲಿ ಅಥವಾ ಯಾವುದೇ ವರ್ಗ ಭಾವನೆಯಾಗಲಿ, ಶಾಸಕರಿಗಾಗಲಿ, ಸಚಿವರಿಗಾಗಲಿ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಇಲ್ಲದ್ದನ್ನು ಸೃಷ್ಟಿ ಮಾಡಿದಾಗ ಈ ವಿಚಾರವನ್ನು ಅವರ ಗಮನಕ್ಕೆ ತರಬೇಕಲ್ಲಾ ಎಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ತಾರತಮ್ಯ ಜಾತ್ಯಾತೀತ ಭಾವನೆಯನ್ನು ನಾವು ತೋರದೆ ನಾವು ಮಾತನಾಡುತ್ತೇವೆ.

ಡಾ.ಎನ್. ಬಿ. ನಂಜಪ್ಪ:- ಅಧ್ಯಕ್ಷರೇ, ನಾನು ಹೇಳಿದ್ದು ಇಷ್ಟೊಂದು ಟ್ರಾನ್ಸ್‌ಫರ್ ಆಗುವವರು ಇದ್ದಾರೆ. Only why you remembered ANM'S ಅಂತ ಅಷ್ಟೇ, ಛೇರ್ಮನ್: ಡಾಕ್ಟರ್ ಬಗ್ಗೆಯೂ ಹೇಳಿ ಬಿಡಿ.

ಶ್ರೀ ಹೆಚ್.ವಿಶ್ವನಾಥ್: ಸಚಿವಾಲಯಕ್ಕೆ ಸೆಕ್ಯುರಿಟಿಯನ್ನು ಪ್ರೈವೇಟ್ ಏಜೆನ್ಸಿಗೆ ಕೊಟ್ಟು ಪಂಚಿಂಗ್ ಸಿಸ್ಟಂನ್ನು ಇಟ್ಟರೆ ನೌಕರರು ಆಫೀಸ್‌ನಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಾರೆ. ಕೆಲಸಗಳು ಸಹ ಚೆನ್ನಾಗಿ ನಡೆಯುತ್ತವೆ ಎನ್ನುವ ಸಲಹೆ ಕೊಡುತ್ತೇನೆ. ಕೊನೆಯದಾಗಿ, ಅಧ್ಯಕ್ಷರೇ, ಇಷ್ಟೆಲ್ಲಾ ಕಾರ್ಯಕ್ರಮಗಳು ನಮ್ಮ ವಿಚಾರ ಇವೆಲ್ಲವೂ ಇದ್ದರೂ ಕೂಡ ಜನಾಭಿಪ್ರಾಯ ಮಾಡಬೇಕಾಗುತ್ತದೆ. ಇದು ನನ್ನ ಸರ್ಕಾರ, ನನ್ನ ಕಾರ್ಯಕ್ರಮ, ನನ್ನ ಹಣ, ಎಂದು ಜನಾಭಿಪ್ರಾಯ ಮೂಡಿಸತಕ್ಕದ್ದು ಮುಖ್ಯ. ಇದನ್ನು ಹೇಳುವವರು ಯಾರು ? ಪತ್ರಿಕೆಗಳು ಹೇಳುತ್ತವೆ, ಇನ್ನೊಬ್ಬರು ಬೀದಿಯಲ್ಲಿ ಮಾತನಾಡುತ್ತಾರೆ. ಕಿವಿಯಲ್ಲಿ ಮಾತನಾಡುತ್ತಾರೆ. ಆದರೆ ನನಗೆ ಗೊತ್ತಾಗುವುದು ಹೇಗೆ ? ಅದು ಗೊತ್ತಾಗುವುದಕ್ಕೋಸ್ಕರ ನಮ್ಮ ಹೋಂ ಡಿಪಾರ್ಟ್‌ಮೆಂಟ್‌ನಲ್ಲಿ ಇಂಟೆಲಿಜೆನ್ಸ್ ವಿಂಗ್ ಇದೆ. ಇಂಟೆಲಿಜೆನ್ಸ್ ವಿಂಗ್ ಇರುವುದು ಒಬ್ಬನ ಮೇಲೆ ಒಬ್ಬನನ್ನು ಗುಮಾನಿ ಮಾಡುವುದಕ್ಕಲ್ಲ. ಅಧ್ಯಕ್ಷರೇ, ರಾಜ-ಮಹಾರಾಜರುಗಳ ಕಾಲದಲ್ಲಿ ಬೇಹುಗಾರರನ್ನು ಇಟ್ಟುಕೊಳ್ಳುತ್ತಿದ್ದರು. ಏತಕ್ಕೆ ಇಟ್ಟುಕೊಳ್ಳುತ್ತಿದ್ದರೆಂದರೆ ; ಅವರು ಅಲ್ಲಲ್ಲಿ ಸಂಚಾರ ಮಾಡಿ ರಾಜನ ಆಡಳಿತ ಹೇಗಿದೆ ಎನ್ನುವುದನ್ನು ತಿಳಿದು ರಾಜರಿಗೆ ಬಂದು ಹೇಳುವುದಕ್ಕೆಂದು. ರಾಜ ತನ್ನ ಆಡಳಿತದಲ್ಲಿ ತಪ್ಪಿದ್ದರೆ ಅದನ್ನು ಕಾಲಕಾಲಕ್ಕೆ ಆ ಬೇಹುಗಾರರ ವರದಿಯ ಮೇಲೆ ಬದಲಾವಣೆ

ಮಾಡಿಕೊಂಡು ಅವನು ಪ್ರಸಿದ್ಧಿಯಾಗುತ್ತಿದ್ದನು. ಆ ನಿಟ್ಟಿನಲ್ಲಿ ಈ ಇಂಟೆಲಿಜೆನ್ಸಿ ವಿಂಗ್ ಇರತಕ್ಕದ್ದು. ಇವತ್ತು ಇಂಟೆಲಿಜೆನ್ಸ್ ವಿಂಗ್ ಯಾವ ರೀತಿ ಇದೆ ಎಂದರೆ, ಸ್ವಾಮಿ, ನಾನು ಇಂಟೆಲಿಜೆನ್ಸ್ ವಿಂಗ್‌ನಲ್ಲಿ ಇದ್ದೇನೆ, ನನ್ನನ್ನು ತೆಗೆದು ಎಲ್ಲಿಯಾದರೂ ಹಾಕಿಸಿ, ಒಳ್ಳೆಯ ಸರ್ಕಲ್ ಕೊಡಿ ಎಂದು ಕೇಳುತ್ತಾರೆ. ಮತ್ತು ಯಾರೋ ಎಲ್ಲೋ ಇರುತ್ತಾರೆ, ಅಲ್ಲೆಲ್ಲಾ ಮುಗಿದು ಹೋದಮೇಲೆ ಇವನು ವರದಿ ತೆಗೆದುಕೊಂಡು ಬರುತ್ತಾನೆ. ಅಂತಹ ಪರಿಸ್ಥಿತಿ ಇದೆ. ಈಗ ನಮ್ಮ ಡಾಕ್ಟರ್ ಬಗ್ಗೆ ನನ್ನನ್ನು ಕೇಳಿದರೆ ನಾನು ಹೇಳುವುದಕ್ಕೆ ಆಗುತ್ತದೆಯೋ, ನನ್ನ ಬಗ್ಗೆ ಅವರಲ್ಲಿ ಕೇಳಿದರೆ ಅವರು ಹೇಗೆ ಹೇಳುವುದಕ್ಕೆ ಆಗುತ್ತದೆ ? ಅದು ಸರಿಯಾಗುವುದಿಲ್ಲ. ಸರ್ಕಾರವೇ ಸರಿಯಾದ ರೀತಿಯಲ್ಲಿ ಬೇಹುಗಾರರನ್ನು ಇಟ್ಟುಕೊಂಡು ನನ್ನ ಆಡಳಿತ ಹೀಗೆ ಇದೆ, ನನ್ನ ಬಗ್ಗೆ ಏನು ಮಾತನಾಡುತ್ತಿದ್ದಾರೆ, ನನ್ನ ಕಾರ್ಯಕ್ರಮದ ಬಗ್ಗೆ ಜನ ಏನು ಮಾತನಾಡುತ್ತಿದ್ದಾರೆ, ನನ್ನ ಆಡಳಿತ ದಕ್ಷತೆ ಬಗ್ಗೆ ಏನು ಮಾತನಾಡುತ್ತಿದ್ದಾರೆ, ಇದನ್ನೆಲ್ಲಾ ಜನರಿಂದ ತಿಳಿದುಕೊಂಡು ಇದನ್ನು ಕಾಲಕಾಲಕ್ಕೆ ಬದಲಾವಣೆ ಮಾಡಿಕೊಂಡು ಹೋಗುವುದು ವಿಹಿತ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಕೊನೆಯದಾಗಿ ನಮ್ಮ ಅಮ್ಮಾವರದ್ದು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕೆಂದರೆ ಜಿಲ್ಲಾ ಪರಿಷತ್ತಿನವರು ಪ್ಲಾನಿಂಗ್ ಅನ್ನು ತೆಗೆದುಕೊಂಡು ಹೋಗಿ ಮಂಡಲ ಪಂಚಾಯತಿಗೆ ಕೊಟ್ಟಿದ್ದಾರೆ. ಮಂಡಲ ಪಂಚಾಯತಿಯವರು ಕುಳಿತುಕೊಂಡು ಪ್ಲಾನ್ ಮಾಡುವುದು, ಅದಕ್ಕೆ ದುಡ್ಡು ಎಷ್ಟು ಕೊಡುತ್ತಿದ್ದೇವೆ ಅಂದರೆ,2025 ಲಕ್ಷ ರೂಪಾಯಿಗಳು. ಪ್ಲಾನ್ ಯಾವ ತರಹದಲ್ಲಿ ಮಾಡುತ್ತಾರೆಂದರೆ, ನಮ್ಮ ಊರು ಹೀಗೆ ಬೆಟ್ಟದ ಮೇಲೆ ಇರುತ್ತದೆ ;ಅಲ್ಲಿ ಚರಂಡಿ ಮಾಡುತ್ತಾರೆ, ಎಷ್ಟು ಮಳೆ ಹೊಡೆದರೂ ನೀರು ಅಲ್ಲಿ ನೀರು ನಿಲ್ಲುವುದೇ ಇಲ್ಲ; ನೀರು ಅಲ್ಲಿಂದ ಜಾರಿಕೊಂಡು ಹೋಗುತ್ತದೆ. ಆದರೂ ಅಂತಹ ಕಡೆ ಚರಂಡಿ ಬೇಕೆಂದು ಪ್ಲಾನಿಂಗ್ ಮಾಡುತ್ತಾರೆ. ಆದರೆ ಆಗತ್ಯವಿರುವ ಕಡೆಗಳಲ್ಲಿ ಚರಂಡಿಗಳನ್ನು ಮಾಡಿರುವುದಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿಯ ಯೋಜನೆಯನ್ನು ತಾಲ್ಲೂಕು ಮಟ್ಟಕ್ಕೆ ತೆಗೆದುಕೊಂಡು ಬನ್ನಿ. ಅಲ್ಲಿಯೇ ಎಲ್ಲರೂ ಕುಳಿತುಕೊಂಡು ಸರಿಯಾದ ಪ್ಲಾನ್‌ಮಾಡಿ, ಯಾರಿಗೆ ಆದ್ಯತೆಯ ಮೇಲೆ ಕೊಡಬೇಕು, ಯಾವ ಊರಿಗೆ ಆದ್ಯತೆಯ ಮೇಲೆ ಕೊಡಬೇಕು, ಯಾವ ಕೇರಿಗೆ ಆದ್ಯತೆಯ ಮೇಲೆ ಕೊಡಬೇಕು ಅದನ್ನು ನೋಡಿಕೊಂಡು ಕೊಡಿ. ಬೋರ್‌ವೆಲ್ ಆಗಲಿ ಮತ್ತೊಂದು ಆಗಲಿ, ಯಾರಾದರೂ ಒಬ್ಬರು ಹರಿಜನ ಇದ್ದು ಬಾಯಿ ಬಡಿದುಕೊಂಡರೆ ಅವನ ಕೇರಿಗೆ ಹೋಗುತ್ತದೆ. ಇಲ್ಲವೇ ಎಂ.ಎಲ್.ಎ. ಯಾವ ಜಾತಿಯವನು ಇರುತ್ತಾರೆ ಆ ಕೇರಿಗಳಿಗೆ ಬೋರ್‌ವೆಲ್‌ಗಳನ್ನು ಹಾಕುತ್ತಾರೆ. ಇದೆಲ್ಲಾ ತಪ್ಪಬೇಕಾದರೆ ಈ ಪ್ಲಾನಿಂಗನ್ನು ದಯಮಾಡಿ ಈ ಮಂಡಲ ಪಂಚಾಯತಿಯಿಂದ ಕಿತ್ತು ಅದನ್ನು ತಾಲ್ಲೂಕು ಮಟ್ಟಕ್ಕೆ ತೆಗೆದುಕೊಂಡು ಬರಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ): ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ದಿವಸ ಈ ಡಿಮ್ಯಾಂಡ್‌ಗಳನ್ನು ಮಾನ್ಯ ಮಂತ್ರಿಗಳು ಇಲ್ಲಿ ಏನು ಮಂಡಿಸಿದ್ದಾರೆ ಅದನ್ನುನಾನು ಬೆಂಬಲಿಸಿ ನನ್ನ ಕೆಲವು ಅನಿಸಿಕೆಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ನಾನೂ ಕೂಡ ಬಹಳ ಲೆಕ್ಕಾಚಾರ ಹಾಕಿಕೊಂಡು ಬಹಳ ವಿವರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಮನಸ್ಸಿಗೆ ಕಂಡಿರತಕ್ಕಂಥ ಹಾಗೂ ನಮ್ಮ ಕ್ಷೇತ್ರದಲ್ಲಿ ಜನಗಳ ಮಧ್ಯಕ್ಕೆ ಹೋದಾಗ ಜನರು ತಮಗೆ ಆಗಿರತಕ್ಕಂಥ ಅನಿಸಿಕೆಗಳನ್ನು ಯಾವ ರೀತಿ ಹೇಳಿದರು ಎಂಬುದನ್ನು ಇಲ್ಲಿ ಪ್ರತಿಬಿಂಬನೆ ಮಾಡಿದರೆ

ಅದು ಸರ್ಕಾರಕ್ಕೆ ಉಪಕಾರವಾದೀತು ಎಂಬುದು ನನ್ನ ಭಾವನೆ. ಇವತ್ತು ಬಹಳ ಪ್ರಾಮುಖ್ಯವಾಗಿ ನಾವು ನೋಡಬೇಕಾದುದು ಈ ಆರ್ಥಿಕ ಪರಿಸ್ಥಿತಿಯನ್ನು ಮೇಲೆ ತರುವಂಥ ವಿಷಯದ ಬಗ್ಗೆ. ಈವತ್ತು ಆರ್ಥಿಕ ಇಲಾಖೆ ಮುಖ್ಯಮಂತ್ರಿಗಳ ಕೈಯಲ್ಲೇ ಇದೆ. ಇದನ್ನು ಯಾವ ರೀತಿಯಲ್ಲಿ ಹೆಚ್ಚಾಗಿ ಮಾಡಬಹುದು ಹಾಗೂ , ಸಂಪನ್ಮೂಲಗಳನ್ನು ಯಾವ ರೀತಿಯಲ್ಲಿ ಕೂಡಿಸಬಹುದೆಂದು ವಿಚಾರ ಮಾಡುವ ಹಾಗಿದ್ದರೆ ಮಾತ್ರ ಒಂದು ರಾಜ್ಯದ ಬೆಳವಣಿಗೆಯನ್ನು ಹಾಗೂ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯ. ಹಣ ಇಲ್ಲದಿದ್ದರೆ ಯಾವುದನ್ನೂ ಮಾಡಲಿಕ್ಕೆ ಆಗುವುದಿಲ್ಲ. ಅದಕ್ಕಾಗಿ ನಾವು 'ಹಣ, ಹಣ,' ಹಣ ಜಮೆ ಮಾಡುವಂಥಾದ್ದು ಎಂದು ಈ ಶಬ್ದವನ್ನು ಹೇಳುತ್ತಿದ್ದೇವೆ. ಆ ದೃಷ್ಟಿಯಲ್ಲಿ ಇವತ್ತು ಹಣ ಜಮೆ ಮಾಡಿಕೊಳ್ಳುವುದಕ್ಕೆ ಅನೇಕ ದಾರಿಗಳನ್ನು ಕಂಡುಕೊಂಡಿದ್ದಾರೆ. ಇವತ್ತು ಪಾನ ನಿಷೇಧ ಜಾರಿ ಮಾಡದೆ, ಸಾರಾಯಿ ಮಾರಾಟ ಮಾಡತಕ್ಕಂಥ ವ್ಯವಸ್ಥೆಯಿದೆ. ಅದೇ ರೀತಿಯಲ್ಲಿ ಲಾಟರಿ ಯೋಜನೆ ಸಹ ಒಂದು ಜೂಜು ಇದ್ದಂತೆ. ಇದರಿಂದ ಬರತಕ್ಕಂಥ ಹಣ, ಈ ರೀತಿಯಲ್ಲಿ, ಹಣ ಜಮೆ ಹೆಚ್ಚಿಗೆ ಆದರೆ ಹೆಚ್ಚಿನ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯ ಎಂದು ಹೇಳುವಂಥಾದ್ದು ಒಂದು ವಿಧಾನ ಆದರೆ ನಾನು ಭಾವಿಸುವಂಥದ್ದು, ಇವತ್ತು ನಾವು ನಮ್ಮ ನಾಡಿನ ಸುತ್ತಗಲಕ್ಕೂ ಕಣ್ಣೋಡಿಸಿದರೆ, ಇವತ್ತು ಬೇರೆ ಬೇರೆ ರೂಪದಲ್ಲಿ ಹಣ ಪೋಲಾಗಿ ಹೋಗುವಂಥಾದು, ದುಂದುವೆಚ್ಚ ಆಗುವಂಥಾದ್ದು, ಎಷ್ಟೋ ಶ್ರೀಮಂತರು , ಎಷ್ಟೋ ದೊಡ್ಡ ದೊಡ್ಡ ವ್ಯಾಪಾರಿಗಳು, ಕೋಟ್ಯಾಧಿಪತಿಗಳು ತೆರಿಗೆ ಕೊಡದೇ ಸರ್ಕಾರಕ್ಕೆ ಮೋಸ ಮಾಡುವಂಥದ್ದನ್ನು ನಾವು ಲೆಕ್ಕಾಚಾರ ಮಾಡಿದರೆ, ಅದರಿಂದಲೇ ಎಷ್ಟೋ ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಬಹುದು. ಇವತ್ತು ಆದಾಯ ತೆರಿಗೆ ಅಥವಾ ಮಾರಾಟ ತೆರಿಗೆ ಇದನ್ನು ಸರಿಯಾಗಿ ಕೊಡತಕ್ಕಂಥವರು ಬಹಳ ಕಡಿಮೆ, ಚಿಕ್ಕ ಚಿಕ್ಕ ವ್ಯಾಪಾರಿಗಳು, ಮಧ್ಯಮ ವ್ಯಾಪಾರಿಗಳು, ಸಾಧಾರಣ ಹೆದರಿಯಾದರೂ ಕೂಡ ಸರಿಯಾಗಿ ಲೆಕ್ಕ ಪತ್ರ ಇಟ್ಟು ತೆರಿಗೆ ಕೊಡುತ್ತಾರೆ. ಆದರೆ ಬಹಳ, ದೊಡ್ಡ ದೊಡ್ಡ ಶ್ರೀಮಂತರು ಇದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಿ ಅಧಿಕಾರಿಗಳನ್ನು ಕೈವಶ ಮಾಡಿಕೊಂಡು ಅಂದರೆ ಒಳ್ಳೆಯ ಅಧಿಕಾರಿಗಳನ್ನು ಕೈವಶ ಮಾಡಲಿಕ್ಕೆ ಆಗುವುದಿಲ್ಲ. ಎಲ್ಲರೂ ಒಂದೇ ರೀತಿಯಾಗಿ ಇರುವುದಿಲ್ಲ. ಹತ್ತು ಬೆರಳು ಒಂದೇ ರೀತಿಯಲ್ಲಿ ಹೇಗೆ ಇರುವುದಿಲ್ಲವೋ ಆ ರೀತಿಯಲ್ಲಿ ಕೆಲವು ಅಧಿಕಾರಿಗಳನ್ನು ಕೈವಶ ಮಾಡಿಕೊಂಡು ಎಷ್ಟೋ ತೆರಿಗೆಯನ್ನು ನುಂಗಿಹಾಕುವಂತದ್ದನ್ನು ನಾವು ಕಾಣುತ್ತಾ ಇದ್ದೇವೆ. ಅದಕ್ಕೆ ನಾನು ಹೇಳುವಂಥ ಉದಾಹರಣೆ, ಇವತ್ತು ಹಣ ಸಂಗ್ರಹಣೆ ಮಾಡಬೇಕಾಗುವಂಥ ಮನಸ್ಸು ಇದ್ದರೆ ಅನೇಕ ದಾರಿಗಳು ಉಂಟು ಎಂದು ನಾನು ಹೇಳಿದೆ. ಇವತ್ತು ಅನೇಕರು ದಿಢೀರ್ ಅಂತ ಶ್ರೀಮಂತರಾಗುತ್ತಾರೆ. 15 ವರ್ಷಗಳ ಹಿಂದೆ ಅವನಿಗೆ ಏನೂ ಇರಲಿಲ್ಲ ಅವನಿಗೆ ಯಾವ ಯೋಗ್ಯತೆಯೂ ಇರಲಿಲ್ಲ. ಒಬ್ಬ ಸಾಮಾನ್ಯ ಮನುಷ್ಯ 15 ವರ್ಷಗಳ ನಂತರ ಅವನು ದಿಢೀರ್ ಆಗಿ ಬಹಳ ಒಳ್ಳೆಯ ಶ್ರೀಮಂತ, ಕೋಟ್ಯಾಧಿಪತಿ ಹೇಗೆ ಆದನೆಂದು ನೋಡಿಕೊಳ್ಳುವಂಥ ಒಂದು ವ್ಯವಸ್ಥೆ ಪ್ರಜಾಪ್ರಭುತ್ವದಲ್ಲಿ ಇರಬೇಕು. ಅವನ 15 ವರ್ಷದ ಚರಿತ್ರೆ, 15 ವರ್ಷಕ್ಕಿಂತ ಮೊದಲ ಚರಿತ್ರೆ ಏನು ಎಂಬುದನ್ನು ಕಂಡುಕೊಳ್ಳುವುದಕ್ಕೆ ಕಷ್ಟ ಇಲ್ಲ. ಅದಕ್ಕೆ ಬೇಕಾದಂತ ಅಧಿಕಾರಿಗಳನ್ನು ಕಳುಹಿಸಿದ್ದರೆ ಕಂಡುಕೊಳ್ಳಬಹುದು. ಈ ರೀತಿಯಲ್ಲಿ ಆತ 15 ವರ್ಷದಲ್ಲಿ ಕೋಟ್ಯಾಧಿಪತಿ ಹೇಗೆ ಆದ ಎಂದು ಲೆಕ್ಕಾಚಾರವನ್ನು ಹಾಕಿ ಆ ರೀತಿಯಲ್ಲಿ ಅವರನ್ನು ಬಗ್ಗುಬಡಿಯುವಂಥದ್ದು ಬಹಳ ಮುಖ್ಯ. ಆ ರೀತಿಯಾಗಿ ಮಾಡಿದರೆ ಬೇಕಾದಷ್ಟು ಹಣ ಆಗುತ್ತದೆ.

ಇವತ್ತು ಕಳ್ಳ ಸಾಗಾಣಿಕೆಯಲ್ಲಿ ಕಾಳಸಂತೆಯಲ್ಲಿ ಎಷ್ಟೋ ವ್ಯಾಪಾರಿಗಳು ಮಾಡತಕ್ಕಂಥ ಅನ್ಯಾಯ ಹಗಲು ದರೋಡೆ ಮಾಡಿದ ರೂಪದಲ್ಲಿ ಮಾಡುತ್ತಿದ್ದಾರೆ. ಆದರೆ ಅವರನ್ನು ಯಾರೂ ಮುಟ್ಟುವುದಿಲ್ಲ, ಯಾವ ಅಧಿಕಾರಿಗಳೂ ಅವರ ಹತ್ತಿರ ಹೋಗುವುದಿಲ್ಲ. ಈ ಸರ್ಕಾರ ಕೊಟ್ಟಂಥ ಕಾರ್ಯಕ್ರಮಗಳನ್ನು ಅಧಿಕಾರಿಗಳು ನಡೆಸುವಂಥ ಅಭಿಪ್ರಾಯ ಇದೆ. ಅಧಿಕಾರಿಗಳಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಒಳ್ಳೆಯವರು ಸ್ವಲ್ಪ ಕಡಿಮೆ ಇರಬಹುದು, ಕೆಟ್ಟವರು ಸ್ವಲ್ಪ ಹೆಚ್ಚಿಗೆ ಇರಬಹುದು. ಅಧಿಕಾರಿಗಳು ಎಂದರೆ ಯಾರು ? ಅವರು ಜನತೆಯ ಸೇವಕರು. ಶಾಸಕರು ಎಂದರೆ ಯಾರು ? ಅವರು ಜನತೆಯ ಸೇವಕರು, ಮಂತ್ರಿಗಳು ಎಂದರೆ ಯಾರು ? ಅವರು ಜನತೆಯ ಸೇವಕರು. ಈ ಜನತೆ ಇವತ್ತು ಅತಿ ಮುಖ್ಯ. ಈ ಜನತೆ ಇಲ್ಲದಿದ್ದರೆ ಮಂತ್ರಿಗಳೂ ಇಲ್ಲ, ಶಾಸಕರೂ ಇಲ್ಲ, ಅಧಿಕಾರಿಗಳೂ ಇಲ್ಲ. ಬಡಜನರು ಕೊಡತಕ್ಕ ತೆರಿಗೆಯ ಹಣದಿಂದಲೇ ಎಲ್ಲರೂ ಜೀವನ ನಡೆಸುತ್ತಿರುವುದು. ಇದನ್ನು ಬಹಳ ಸೂಕ್ಷ್ಮವಾಗಿ ಚಿಂತನೆ ಮಾಡಬೇಕಾದ ವಿಚಾರ. ಆದುದರಿಂದಲೇ ನಾವು ಏನಾದರೂ ದ್ರೋಹ ಮಾಡಿದರೆ ಅದು ಇವತ್ತು ನಮ್ಮ ಕಣ್ಣಿಗೆ ಕಾಣದಿದ್ದರೂ ಕೂಡ ಮುಂದೆ ದೇವರ ಕಡೆಯಿಂದ ಆದರೂ ಶಾಪ ಬರುತ್ತದೆಂದು ಶಾಸ್ತ್ರದಲ್ಲಿದೆ. ಪ್ರತಿಯೊಂದು ಶಾಸ್ತ್ರದಲ್ಲೂ ಇದನ್ನು ಹೇಳುತ್ತದೆ. ಜನತೆಯು ಕೊಟ್ಟಿರತಕ್ಕ ಹಣಕ್ಕೆ ಅವರಿಗೆ ಏನಾದರೂ ಅನ್ಯಾಯವಾಗತಕ್ಕ ಚ್ಯುತಿ ಬರತಕ್ಕ, ಮೋಸವಾಗತಕ್ಕಂಥ, ಕೆಡಕು ಆಗತಕ್ಕ ಕೆಲಸವನ್ನು ಯಾರೂ ಮಾಡಬೇಡಿ. ಒಮ್ಮೆಲೇ ನಿಮಗೆ ಸುಖ ಸಿಕ್ಕಬಹುದು. ನೀವು ಒಮ್ಮೆಲೇ ಶ್ರೀಮಂತರಾಗಬಹುದು. ಆದರೆ ಇಧರ ಪರಿಣಾಮ ಇವತ್ತಲ್ಲದಿದ್ದರೂ ನಿನ್ನ ಮಕ್ಕಳ ಕಾಲಕ್ಕೆ ಅಥವಾ ಅವರ ಮಕ್ಕಳ ಕಾಲಕ್ಕೆ ತೊಂದರೆ ಬರಬಹುದೆಂದು ಶಾಸ್ತ್ರ ಹೇಳುತ್ತದೆ. ಇದು ಒಳ್ಳೆಯ ಅಭಿಪ್ರಾಯ ಎಂದು ನನಗನ್ನಿಸುತ್ತದೆ. ಈ ರೀತಿಯಲ್ಲಿ ಡಿಢೀರ್ ಹಣವಂತರಾದವರನ್ನು ಪರೀಕ್ಷೆ ಮಾಡತಕ್ಕ ವ್ಯವಸ್ಥೆ ಇದ್ದರೆ ಸರ್ಕಾರಕ್ಕೆ ತುಂಬಾ ಹಣವನ್ನು ಸಂಗ್ರಹ ಮಾಡುವುದಕ್ಕೆ ಸಾಧ್ಯವಿದೆ.

ಇನ್ನು ವಿಶೇಷವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮತ್ತು ನನ್ನ ಕ್ಷೇತ್ರದ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ನನಗೆ ತಿಳಿದಿರುವಂತೆ ನಮ್ಮ ಜಿಲ್ಲೆಯಲ್ಲಿ ಸೇಲ್ಸ್ ಟ್ಯಾಕ್ಸ್ ಆಫೀಸ್ ಇದೆ. ನಮ್ಮಲ್ಲಿ ದೊಡ್ಡ ವ್ಯಾಪಾರಿಗಳಿದ್ದಾರೆ. ಬೆಂಗಳೂರನ್ನು ಬಿಟ್ಟರೆ ಎರಡನೆಯದು ಮಂಗಳೂರು ಎಂದು ಹೇಳುತ್ತಾರೆ. ಏಕೆಂದರೆ ಅಲ್ಲಿ ಬಂದರು ಇದೆ, ಹಡಗುಗಳು ಬರುತ್ತವೆ, ಹೋಗುತ್ತವೆ. ಕರಾವಳಿ ಇರುವುದರಿಂದ ಬಹಳ ದೊಡ್ಡ ವಹಿವಾಟನ್ನು ಮಾಡತಕ್ಕ ಜಾಗವಾಗಿದೆ. ಅಲ್ಲಿ ಏನು ಮಾಡಿದರೂ ಗೊತ್ತಾಗುವುದಿಲ್ಲ. ಅಂಥ ಸ್ಥಳದಲ್ಲಿ ಎಷ್ಟೋ ಸೇಲ್ಸ್ ಟ್ಯಾಕ್ಸ್ ಆಫೀಸುಗಳನ್ನು ಕೆಲವು ವ್ಯಾಪಾರಿಗಳು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಸರ್ಕಾರಕ್ಕೆ ಸರಿಯಾಗಿ ತೆರಿಗೆಯನ್ನು ಕೊಡದೆ ಸರ್ಕಾರಕ್ಕೆ ವಂಚನೆ ಮಾಡುತ್ತಿದ್ದಾರೆ. ಇದನ್ನು ತಡೆಹಿಡಿಯಬೇಕು. ಏಕೆಂದರೆ ಇವತ್ತು ಬಡ ರೈತ ಸರ್ಕಾರಕ್ಕೆ ಹಣವನ್ನು ಕಟ್ಟುವಾಗ ಸ್ವಲ್ಪ ಕಡಿಮೆ ಕೊಟ್ಟರೆ ಅದನ್ನು ನಾವು ಅವನಿಂದ ಹಿಂಸೆ ಮಾಡಿ ತೆಗೆದುಕೊಳ್ಳುತ್ತೇವೆ, ಇಲ್ಲದಿದ್ದರೆ ಅವನ ಮನೆಯನ್ನು ಜಪ್ತಿ ಮಾಡುತ್ತೇವೆ. ಆದರೆ ಅದೇ ದೊಡ್ಡ ದೊಡ್ಡ ವ್ಯಾಪಾರಿಗಳು ಈ ರೀತಿ ಮೋಸ ಮಾಡುತ್ತಿದ್ದರೂ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದರಲ್ಲಿ ಕೆಲವು ಅಧಿಕಾರಿಗಳ ಕೈವಾಡ ಇರುವುದರಿಂದ ನಮ್ಮ ಗಮನಕ್ಕೆ ಬಾರದೆ ಬಹಳಷ್ಟು ಹಣ ಸರ್ಕಾರಕ್ಕೆ ಬರಬೇಕಾದುದು ತಪ್ಪಿ ಹೋಗುತ್ತಿದೆ. ಆದುದರಿಂದ ಸರ್ಕಾರಕ್ಕೆ ಬರಬೇಕಾದ ತೆರಿಗೆ ವಂಚನೆಯಾಗದಂತೆ, ಸರ್ಕಾರಕ್ಕೆ ಮೋಸವಾಗದಂತೆ ನೋಡಿಕೊಳ್ಳತಕ್ಕ ವ್ಯವಸ್ಥೆ ಆಗಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುತ್ತಿದ್ದೇನೆ.

ಇನ್ನು ಸೇಲ್ಸ್ ಟ್ಯಾಕ್ಸ್ ಆಫೀಸಿನಲ್ಲಿರತಕ್ಕ ಅಧಿಕಾರಿಗಳನ್ನು 3 ವರ್ಷ ಆದ ಕೂಡಲೇ ಅಲ್ಲಿಂದ ಬೇರೆ ಕಡೆಗೆ ವರ್ಗಾವಣೆ ಮಾಡಬೇಕು. ಏಕೆಂದರೆ ಆ ಜಾಗ ಅವರಿಗೆ ಮಾಮೂಲಿ ಜಾಗವಾಗಿ ಎಲ್ಲಾ ನಮ್ಮ ಕೈಯಲ್ಲಿದ್ದಾರೆ ಎನ್ನತಕ್ಕ ಮಾತನ್ನು ಅಧಿಕಾರಿಗಳು ಹೇಳುತ್ತಾರೆ. ಇದೇ ರೀತಿ ವ್ಯಾಪಾರಿಗಳೂ ಕೂಡ ನಮ್ಮ ಕೈಯಲ್ಲಿದ್ದಾರೆಂದು ಹೇಳಿ ಮೋಸಮಾಡುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಅದುದರಿಂದ ಅಲ್ಲಿ ಮೋಸ ನಡೆಯುವುದನ್ನು ತಪ್ಪಿಸುವುದಕ್ಕೆ 3 ವರ್ಷವಾದಕೂಡಲೇ ಸಾಮೂಹಿಕವಾಗಿ ವರ್ಗಾವಣೆ ಮಾಡತಕ್ಕದ್ದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಈ ರೀತಿ ಮಾಡಿದರೆ ಸ್ವಲ್ಪ ಮಟ್ಟಿಗೆ ಮೋಸ ಕಡಿಮೆಯಾಗುತ್ತದೆ. ಸರ್ಕಾರಕ್ಕೆ ಬರತಕ್ಕ ತೆರಿಗೆ ಹಣ ಜಾಸ್ತಿ ಬರುತ್ತದೆಂದು ಹೇಳಬಯಸುತ್ತೇನೆ.

ಇನ್ನು ಇದಕ್ಕಿಂತ ದೊಡ್ಡ ವಿಷಯ ಎಂದರೆ ಚೆಕ್‌ಪೋಸ್ಟ್‌ಗಳು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಖ್ಯವಾದುವು ಎಂದರೆ ಮುಕ್ಕ, ಉಲ್ಲಾಳ, ತೊಕೊಟ್ಟು, ವಿಟ್ಲ ಇದೇರೀತಿ ಇನ್ನೂ ಅನೇಕ ಕಡೆಗಳಲ್ಲಿ ಚೆಕ್‌ಪೋಸ್ಟ್‌ಗಳಿವೆ. ಅದು ಕೇರಳಕ್ಕೆ ಹೋಗತಕ್ಕ ಗಡಿ ಪ್ರದೇಶ. ಅಲ್ಲಿ ಆಗತಕ್ಕ ಅನಾಹುತವನ್ನು ವರ್ಣನೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಶ್ರೀಗಂಧ ಹೋಗುತ್ತದೆ, ಬೀಟೆ ಹೋಗುತ್ತದೆ, ಇನ್ನೂ ಬೇರೆ ಬೇರೆ ವಸ್ತುಗಳು ಕಳ್ಳಸಾಗಣೆಯಿಂದ ಹೋಗುತ್ತವೆ. ಹತ್ತು ಲೋಡುಗಳು ಹೋಗುವಾಗ ಯಾವುದೋ ಒಂದು ಸದರ್ಭದಲ್ಲಿ ಒಂದು ಲೋಡನ್ನು ನಿಮ್ಮ ಅಧಿಕಾರಿಗಳು ಹಿಡಿದಂತೆ ಮಾಡಿ ನಾವೂ ಹಿಡಿದಿದ್ದೇವೆಂದು ಪೇಪರ್‌ನಲ್ಲಿ ಹಾಕಿಸುತ್ತಾರೆ. ಅಂದರೆ 9 ಲೋಡಿನದು ಹೋಗುತ್ತದೆ. ಈ ರೀತಿಯೆಲ್ಲಾ ನಡೆಯುತ್ತಿದೆ. ಇದು ಗೊತ್ತಾದರೆ ಏನು ಮಾಡುವುದಕ್ಕೆ ಸಾಧ್ಯ? ಚೆಕ್ ಪೋಸ್ಟ್‌ನಿಂದ 2 ಕಿಲೋಮೀಟರ್ ಹೋದರೆ ಆ ಲಾರಿಯವನು ಕೇರಳಕ್ಕೆ ಹೋಗಿಬಿಡುತ್ತಾನೆ. ಆದುದರಿಂದ ಉಲ್ಲಾಳ ತೊಕ್ಕೋಟ ಚೆಕ್ ಪೋಸ್ಟ್‌ಗೂ , ಇದೇ ರೀತಿ ಮುಕ್ಕದಲ್ಲಿರತಕ್ಕ ಚೆಕ್‌ಪೋಸ್ಟ್‌ಗೂ ಅಡ್ಯಾರ್ ಕಣ್ಣೂರಿನಲ್ಲಿರತಕ್ಕ ಚೆಕ್ ಪೋಸ್ಟ್‌ಗೂ ವಿಟ್ಲದ ಉಕ್ಕಡದಲ್ಲಿರತಕ್ಕ ಚೆಕ್‌ಪೋಸ್ಟ್‌ಗೂ ಸರ್ಕಾರದವರು ಹೆಚ್ಚಿನ ನಿಗಾ ಇಡಬೇಕು. ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ನೇಮಕ ಮಾಡಬೇಕು. ಸರಿಯಾದ ರೀತಿಯಲ್ಲಿ ತಪಾಸಣೆ ಮಾಡದಿದ್ದರೆ ಇದರಿಂದಾಗತಕ್ಕ ಅನಾಹುತ ಬಹಳ ದೊಡ್ಡದೆಂದು ಹೇಳಬಯಸುತ್ತೇನೆ. ಸರ್ಕಾರಕ್ಕೂ ಬಹಳ ದೊಡ್ಡ ಮೋಸವಾಗಿ, ಸರ್ಕಾರಕ್ಕೆ ಬರತಕ್ಕ ತೆರಿಗೆ ಸರಿಯಾಗಿ ಬಾರದಿದ್ದರೆ ಸರ್ಕಾರದ ಯೋಜನೆಗಳಿಗೆ ಹಣವಿಲ್ಲದೆ ಎಲ್ಲಾ ಯೋಜನೆಗಳೂ ತಲೆಕೆಳಗಾಗುತ್ತವೆ. ಆದುದರಿಂದ ಇದರ ಬಗ್ಗೆ ವಿಶೇಷ ನಿಗಾವಹಿಸಬೇಕು. ನಾನು ಪತ್ರಿಕೆಯಲ್ಲಿ ಒಮ್ಮೆ ಒಂದು ವಿಚಾರವನ್ನು ಓದಿದ ನೆನಪಿದೆ . ಚೆಕ್ ಪೋಸ್ಟ್ ಎಂದರೆ ಕಾಮಧೇನುವಂತೆ, ನೀವು ಏನೇ ಮಾಡಿದರೂ ಅದು ಜಮಾ ಆಗತಕ್ಕಂಥ ಸ್ಥಳ ಎಂದು ಜನರು ಹೇಳುತ್ತಾರೆ. ಯಾರೋ ಒಬ್ಬರು ಶಾಸಕರು ಹೇಳಿದ್ದು ನಾನು ಪತ್ರಿಕೆಯಲ್ಲಿ ಓದಿದ ನೆನಪು. ಅದರಲ್ಲಿ ಅವರು ನೀವು ನಿಜವಾಗಿಯೂ ನನ್ನನ್ನು ಒಂದು ಚೆಕ್‌ಪೋಸ್ಟ್‌ನಲ್ಲಿ ಒಬ್ಬ ಜವಾನನ್ನಾಗಿ ಕೆಲಸಕ್ಕೆ ನೇಮಿಸಿದರೆ ಸಾಕು ನಾನು ಶಾಸಕ ಸ್ಥಾನವನ್ನು ಬಿಡಲಿಕ್ಕೆ ತಯಾರಿದ್ದೇನೆಂದು ಹೇಳಿದ್ದರು. ಅಂದರೆ ಅದು ಅಷ್ಟು ಕಮಾಯ್ ಆಗತಕ್ಕಂಥ, ಅಷ್ಟು ಹಣಬರತಕ್ಕಂಥ ವ್ಯವಸ್ಥೆ ಇರತಕ್ಕಂಥ ಜಾಗ ಎಂದು ಅವರು ಹೇಳಿದ್ದು. ಯಾವುದೋ ಪತ್ರಿಕೆಯಲ್ಲಿ ಇದನ್ನು ಓದಿದ ನೆನಪು ನನಗೆ ಬರುತ್ತಿದೆ. ನಿಜವಾಗಿಯೂ ಇದು ಸತ್ಯವಾದಂಥ ಮಾತು. ಇಲ್ಲಿನ ಅನೇಕ ಜವಾನರು ಅನೇಕ ಅಟೆಂಡರುಗಳು ಈವತ್ತು ಮನೆಗಳನ್ನು ಕೊಂಡಿರುವುದನ್ನು ನಾವು ನೋಡುತ್ತೇವೆ. ಅವರು ಮನೆ ಕಟ್ಟಬಾರದೆಂದು ಅವರಿಗೆ ಒಳ್ಳೆಯದಾಗಬಾರದೆಂದು ನಾನು ಹೇಳುವುದಿಲ್ಲ. ಇಲ್ಲಿ ಸರ್ಕಾರದ ತಲೆ ಹೊಡೆದು, ಜನತೆಯ ತಲೆಯನ್ನು ಹೊಡೆದು, ಎಲ್ಲರ ತಲೆಯನ್ನು ಹೊಡೆದು

ದೊಡ್ಡವರಾಗುವುದು ದೊಡ್ಡದಲ್ಲ. ಸರ್ಕಾರಕ್ಕೆ ಮೋಸ ಮಾಡುವುದು ಸರಿಯಲ್ಲ. ಅವರು ಬೆವರು ಸುರಿಸಿ ಆಸ್ತಿ ಮಾಡಿದ್ದರೆ ಚಿಂತೆಯಿಲ್ಲ. ಆದರೆ ಇಂದು ದುಡಿದು ಬೆವರು ಸುರಿಸಿ ಆಸ್ತಿ ಮಾಡತಕ್ಕಂಥವರು ಯಾರು ಇದ್ದಾರೆ ? ಎಲ್ಲರೂ ಪಾಪದ ಅನ್ನವನ್ನು ತಿನ್ನತಕ್ಕಂಥ ಪರಿಸ್ಥಿತಿ ಬಂದೊದಗಿದೆ; ಇರಲಿ, ಆದ್ದರಿಂದ ಚೆಕ್‌ಪೋಸ್ಟ್‌ಗಳಿಗೆ ಒಳ್ಳೆಯ ಬಂದೋಬಸ್ತ್ ಮಾಡತಕ್ಕಂತಹದ್ದು ಬಹಳ ಮುಖ್ಯ. ಅದರಲ್ಲಿಯೂ, ಉಲ್ಲಾಳ ತಕ್ಕೋಟೆಯಲ್ಲಿ ಏನು ಮಾಡುತ್ತಾರೆಂದರೆ ಅವರಿಗೆ ಕೇಸ್‌ಗಳನ್ನು ಹಾಕಲಿಕ್ಕೇ ಬೇಕು. ಅದಕ್ಕಾಗಿ ಬಡವರು ಯಾರಾದರೂ ಮನೆಗೆ ಬೇಕಾದ ಸಾಮಾನುಗಳನ್ನು ಕೊಂಡೊಯ್ಯುವಾಗಿ ಹಿಡಿಯುವುದು. ಜೋರುಮಾಡುವುದು ನಂತರ ಅದಕ್ಕೆ ಇಷ್ಟು ದಂಡ ಎಂದು ಹಾಕುವುದು. ಈ ರೀತಿಯ ಕೆಲಸಗಳನ್ನು ಮಾಡುತ್ತಿದ್ದಾರೆ. ಇದು ಸರಿಯಲ್ಲ. ಗುಬ್ಬಿಯಮೇಲೆ ಬ್ರಹ್ಮಾಸ್ತ್ರವಲ್ಲ, ದೊಡ್ಡವರ ಮೇಲೆ ಬ್ರಹ್ಮಾಸ್ತ್ರ ಬಿಡಲಿ, ರಾಮ ಬಾಣವನ್ನು ಬಿಡಲಿ ನಾನು ಬೇಡವೆಂದು ಹೇಳುವುದಿಲ್ಲ. ಈ ಪಾಪದ ಬಡವರ ಮೇಲೆ ಏಕೆ ಕೇಸ್ ಹಾಕಬೇಕು. ಮನೆಗೆ ಏನಾದರೂ ಸಾಮಾನು ಕಟ್ಟಿಗೆ ಕೊಂಡು ಹೋಗುವಾಗ ಅದನ್ನು ಹಿಡಿದು ಅವನಿಗೆ ಜೋರು ಮಾಡಿ ಆ ರೀತಿಯಲ್ಲಿ ದಂಡ ಹಾಕತಕ್ಕಂಥದ್ದು ನಮ್ಮ ಕಡೆ ನಡೆಯುತ್ತಿದೆ. ಈ ಬಗ್ಗೆ ಎಷ್ಟೋ ದೂರುಗಳು ನಮಗೆ ಬರುತ್ತಿದೆ. ಈ ರೀತಿ ಮಾಡಬಾರದು. ಅನ್ಯಾಯವಾಗಿ ಲಾರಿಗಳಲ್ಲಿ ಲೋಡ್ ಹೋಗುವುದನ್ನು ತಡೆದು ಸರಿಯಾದ ರೀತಿಯಲ್ಲಿ ಪರೀಕ್ಷೆ ಮಾಡತಕ್ಕಂಥ ವ್ಯವಸ್ಥೆ ಆಗಲೇಬೇಕು. ಈ ರೀತಿ ಮಾಡಿದರೆ ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಬರಲ್ಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಸರಿಯಾದಂತಹ ಉಸ್ತುವಾರಿ ಇರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇರೀತಿಯಲ್ಲಿ ನಮ್ಮ ಖಜಾನೆಯಿಂದ ಇವತ್ತು ಮಾಸಾಶನ ಸಿಕ್ಕತಕ್ಕಂಥ ಜನರಿಗೆ ಅದು ವೃದ್ಧಾಪ್ಯವೇತನವಾಗಲಿ, ಅಂಗವಿಕಲರ ವೇತನವಾಗಲಿ, ಅದು ಸರಿಯಾಗಿ ಸಿಕ್ಕುವಂಥ ವ್ಯವಸ್ಥೆಯಾಗಬೇಕು. ಈಗ ನಾನು ತಿಳಿದಮಟ್ಟಿಗೆ ನಮ್ಮಲ್ಲಿ ನಾಲ್ಕು ತಿಂಗಳಾದರೂ ಕೆಲವು ಅಂಗವಿಕಲರಿಗೆ ವೃದ್ಧಾಪ್ಯವೇತನ ಇರುವವರಿಗೆ ಕೆಲವು ವಿಧವಾ ಮಾಸಾಶನ ಇರುವವರಿಗೆ ಸಿಕ್ಕದಿರುವಂಥ ವ್ಯವಸ್ಥೆ ಇರುತ್ತದೆ. ಇದಕ್ಕೆ ಕಾರಣವೇನು?ಅಧಿಕಾರಿಗಳ ಉದಾಸೀನತೆಯೋ ಅಥವಾ ಅಲ್ಲಿರತಕ್ಕಂಥ ಅಧಿಕಾರಿಗಳು ಸರಿಯಾದಂಥ ರೀತಿಯಲ್ಲಿ ಕೆಲಸ ಮಾಡದೇ ಇರುವುದೋ ಎಂದು ನಮಗೆ ಗೊತ್ತಾಗುತ್ತಿಲ್ಲ. ಈಗ ಕೊಟ್ಟರೆ, ಮತ್ತೆ ಮೂರು ತಿಂಗಳು ಇಲ್ಲ. ಈ ರೀತಿ ಆಗುತ್ತಿದೆ. ಇದನ್ನು ಸ್ವಲ್ಪ ನೋಡಬೇಕು. ಮತ್ತೆ ವೃದ್ಧಾಪ್ಯವೇತನ ವಿಧವಾ ಮಾಸಾಶನ, ಅಂಗವಿಕಲರ ವೇತನ ಯಾವುದೂ ತೊಂದರೆ ಇಲ್ಲದೆ ಜನರಿಗೆ ಸಿಗುವಂಥ ವ್ಯವಸ್ಥೆಯಾಗಬೇಕು. ನಮ್ಮ ಮುಖ್ಯಮಂತ್ರಿಗಳಾದಂಥ ಶ್ರೀ ಬಂಗಾರಪ್ಪನವರ ಸರ್ಕಾರ ಬಂದಮೇಲೆ 50 ರೂಪಾಯಿ ಇದ್ದದ್ದನ್ನು ಹೆಚ್ಚು ಮಾಡಿದ್ದು ಬಹಳ ಸಂತೋಷದ ವಿಚಾರ. ಅದು ಮಾತ್ರವಲ್ಲದೆ ನಮ್ಮ ಮನಸ್ಸಿನ ಅನಿಸಿಕೆಗಳನ್ನು ಹೇಳಿದರೆ ಒಮ್ಮೊಮ್ಮೆ ಅದು ಆಗಿ ಹೋಗುತ್ತದೆ. ಉದಾಹರಣೆಗೆ ಫೆಬ್ರವರಿ 29ನೇ ತಾರೀಖು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಗಳನ್ನು ಸಲ್ಲಿಸತಕ್ಕಂಥ ಕಾಲದಲ್ಲಿ ನಾನು ಕೆಲವು ಸೂಚನೆಗಳನ್ನು ಕೊಟ್ಟಿದ್ದೆ. ನಾನು ಅದನ್ನು 1985ನೇ ಇಸವಿಯಿಂದಲೂ ಕೊಡುತ್ತಲೇ ಇದ್ದೆ. ಆದರೆ ಏನೂ ಆಗಲಿಲ್ಲ. ವಿಭಾಗಾಧಿಕಾರಿಗಳ ಕಛೇರಿಗಳನ್ನು ಮುಚ್ಚಲೇಬೇಕು, ಅಸಿಸ್ಟೆಂಟ್ ಕಮೀಷನರ್ ಆಫೀಸುಗಳನ್ನು ಮುಚ್ಚಬೇಕು, ಎದೇ ರೀತಿಯಲ್ಲಿ ದುಂದು ವೆಚ್ಚವಾಗತಕ್ಕಂಥದ್ದನ್ನು ಕಡಿಮೆ ಮಾಡಬೇಕೆಂಬ ನಮ್ಮ ಅನಿಸಿಕೆಗಳನ್ನು 85ನೇ ಇಸವಿಯಿಂದಲೂ ಹೇಳುತ್ತಲೇ ಇದ್ದೆ. ಆದರೆ ಯಾರೂ ಕಿವಿಗೊಡಲಿಲ್ಲ. ಆದರೆ ಮಾನ್ಯ ಬಂಗಾರಪ್ಪನವರು ಮೂರನೇ ತಾರೀಖಿನ ದಿವಸ ಬಜೆಟ್‌ನ್ನು ಮಂಡನೆ ಮಾಡುವಾಗ ಅದು ಕಾಕತಾಳೀಯ ನ್ಯಾಯದಂತೆ

ಆ ವಿಭಾಗಾಧಿಕಾರಿಗಳ ಹುದ್ದೆಗಳನ್ನು ನಿಲ್ಲಿಸಿದ್ದು, ಆ ಅಸಿಸ್ಟೆಂಟ್ ಕಮೀಷನರನ್ನು ತೆಗೆದದ್ದು , ಎ.ಇ.ಓ ಗಳನ್ನು ತೆಗೆದದ್ದು ಈ ರೀತಿಯಲ್ಲಿ ಅನಾವಶ್ಯಕವಾಗಿ ಆಗತಕ್ಕಂಥ ದುಂದು ವೆಚ್ಚ ನಿಲ್ಲಿಸಿದ್ದು ನಾವು ಸರ್ಕಾರವನ್ನು ಮೆಚ್ಚತಕ್ಕಂಥ ವಿಚಾರವಾಗಿದೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಈ ರೀತಿ ಇನ್ನೂ ಅನೇಕ ವಿಚಾರಗಳು ಉಂಟು. ಅದನ್ನೆಲ್ಲಾ ಅನಾವಶ್ಯಕವಾಗಿ ದುಂದು ವೆಚ್ಚವಾಗತಕ್ಕಂಥ ವ್ಯವಸ್ಥೆಗೆ ಕಲ್ಲು ಹಾಕುವಂಥದ್ದು ಒಳ್ಳೆಯದು. ಏತಕ್ಕೆಂದರೆ ಶ್ರೀಯುತ ವಿಶ್ವನಾಥ್‌ರವರು ಬಹಳ ಚೆನ್ನಾಗಿ ಹೇಳಿದರು, ಒಬ್ಬ ಮನುಷ್ಯನಿಗೆ ಒಂದು ನ್ಯಾಯ ಸಿಗಬೇಕಾದರೆ ಅಲ್ಲಿ ಹೋಗುವುದು ಇಲ್ಲಿ ಹೋಗುವುದು , ಅದರ ಬಗ್ಗೆ ಸರ್ವಜ್ಞ ಹೇಳಿದ್ದಾನೆ. ಏನೆಂದರೆ,"ಆಗ ಬಾ, ಈಗ ಬಾ, ಹೋಗಿಬಾ ಎನ್ನದೆ ಆಗಲೆ ಕರೆದು ಕೊಡುವವನ ದಾನ, ಹೊನ್ನಾಗದೆ ಬಿಡದು ಸರ್ವಜ್ಞ" ಎಂಬಂತೆ

ಮತ್ತೆ ಬಾ, ನಾಳೆ ಬಾ, ನಾಳಿದ್ದು ಬಾ, ಎಂಟು ದಿವಸದ ನಂತರ ಬಾ ಎಂದು ಹೇಳಿ ಒಬ್ಬ ರೈತನಿಗೆ, ಸಾಮಾನ್ಯ ಮನುಷ್ಯನಿಗೆ ತೊಂದರೆ ಕೊಡುವುದು ಉಂಟಲ್ಲ, ಅದು ಬಹಳ ದೊಡ್ಡ ಪಾಪದ ಕೆಲಸ. ಸರ್ವಜ್ಞ ಹೇಳಿದಹಾಗೆ, ಆಗ ಈಗ ಎನ್ನದೆ, ಆಗಲೇ ಕೊಡುವುದು ಒಳ್ಳೆಯದು. ಅವನ ಕಷ್ಟ ಅವನು ಏನೋ ಹೇಳಿರುತ್ತಾನೆ, ಅದನ್ನು ಹೌದೋ ಅಲ್ಲವೋ ಎಂದು ನೋಡುವಂಥಾದ್ದು. ಅವನು ಬಯಸಿದ ಕೆಲಸವನ್ನು ಬಹಳ ಸುಲಭದಲ್ಲಿ ಒಂದೆರಡು ಮೂರು ರೌಂಡ್‌ಗಳಲ್ಲಿ ಮಾಡತಕ್ಕಂಥ ವ್ಯವಸ್ಥೆ ಆದರೆ ಹಳ್ಳಿಗರಿಗೆ ಎಷ್ಟು ಸಂತೋಷವಾಗುತ್ತದೆ. ಅವರು ಎಂಟು ದಿವಸ ಹತ್ತುದಿವಸ ಒಂದು ತಿಂಗಳು ಎರಡು ತಿಂಗಳು ಮೂರು ತಿಂಗಳು ಒಂದು ಅರಿಕೆಕೊಟ್ಟು, ತಿರುಗಾಡಿ, ಸುತ್ತಾಡಿ, ಸುಳಿದಾಡಿ ಕಡೆಗೆ ಅವರು ನಮ್ಮ ಕಡೆ ಬಂದು ಬೇಕಾದಷ್ಟು ಟೀಕೆ ಮಾಡಲಿಕ್ಕೆ ಶುರುಮಾಡುತ್ತಾರೆ. ನಮಗೆ ನಡೆದು ಸಾಕಾಯಿತು, ಹಣ ಖರ್ಚಾಯಿತು, ಅರ್ಜಿ ಇನ್ನೂ ಫೈಸಲು ಆಗಿಲ್ಲವೆಂದು ಹೇಳುತ್ತಾರೆ. ಸರ್ಕಾರದ ಭಾವನೆ ಒಳ್ಳೆಯದುಂಟು. ಅಧಿಕಾರಿಗಳು ಮನಸ್ಸು ಮಾಡಬೇಕು. ಅದರಿಂದ ಅವರಿಗೆ ಪುಣ್ಯ ಬರುತ್ತದೆ. ಅಧಿಕಾರಿಗಳಿಗೆ, ಶಾಸಕರಿಗೆ ವೇತನ ಸಿಗುವುದು ಮುಖ್ಯವಲ್ಲ. ಇದರಲ್ಲಿ ಪಾಪ, ಪುಣ್ಯ ಎರಡೂ ಉಂಟು. ಪುಣ್ಯ ಬೇಕಾದರೆ ಒಳ್ಳೆಯ ಕೆಲಸ ಮಾಡಬೇಕು. ಆದುದರಿಂದ ನಾವು ಕೆಲವು ಕಛೇರಿಗಳಿಗೆ ಹೋದರೆ ಅಲ್ಲಿ ಅಧಿಕಾರಿಗಳೇ ಇರುವುದಿಲ್ಲ. ಆದಕ್ಕೆ ಮಾನ್ಯ ವಿಶ್ವನಾಥ್ ಅವರು ಸಚಿವಾಲಯದ ಒಳಗಿನ ಕಥೆಯನ್ನು ಹೇಳಿದರು. ಖುರ್ಚಿ ಮೇಲೆ ಕೋಟು ಇರುತ್ತದೆ, ಅವರು ಕಾಫಿ ಕುಡಿಯುವುದಕ್ಕೆ ಹೋಗಿರುತ್ತಾರೆ. ಕೇಳಿದರೆ ಈಗ ಬರುತ್ತಾರೆ, ಅಲ್ಲಿ ಹೋಗಿದ್ದಾರೆ, ಇಲ್ಲಿ ಹೋಗಿದ್ದಾರೆಂದು ಹೇಳುತ್ತಾರೆ. ಈ ರೀತಿ ಕಛೇರಿಗಳಲ್ಲಿ ಸರಿಯಾದ ರೀತಿಯಲ್ಲಿ ಆಯಾಯ ಸ್ಥಾನಗಳಲ್ಲಿ ಅಧಿಕಾರಿಗಳು ಇಲ್ಲದಿರುವುದು, ಕ್ಲಾರ್ಕ್‌ಗಳು ಇಲ್ಲದಿರುವುದು ಬಹಳ ಅಪಾಯ. ಇದರಿಂದಾಗಿ ಹಳ್ಳಿಯಿಂದ ಬಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಆಡಳಿತದಲ್ಲಿ ಬಿಗಿಯನ್ನು ತರಬೇಕು. ಹಿಂದೆ ಬ್ರಿಟಿಷರ ಕಾಲ ಹೇಗೆ ಇತ್ತು ? ಲೀಲಾಜಾಲವಾಗಿ ಮಿಂಚಿನ ವೇಗದಲ್ಲಿ ಕೆಲಸವಾಗುತ್ತಿತ್ತು. ಜನ ಗಡ ಗಡ ನಡುಗುತ್ತಿದ್ದರು. ಇದು ನಾವು ನೋಡಿದ ಚಿತ್ರ. ಜನ ಅಲ್ಲಿ ಹೋಗಲಿಕ್ಕೆ , ಬರಲಿಕ್ಕೆ, ಮಾತನಾಡಲಿಕ್ಕೆ, ಕೆಲಸ ಮಾಡಲಿಕ್ಕೆ ಹೆದರುತ್ತಿದ್ದರು. ಕೆಲಸ ಜಟ್‌ಪಟ್ ಎಂದು ಆಗುತ್ತಿತ್ತು. ಆದುದರಿಂದ ಇವತ್ತು ಅದೇ ರೀತಿಯಲ್ಲಿ ಆಗಬೇಕು. ಇವತ್ತು ಏನಾದರೂ ಹೆಚ್ಚು ಕಡಿಮೆ ಆದರೆ ಲೋಕಾಯುಕ್ತ ಉಂಟು. ಅವರು ತಪ್ಪು ಮಾಡಿದವರನ್ನು ಹಿಡಿದು ಶಿಕ್ಷೆಗೆ ಗುರಿ ಮಾಡಬೇಕು. ಅಧಿಕಾರ ಇರತಕ್ಕ ಜನರು ಒಳ್ಳೆಯ ರೀತಿಯಲ್ಲಿ ಅದನ್ನು ಚಲಾಯಿಸಿ ಬಡಜನತೆಗೆ ಪ್ರಜಾಪ್ರಭುತ್ವದಲ್ಲಿ ಉಪಕಾರ ಮಾಡದಿದ್ದರೆ ಅದರಿಂದ ಹಾನಿ ಬಹಳ ದೊಡ್ಡದು. ಆ ರೀತಿ

ಆಗಬಾರದೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇನ್ನು ಮಾನ್ಯ ಮುಖ್ಯ ಮಂತ್ರಿಗಳ ಬಳಿ ಇರತಕ್ಕ ಖಾತೆಗಳ ಬಗ್ಗೆ ಹೇಳುವುದಾದರೆ ಅನೇಕ ವಿಚಾರಗಳನ್ನು ಹೇಳಬಹುದು. ನಾವು ಹೇಳುವುದು, ಅವರು ಬಹಳ ಮುಖ್ಯವಾಗಿ ಹಣವನ್ನು ಸಂಪನ್ಮೂಲವನ್ನು ಕೂಡಿಸುವ ವ್ಯವಸ್ಥೆ ಮಾಡಬೇಕು. ಅವರು ಸಂಪನ್ಮೂಲವನ್ನು ಕೂಡಿಸಿ ತೆರಿಗೆ ಕೊಡದೆ ಇರುವುದನ್ನು ವಸೂಲ್ಮಾಡುವುದಕ್ಕೆ ಅದ್ಭುತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಅದೇ ರೀತಿಯಲ್ಲಿ ಎಲ್ಲಾ ಕಛೇರಿಗಳಲ್ಲಿ, ಹಳ್ಳಿಯಿಂದ ಬರತಕ್ಕ ಜನರಿಗೆ ಉಪಕಾರ ಮಾಡಬೇಕೆಂಬ ಕಟ್ಟಪ್ಪಣೆ ಮಾಡಿ ಎಲ್ಲಾ ಕಛೇರಿಗಳಲ್ಲೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತೆ ಮಾಡುವುದು ಮುಖ್ಯ. ಅದೇ ರೀತಿಯಲ್ಲಿ , ಹಳ್ಳಿಯ ಜನರು ವಿಧಾನಸೌಧಕ್ಕೆ ಕೆಲಸಕ್ಕೆ ಬರುತ್ತಿದ್ದಾರೆ. ಆದರೆ ವಿಧಾನಸೌಧದಲ್ಲಿ ಆ ಕೆಲಸಗಳು ನಿಧಾನವಾಗುವುದರಿಂದ ವಿಧಾನಸೌಧವನ್ನು ನಿಧಾನಸೌಧ ಎಂದು ಜನರು ಹೇಳುವುದಕ್ಕೆ ತೊಡಗಿದ್ದಾರೆ. ಅದು ಆಗಬಾರದು. ಅದು ಆಗದಂತೆ ನೋಡಿಕೊಳ್ಳಬೇಕು. ಇನ್ನು ಲಾಟರಿ ವಿಷಯ ಹೇಳಬೇಕಾಗಿದೆ. ಇದಕ್ಕೆ ನಾನು ಸಂಪೂರ್ಣ ವಿರೋಧ ಇರತಕ್ಕ ಮನುಷ್ಯ. ಏಕೆಂದರೆ ಲಾಟರಿ ಎಂಬುದು ಜೂಜು. ಈ ಜೂಜಿಗೆ ಜನರನ್ನು ಪ್ರೋತ್ಸಾಹಿಸುವುದು ಸರಿಯಲ್ಲ. ಲಕ್ಷಾಂತರ, ಕೋಟ್ಯಾಂತರ ಜನರ ಲಕ್ಷಗಟ್ಟಲೆ, ಕೋಟಿಗಟ್ಟಲೆ ದುಡ್ಡು ಹೋಗಿ ಒಬ್ಬರಿಗೆ ಸೇರುವುದು ಅಷ್ಟಾಗಿ ಸರಿಯಾದುದಲ್ಲ. ಅದರಿಂದ ಸರ್ಕಾರಕ್ಕೆ ಎರಡು ಮೂರು ಕೋಟಿ ರೂಪಾಯಿ ಆದಾಯ ಬರುತ್ತದೆ, ಹತ್ತು ಕೋಟಿ ರೂಪಾಯಿಗಳ ಟಿಕೆಟ್ ಖರ್ಚಾಗಿದೆ ಎಂದು ಹೇಳುವುದು ಸರಿಯಾದ ಕ್ರಮ ಅಲ್ಲ. ಈ ರೀತಿಯಲ್ಲಿ ಎಲ್ಲಿ ನೋಡಿದರೂ ಸಾರಾಯಿ ಅಂಗಡಿಗಳು ಹೇಗೆ ಉಂಟೋ, ಅದರಿಂದ ಯಾವ ರೀತಿ ಹಣ ಬರುತ್ತದೋ ಅದೇ ರೀತಿಯಲ್ಲಿ ಲಾಟರಿಯಿಂದ ಬರುತ್ತದೆಂದು ಲೆಕ್ಕ. ಎಲ್ಲಿ ನೋಡಿದರೂ ಲಾಟರಿ ಟಿಕೆಟ್ ಮಾರಾಟ ಮಾಡತಕ್ಕ ಅಂಗಡಿಗಳು, ಹುಡುಗರು. ಈ ರೀತಿ ಇರತಕ್ಕ ಲಾಟರಿ ಸರ್ಕಾರಕ್ಕೆ ಹಣ ತಂದರೂ ನೈತಿಕ ವಿಚಾರದಲ್ಲಿ ನೈತಿಕ ಮಟ್ಟದಲ್ಲಿ ನೋಡಿದರೆ ಇದು ಒಳ್ಳೆಯ ಕಾರ್ಯಕ್ರಮ ಅಲ್ಲ. ಆದರೆ ಶ್ರೀ ಮಂಜುನಾಥ್ ಅವರು ಬಂದಮೇಲೆ ಆದಷ್ಟೂ ಸುಧಾರಣೆ ಮಾಡುವುದಕ್ಕೆ ನೋಡುತ್ತಿದ್ದಾರೆ. ಆದರೂ ಲಾಟರಿ ಬಗ್ಗೆ ನನ್ನ ದೃಷ್ಟಿಯಲ್ಲಿ, ಇಸ್ಲಾಂ ತತ್ವದಲ್ಲಿ ಹೇಳಿದ್ದು ಮದ್ಯಪಾನ ನಿಷೇದ ಆಗಬೇಕು, ಜೂಜು ಲಾಟರಿ ಇರಬಾರದು. ನೂರಕ್ಕೆ ನೂರು ನಿಷೇಧ ಆಗಬೇಕು. ಆ ರೀತಿ ಆಗುತ್ತದೆಂದು ಅಲ್ಲ. ಅದರ ಕೆಟ್ಟ ಪರಿಣಾಮ ನೋಡಿ, ಪಾಪದ ವಿಚಾರಗಳನ್ನು ನೋಡಿ ಅವತ್ತೇ ತೀರ್ಮಾನವಾಗಿದೆ. ಅದೇ ರೀತಿಯಲ್ಲಿ ಲಾಟರಿಯನ್ನು ಕೂಡ ರದ್ದು ಮಾಡಿದರೆ ಒಳ್ಳೆಯದು. ಅದಕ್ಕಿಂತ ಬೇರೆ ಏನಾದರೂ ಅಭಿವೃದ್ಧಿ ಕೆಲಸಗಳನ್ನು ಮಾಡಿ ಹಣ ಸಂಗ್ರಹ ಮಾಹಿದರೆ ಒಳ್ಳೆಯದು. ಈವತ್ತಿನ ದಿವಸ, ಸಣ್ಣ ಉಳಿತಾಯದಲ್ಲಿ ಅನೇಕ ಕಾರ್ಯಕ್ರಮಗಳನ್ನು ಜಾರಿ ಮಾಡಲಿಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುತ್ತಿದ್ದಾರೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆ ಸಣ್ಣ ಉಳಿತಾಯದಲ್ಲಿ ಒಳ್ಳೆಯ ಕೆಲಸವನ್ನು ಮಾಡಿದೆ. ಒಳ್ಳೆಯ ಸ್ಥಾನವನ್ನೂ ಕೂಡ ಪಡೆದಿದೆ. ಆದ್ದರಿಂದ ಸಣ್ಣ ಉಳಿತಾಯದ ಬಗ್ಗೆ ಹೆಚ್ಚಿನ ಪ್ರಚಾರ ಆಗಬೇಕು. ಪತ್ರಿಕೆಯಲ್ಲಿ ಅಲ್ಲಿ ಇಲ್ಲಿ ಪ್ರಚಾರ ಆಗಬೇಕು. ಹಳ್ಳಿ ಹಳ್ಳಿಗೆ ಕರಪತ್ರಗಳನ್ನು ಹಂಚಬೇಕು. ಅಲ್ಲಿ ಸಭೆಗಳನ್ನು ಮಾಡಿ ಸಣ್ಣ ಉಳಿತಾಯದಲ್ಲಿ ಹಣ ತೊಡಗಿಸಿ ಎಂದು ಹೇಳಿದರೆ ನಿಜವಾಗಿ ಅದು ಬಹಳ ಒಳ್ಳೆಯ ಕಾರ್ಯಕ್ರಮವಾಗುತ್ತದೆ. ಅದರ ಬಗ್ಗೆ ಮಂತ್ರಿಗಳಾದ ಮಂಜುನಾಥ್ ಅವರು ಬೇರೆ ಬೇರೆ ಕಡೆಗೆ ತಿರುಗಾಡುತ್ತಿದ್ದಾರೆ. ಮಂಗಳೂರಿಗೆ ಕೂಡ ಬಂದಿದ್ದಾರೆ. ಅವರು ಬಂದಮೇಲೆ ಹೆಚ್ಚು ಹೆಚ್ಚು ಕಾರ್ಯಕ್ರಮ ಇದರಲ್ಲಿ ನಡೆಯುತ್ತಿದೆ ಎಂದು ನಾವು ಕೇಳುತ್ತಿದ್ದೇವೆ. ಅದರೆ ವಿಶೇಷವಾಗಿ ಲಾಟರಿ ಬದಲು ಬೇರೆ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಅಥವಾ ಈಗಿರತಕ್ಕ

ಕ್ರಮವನ್ನು ಬದಲಿಸಲಿಸುವುದಕ್ಕೆ ಯೋಚಿಸಬೇಕು. ಬೇರೆ ಬೇರೆ ರಾಜ್ಯದಿಂದ ಮಾರಾಟಕ್ಕೆ ಲಾಟರಿ ಟಿಕೆಟ್‌ಗಳು ಬರುತ್ತವೆ. ನಮ್ಮ ಕರ್ನಾಟಕದ್ದೇ ಅಲ್ಲ ಬೇರೆ ಬೇರೆ ರಾಜ್ಯಗಳಿಂದ ಬರತಕ್ಕ ಲಾಟರಿಗಳನ್ನು ತೆಗೆದುಕೊಂಡು ಕಡೆಗೆ ಮನೆಯಲ್ಲಿ ನನಗೆ ಬರಲಿಲ್ಲ ನನಗೆ ಬರಲಿಲ್ಲ ಎಂದು ತಲೆ ತಲೆ ಹೊಡೆದುಕೊಳ್ಳುತಕ್ಕ ಪರಿಸ್ಥಿತಿ ಇದೆ. ಇದೆಂಥದ್ದು? ಆದ್ದರಿಂದ ಇದರ ಬಗ್ಗೆ ಬರೆದಿರತಕ್ಕ ನಾಲ್ಕು ಚರಣಗಳನ್ನು ಓದಿ ನನ್ನ ಮಾತು ಮುಗಿಸುತ್ತೇನೆ.

ಅತ್ಯಂತ ಅಂಟು ರೋಗ ಈ ಲಾಟರಿ
ಅತ್ಯಂತ ಅಂಟು ರೋಗ ಈ ಲಾಟರಿ
ಆಸೆ ಹುಟ್ಟಿಸುವ ಉದ್ವೇಗ ಉದ್ರೇಕ ಈ ಲಾಟರಿ
ಆಸೆ ಹುಟ್ಟಿಸುವ ಉದ್ವೇಗ ಉದ್ರೇಕ ಈ ಲಾಟರಿ
ಒಬ್ಬನಿಗೆ ಬಂಪರ್ ಕೋಟಿಗಟ್ಟಲೆ ಜನ ಪಾಪರ್
ಒಬ್ಬನಿಗೆ ಬಂಪರ್ ಕೋಟಿಗಟ್ಟಲೆ ಜನ ಪಾಪರ್
ಇದು ಈ ಲಾಟರಿ.
ಅನಾವಶ್ಯಕ, ವ್ಯರ್ಥ ಹಣ ಸುಲಿಗೆಯ ಕಿರಿಕಿರಿ
ಈ ಲಾಟರಿ ಜನತೆಗೆ, ಊರಿಗೆ ದೊಡ್ಡ ಮಾರಿ
ಇದರಿಂದ ಉಳಿತಾಯ ನಾಶ, ಇದು ಅಪಕಾರಿ
ಎಂದಿಗೂ ಆಗಲಾರದು ಜನತೆಗೆ ಇದು ಸಹಕಾರಿ.

ಉಪಕಾರ ಮಾಡಿ ಬೇರೆ ರೀತಿಯಿಂದ, ಈ ಲಾಟರಿಯನ್ನು ಒಳ್ಳೆಯ ರೀತಿಯಲ್ಲಿ ಜಾರಿಗೆ ತನ್ನಿ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಬೇಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ.ರಾಜುಗೌಡ (ಹನೂರು): ಸನ್ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಇಟ್ಟಿರುವ ಎಲ್ಲಾ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ಮೊಟ್ಟ ಮೊದಲನೆಯದಾಗಿ, ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಇಲಾಖೆ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ. ಯಾವುದೇ ಒಂದು ಯೋಜನೆಯನ್ನು ತಯಾರು ಮಾಡುವಾಗ ಆ ಯೋಜನೆಗೆ ನಿಗದಿಗೊಳಿಸಿರುವ ಹಣದಲ್ಲಿ ಶೇಕಡ 80 ರಷ್ಟು ಭಾಗ ಆ ಯೋಜನೆಯ ಉದ್ದೇಶಕ್ಕೆ ಮಾತ್ರ ಬಳಸತಕ್ಕ ರೀತಿಯಲ್ಲಿ ಯೋಜನೆಯನ್ನು ತಯಾರು ಮಾಡಬೇಕು. ಈಗ ಮಾಡತಕ್ಕ ರೀತಿ ನೋಡಿದಾಗ ಗ್ರಾಮ ಮಟ್ಟದಲ್ಲಾಗಲಿ, ತಾಲ್ಲೂಕು ಮಟ್ಟದಲ್ಲಾಗಲಿ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಆಗತಕ್ಕ ಅನೇಕ ಯೋಜನೆಗಳು ಬಹಳವಾಗಿ ಲೋಪಗಳನ್ನು ಹೊಂದಿದೆ ಎನ್ನದೆ ಗತ್ಯಂತರವಿಲ್ಲ. ಯೋಜನೆಗೆ ನಿಗದಿ ಮಾಡಿರುವ ಹಣದಲ್ಲಿ ಶೇಕಡ 80 ರಷ್ಟು ಭಾಗ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಅಧಿಕಾರಿಗಳಿಗೇ ಖರ್ಚಾಗುತ್ತದೆ. ಕೇವಲ 20ಭಾಗ ಮಾತ್ರ ಜನತೆಗೆ ತಲುಪುತ್ತದೆ. ಇಂಥ ಯೋಜನೆ ನಮಗೆ ಬೇಕಾಗಿಲ್ಲ. ನಾನು ಹೇಳತಕ್ಕದ್ದು ಯೋಜನೆಗಳನ್ನು ಮಾಡತಕ್ಕ ಕಾಲದಲ್ಲಿ ಈ ಅಂಶವನ್ನು ತಾವು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಗೆ ಮೀಸಲಾಗಿಟ್ಟಿರತಕ್ಕ ಹಣದಲ್ಲಿ ಶೇಕಡ 80 ಭಾಗ ಹಣವನ್ನು ಯಾವ ಉದ್ದೇಶಕ್ಕಾಗಿ ಬಳಸಬೇಕೋ ಆ ಉದ್ದೇಶಕ್ಕೆ ಮಾತ್ರ ಬಳಸುವಂಥ ಯೋಜನೆಯನ್ನು ತಯಾರು ಮಾಡಬೇಕೆಂದು ನಾನು ಒತ್ತಿ ಹೇಳುತ್ತಿದ್ದೇನೆ. ಈಗ ನಮ್ಮಲ್ಲಿ ಜಿಲ್ಲಾ ಪರಿಷತ್ತುಗಳು ಹಾಗೂ ಮಂಡಲ ಪಂಚಾಯಿತಿಗಳು ಇವೆ. ತಾವು ಜಿಲ್ಲಾ ಪರಿಷತ್ತಿಗೆ ಎಷ್ಟು ಹಣ ಇಟ್ಟದ್ದೀರಿ ಅದರಲ್ಲಿ ಶೇಕಡ 75 ರಷ್ಟು ಭಾಗ ಸಿಬ್ಬಂದಿಗೇ ಖರ್ಚು ಆಗುತ್ತದೆ. ಜನ ಪ್ರತಿನಿಧಿಗೆ

ಗೌರವ ಧನ, ಅವರ ಟಿ.ಎ. ಡಿ.ಎ.ಗೆ ಅವರ ಮನೆ ಬಾಡಿಗೆಗೆ ವಾಹನ ವೆಚ್ಚಕ್ಕೆ ಮತ್ತು ಅವರ ದೂರವಾಣಿಗೆಂದು ಖರ್ಚಾಗುತ್ತದೆ. ಇದೆಲ್ಲ ಕೂಡ ಸಮಗ್ರವಾಗಿ ಯೋಚನೆ ಮಾಡಿದರೆ ನಿಜವಾಗಿ ಜನಸಾಮಾನ್ಯರಿಗೆ ತಲುಪುವ ಹಣ ಶೇಕಡ 20 ರಷ್ಟು ಮಾತ್ರ. ಇದಕ್ಕೆ ದಯಮಾಡಿ ಕಡಿವಾಣ ಹಾಕಬೇಕು. ಮಂಡಲ ಪಂಚಾಯಿತಿಗೆ ತಲಾ ಆದಾಯ ಕೊಡುತ್ತೀರಿ. ಅದು ಪೂರ್ತಿ ಇತರ ವೆಚ್ಚಕ್ಕೆ ಖರ್ಚಾಗುತ್ತಿದೆ. ಜನಸಾಮಾನ್ಯರಿಗೆ ನಿಜವಾಗಿ ತಲುಪುತ್ತಿಲ್ಲ. ಇಂತಹ ಯೋಜನೆಗಳನ್ನು ದಯಮಾಡಿ ತಯಾರು ಮಾಡುವುದು ಬೇಡ ಎಂದು ಹೇಳಿ ಈ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಜಿಲ್ಲಾ ಪರಿಷತ್ ವಿಭಾಗ ಬಂತು. ಕೊಳ್ಳೇಗಾಲದಲ್ಲಿ ಪಿ.ಡಬ್ಲ್ಯು. ಡಿ ನಂಬರ್ 5 ಸಬ್‌ಡಿವಿಷನ್ ಎಂದು ಇದೆ. ಅಲ್ಲಿ ಸಿಬ್ಬಂದಿಗೆ ಒಂದು ವರ್ಷದಲ್ಲಿ 6 ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆ. ಅಲ್ಲಿ ರಸ್ತೆ ನಿರ್ಮಾಣಕ್ಕೆ 1 ಲಕ್ಷ ರೂಪಾಯಿ ಇಟ್ಟಿದ್ದೇವೆ. ಒಂದು ಲಕ್ಷ ರೂಪಾಯಿ ಖರ್ಚು ಮಾಡುವ ಸಲುವಾಗಿ 6 ಲಕ್ಷ ರೂಪಾಯಿ ಸಿಬ್ಬಂದಿಗೆ ಖರ್ಚು ಮಾಡುತ್ತಿದ್ದೇವೆ. ಜಿಲ್ಲಾಪರಿಷತ್ತಿನ ತಾಂತ್ರಿಕ ವಿಭಾಗ ಇದೆ. ಮೊದಲೇ ದುಂದು ವೆಚ್ಚ ಮಾಡುತ್ತಿದ್ದಾರೆ. ಇವತ್ತು ಸಿಬ್ಬಂದಿ ಎಷ್ಟು? 1990-91ರಲ್ಲಿ ಬಡ್ಜೆಟ್‌ನಲ್ಲಿ ಸ್ಟೇಟ್ ಹೈವೇ ನಲ್ಲಿ ಒಂದೇ ಒಂದು ಲಕ್ಷ ರೂಪಾಯಿ ನಿಗದಿ ಮಾಡಿದ್ದಾರೆ. ಅದನ್ನು ಅನುಷ್ಠಾನ ಮಾಡುವ ಸಿಬ್ಬಂದಿಗೆ 6 ಲಕ್ಷ ರೂಪಾಯಿ ವೆಚ್ಚ ಮಾಡುತ್ತಾರೆ. ದಯಮಾಡಿ ಇಂತಹ ಯೋಜನೆ ತಯಾರು ಮಾಡಿದರೆ ಜನರಿಗೆ ಪ್ರಯೋಜನವಾಗುವುದಿಲ್ಲ. ತಾವು ಯೋಜನೆ ತಯಾರು ಮಾಡುವಾಗ ಹೆಚ್ಚು ಭಾಗದ ಜನರಿಗೆ ಅನುಕೂಲವಾಗುವ ಅಂಶವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಯೋಜನೆಗಳನ್ನು ತಯಾರಿಸಬೇಕು. ಮತ್ತು ಯೋಜನೆಗಳಿಗೆ ನಿಗದಿ ಮಾಡಿರುವ ಹಣ ಪೂರ್ಣ ಪ್ರಮಾಣದಲ್ಲಿ ಖರ್ಚು ಆಗುವ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ. ತಾವು ಪ್ರಾದೇಶಿಕ ಅಥವಾ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ವಾಣಿಜ್ಯ ಬ್ಯಾಂಕ್‌ಗಳನ್ನು ತೆರೆಯುವ ವ್ಯವಸ್ಥೆ ಮಾಡಬೇಕು. ಜನಸಂಖ್ಯೆಗೆ ಅನುಗುಣವಾಗಿ ತಾವು ಈ ವ್ಯವಸ್ಥೆಯನ್ನು ಮಾಡಿಲ್ಲ. ಇವತ್ತು ಜಿಲ್ಲಾಮಟ್ಟದಲ್ಲಿ ಹೆಚ್ಚು ಇವೆಯೇ ಹೊರತು ತಾಲ್ಲೂಕು ಮಟ್ಟದಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗುತ್ತಾ ಇಲ್ಲ. ಬ್ಯಾಂಕುಗಳು ಯಾವ ಯಾವ ವಲಯದಲ್ಲಿ ಎಷ್ಟೆಷ್ಟು ಮೊತ್ತವನ್ನು ಯಾವ ಯಾವ ವಿಷಯದಲ್ಲಿ ವೆಚ್ಚ ಮಾಡಿವೆ ಎಂಬುದನ್ನು ತೋರಿಸಬೇಕು. ಸಾಮಾನ್ಯವಾಗಿ ವ್ಯವಸಾಯ ವಲಯ ಎಂದು ಹೇಳುತ್ತಾರೆ. ಇವರು ದೊಡ್ಡ ರೈತರಿಗೆ ಸಾಲ ಕೊಡುತ್ತಾರೆಯೇ ವಿನಃ ಸಣ್ಣ ರೈತರಿಗೆ, ಅತಿ ಸಣ್ಣ ರೈತರಿಗೆ ಎಷ್ಟು ಕೊಟ್ಟಿದ್ದಾರೆ ಯಾವ ಪ್ರಮಾಣದಲ್ಲಿ ಖರ್ಚು ಮಾಡಿದ್ದಾರೆಂದು ವಿವರಗಳಿಲ್ಲ. ಆ ಕೆಲಸವನ್ನು ಮಾಡಬೇಕಾಗುತ್ತದೆ. ಕೆ.ಎಸ್.ಎಫ್.ಸಿ ನವರು ಭಾರಿ ಭಾರಿ ಕುಳಗಳಿಗೆ ಸಾಲವನ್ನು ಕೊಡುತ್ತಾರೆಯೇ ಹೊರತು ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ಕೊಡುವುದಿಲ್ಲ. ಆದ್ದರಿಂದ ತಾವು ಒಂದನ್ನು ನಿಗದಿ ಮಾಡಬೇಕು. ಏನೆಂದರೆ ತಮ್ಮ ಒಂದು ವಹಿವಾಟು ಏನಿದೆ ಅದರಲ್ಲಿ ಶೇಕಡ ಇಂತಿಷ್ಟು ಭಾಗವನ್ನು ಸಣ್ಣ ಪ್ರಮಾಣದ ರೈತರಿಗೆ ಅಥವಾ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಕೊಡಬೇಕೆಂದು ಹೇಳಬೇಕು. ಇವತ್ತು ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗಾವಕಾಶ ಹೆಚ್ಚು ಮಾಡಬೇಕಾದರೆ ದಯಮಾಡಿ ಸಣ್ಣ ಕೈಗಾರಿಕೆಗಳು ಏನಿವೆ ಅವಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದಕ್ಕೆ ಬ್ಯಾಂಕಿನವರು ಸಾಲ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ನಾನು ಕೆ.ಎಸ್.ಎಫ್.ಸಿ., ಎಂ.ಡಿ.ಯವರನ್ನು ಭೇಟಿ ಮಾಡಿದ್ದೇವೆ. ನಾನು ಫೈನಾನ್ಸ್ ಸೆಕ್ರೆಟರಿಯವರನ್ನು ಭೇಟಿ ಮಾಡಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ರೇಷ್ಮೆ ನೂಲು ತೆಗೆಯುವ ಕೈಗಾರಿಕೆಗಳು ಪ್ರಬುದ್ಧವಾಗಿವೆ. ಈವತ್ತು ಪ್ರತಿಯೊಂದು ಮನೆಯಲ್ಲೂ ನೂಲು

ತೆಗೆಯುತ್ತಿದ್ದಾರೆ. ಇವತ್ತು ಆ ಜನ ತಮ್ಮ ಕಾಲಮೇಲೆ ತಾವು ನಿಂತು ಕೆಲಸ ನಿರ್ವಹಿಸುವ ಸಲುವಾಗಿ ಅವರಿಗೆ ಕೇವಲ 5 ಸಾವಿರದಂತೆ ಸಾಲ ಕೊಡಿ, ಪ್ರತಿನಿತ್ಯ ಅವರು 5 ರೂಪಾಯಿಗಳನ್ನು ವಾಪಸ್ಸು ಕೊಡತಕ್ಕ ವ್ಯವಸ್ಥೆ ಮಾಡಿ ಎಂದರೆ ಕೇವಲ ಕೆಲವರಿಗೆ ಕೊಟ್ಟು ಅದು ಹಾಗೇ ನಿಂತಿತು. ಇವತ್ತು ಒಂದು ದೊಡ್ಡ ಕಾರ್ಖಾನೆಗೆ 60 ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಾರೆ. ಇದರಲ್ಲಿ ಕೇವಲ 10 ಜನ ಕೆಲಸ ಮಾಡುತ್ತಿದ್ದಾರೆ. ನಾನು ಹೇಳಿದ ಸುಮಾರು300 ಜನರಿಗೆ ಸಾಲ ಕೊಟ್ಟಿದ್ದರೆ ಸುಮಾರು 1500 ಜನರಿಗೆ ಕೆಲಸ ಸಿಗುತ್ತಾ ಇತ್ತು. ಇವತ್ತು ಸಣ್ಣ ಸಣ್ಣ ನೌಕರರಿಗೆ ಏನು ಸಾಲವನ್ನು ಕೊಡುತ್ತೀರಿ ಆ ಸಾಲ ವಾಪಸ್ಸು ಬರುತ್ತದೋ ಇಲ್ಲವೋ ಎಂದು ತಾವು ನೋಡುತ್ತೀರಿ. ಅದನ್ನು ನೋಡಿ., ಚಿಂತೆ ಇಲ್ಲ. ಇವತ್ತು ಬ್ಯಾಂಕುಗಳು ಹೆಚ್ಚಿನ ಪ್ರದೇಶದಲ್ಲಿ ಬಂದಿದ್ದರೂ, ಗ್ರಾಮಾಂತರ ಪ್ರದೇಶದ ಜನರ ಸೇವೆ ಮಾಡುವ ಮಟ್ಟಕ್ಕೆ ಈ ರಾಜ್ಯದಲ್ಲಿ ಬ್ಯಾಂಕುಗಳ ಸೇವೆ ಬೆಳೆದಿಲ್ಲ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ದಯಮಾಡಿ ಒಂದು ಇನ್‌ಸ್ಟ್ರಕ್ಷನ್ ಕೊಡಬೇಕೆಂದು ಹೇಳುತ್ತೇನೆ. ಇವತ್ತು ತಾವು ರಾಜ್ಯದಲ್ಲಿ ಈ ಬಗ್ಗೆ ಒಂದು ಅಂಕಿಅಂಶವನ್ನು ತಮ್ಮ ವರದಿಯಲ್ಲಿ ತೋರಿಸಿಲ್ಲ. ಇನ್ನು ನಮ್ಮ ರಾಜ್ಯದಲ್ಲಿ ಖನಿಜ ಸಂಪತ್ತು ಎಷ್ಟು ಇದೆ, ಯಾವ ಯಾವ ಪ್ರದೇಶದಲ್ಲಿ ಎಷ್ಟು ಪ್ರಮಾಣದಲ್ಲಿ ಸಿಕ್ಕುತ್ತದೆ ಎಂದು ಮತ್ತು ವಾತಾವರಣದಲ್ಲಿನ ಸಮತೋಲನ ಕಾಯ್ದುಕೊಂಡು ಯಾವ ರೀತಿ ಖನಿಜಸಂಪತ್ತನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಹಾಗೂ ಎಷ್ಟು ಸಂಪತ್ತನ್ನು ಹಾಗೇ ಉಳಿಸಿಕೊಳ್ಳಬೇಕೆಂದು ಅಂಕಿಅಂಶಗಳ ಮೂಲಕ ತೋರಿಸಬೇಕಾಗುತ್ತದೆ. ಆದರೆ ಅದನ್ನು ಮಾಡಿಲ್ಲ. ಮತ್ತು ರಾಜ್ಯದ ಆದಾಯ ಎಷ್ಟು ಮತ್ತು ರಾಷ್ಟ್ರೀಯ ತಲಾವಾರು ಆದಾಯದ ಜೊತೆಗೆ ನಮ್ಮ ಆದಾಯ ದೇಶದಲ್ಲಿ ಯಾವ ಸ್ಥಾನದಲ್ಲಿ ಇದೆ, ಯಾವ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಇದನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವೆಂಬುದರ ಬಗ್ಗೆ ಬೆಳಕು ಚೆಲ್ಲಬೇಕಾಗಿತ್ತು. ಇದಕ್ಕೆ ತಾವು ನಿರ್ದೇಶನ ಕೊಡಬೇಕು. ಎಲ್ಲಾ ಇಲ್ಲಿ ಮುಗುಮ್ ಆಗಿದೆ ಆದ್ದರಿಂದ ಮುಂದಿನ ಸಾಲಿನಲ್ಲಿ ಇದೆಲ್ಲಾ ವಿವರಗಳನ್ನು ಒಳಗೊಂಡಿರತಕ್ಕ ಒಂದು ವರದಿಯನ್ನು ಸಭೆಯ ಮುಂದೆ ಇಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಾನು ರಾಜ್ಯದ ಆರ್ಥಿಕ ಸ್ಥಿತಿ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ನಮ್ಮ ಯೋಜನಾ ಆಯೋಗದ ಉಪಾಧ್ಯಕ್ಷರಾದ ಪ್ರಣಬ್ ಮುಖರ್ಜಿಯವರು ಈ ರಾಜ್ಯದ ಕಾರ್ಯವಿಧಾನ, ಸಂಪನ್ಮೂಲಗಳ ಸಂಗ್ರಹಣೆ ವಿಷಯದಲ್ಲಿ ಒಳ್ಳೆಯ ಪ್ರಶಂಸನೀಯ ಕೆಲಸ ಮಾಡಿದೆ ಎಂದು ಹೇಳಿ ಈಗಾಗಲೇ ಒಂದು ಪ್ರಶಂಸಾಪತ್ರವನ್ನು ಕೊಟ್ಟಿದ್ದಾರೆ. ನೀವು ಹೇಳಿದ ಪ್ರಸಕ್ತ ಸಾಲಿನಲ್ಲಿ ನಾವೇನು ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ ಆ ಯೋಜನೆಯಲ್ಲಿ 26.08 ಕೋಟಿ ರೂಪಾಯಿ ಜಾಸ್ತಿಯಾಗಿದೆ. ಸುಮಾರು 405 ಕೋಟಿ ರೂಪಾಯಿ ಸಂಪನ್ಮೂಲವನ್ನು ಹೆಚ್ಚಾಗಿ ಕ್ರೋಢೀಕರಿಸಬೇಕೆಂದು ಹೇಳಿ ಆವೊಂದು ಕರಡು ಯೋಜನೆಗೆ ಈಗಾಗಲೇ ಅಂಗೀಕಾರ ದೊರೆತಿದೆ. ಈ ದೇಶದಲ್ಲಿ ಯಾವ ರಾಜ್ಯದಲ್ಲಿಯೂ ಕೂಡ ಕಳೆದ ಸಾಲಿಗಿಂತ ಪ್ರಸಕ್ತ ಸಾಲಿಗೆ 26.08 ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಸಂಗ್ರಹಿಸಿ ಆ ಯೋಜನೆಗೆ ಅನುಮತಿಯನ್ನು ಪಡೆಯತಕ್ಕ ಕೆಲಸವನ್ನು ಯಾವುದೇ ರಾಜ್ಯ ಮಾಡಿಲ್ಲ, ಕರ್ನಾಟಕ ರಾಜ್ಯವೇ ಮೊದಲನೆಯದು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆ ದಿಸೆಯಲ್ಲಿ ನಾವು ಒಳ್ಳೆಯ ಪ್ರಗತಿಯನ್ನು ಸಾಧಿಸಿದ್ದೇವೆಂದು ನಮ್ಮ ಆರ್ಥಿಕ ಮಂತ್ರಿಗಳಾಗಿರತಕ್ಕ ಮುಖ್ಯಮಂತ್ರಿಗಳು ಹೇಳಿದ್ದಾರೆ. ವಿಶ್ವ ಯೋಜನೆಯಲ್ಲಿ ಸುಮಾರು 600 ಕೋಟಿ ರೂಪಾಯಿಗಳನ್ನು ಐದು ವರ್ಷಗಳಲ್ಲಿ ಖರ್ಚು ಮಾಡಬೇಕೆಂದು ಇದ್ದರೆ, ನಾವು ಮೂರೇ ವರ್ಷದಲ್ಲಿ ಖರ್ಚು ಮಾಡುತ್ತೇವೆಂದು

ಘೋಷಣೆಯನ್ನು ಮಾಡಬೇಕಾದರೆ ನಮ್ಮ ಆರ್ಥಿಕ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆ ಎನ್ನುವ ಬಗ್ಗೆ ಯಾರಿಗೂ ವಿವರಿಸಿ ಹೇಳಬೇಕಾಗಿಲ್ಲ. ಈವೊಂದು ಮಾತಿನಿಂದಲೇ ತಾವು ಅರ್ಥಮಾಡಿಕೊಳ್ಳ ಬೇಕೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಹುಶಃ ಕಳೆದ ಸರ್ಕಾರದಲ್ಲಿ ಕೇವಲ 8 ರೂಪಾಯಿ ಚೆಕ್ ಬೌನ್ಸ್ ಆಗಿತ್ತು. ನಾವು ಸಕಾಲದಲ್ಲಿ ನಮ್ಮ ನೌಕರರಿಗೆ ಸಂಬಳವನ್ನು ಪಾವತಿ ಮಾಡುತ್ತಿದ್ದೇವೆ. ಸಕಾಲಕ್ಕೆ ವಿಧವಾವೇತನ ಮತ್ತು ಅಂಗವಿಕಲರ ವೇತನವನ್ನು ಸಹ ಕೊಡುತ್ತಿದ್ದೇವೆ. ಮಾನ್ಯ ಇದಿನಬ್ಬನವರು ವಿಧವಾವೇತನ ಮತ್ತು ಅಂಗವಿಕಲರ ವೇತನ ಬರಲಿಕ್ಕೆ ಎರಡು ಮೂರು ತಿಂಗಳು ಆಗುತ್ತದೆಂದು ಹೇಳಿದರು. ಬಹುಶಃ ಟ್ರಜರಿಯಲ್ಲಿ ಸಿಬ್ಬಂದಿಯ ಕೊರತೆಯಿಂದ ಹಾಗೆ ಆಗಿರಬಹುದೇ ಹೊರತಾಗಿ ಸರ್ಕಾರ ಮಾತ್ರ ಸರಿಯಾದ ಸಮಯಕ್ಕೆ ಬಟವಾಡೇ ಮಾಡುತ್ತಾ ಇದೆ ಎಂಬ ಅಂಶವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ರಾಜ್ಯದ ಆರ್ಥಿಕ ಸ್ಥಿತಿ ಇನ್ನಷ್ಟು ಬಲವಾಗಬೇಕಾದರೆ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಯಾವ್ಯಾವ ಇಲಾಖೆಗಳಿಂದ ಎಷ್ಟೆಷ್ಟು ಹಣ ಬಾಕಿ ಬರಬೇಕಾಗಿದೆ ಅಂತಹವರ ಒಂದು ಪಟ್ಟಿಯನ್ನು ತಯಾರು ಮಾಡಿ ಅವರಿಂದ ಕಟ್ಟುನಿಟ್ಟಾಗಿ ವಸೂಲಿ ಮಾಡುವ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳಬೇಕು, ಬಹುಶ: ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ನಮ್ಮ ಸರ್ಕಾರಕ್ಕೆ 6 ಕೋಟಿ ರೂಪಾಯಿ ಬಾಕಿ ಬರಬೇಕಾಗಿದೆ. ಅದನ್ನು ಮೊದಲು ವಸೂಲಿ ಮಾಡಬೇಕು. ನಮ್ಮ ಅಬಕಾರಿ ಗುತ್ತಿಗೆದಾರರಿಂದ ಬರತಕ್ಕ 50 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಬೇಕು. ರಾಜ್ಯದ ಪ್ರಧಾನ ನ್ಯಾಯಾಲಯದಲ್ಲಿ ಏನು ಸ್ಟೇ ಆರ್ಡರ್‌ಗಳಿವೆ, ಅದನ್ನು ಬಿಟ್ಟು ಬಾಕಿ ಹಣವನ್ನು ವಸೂಲಿ ಮಾಡುವುದಕ್ಕೆ ಒಂದರ ಕಟ್ಟುನಿಟ್ಟಾದ ಆದೇಶವನ್ನು ಕೊಡಬೇಕಾಗಿದೆ. ಏನೊಂದು ತಡೆಯಾಜ್ಞೆ ಇದೆ ಅದನ್ನು ತೆರವು ಮಾಡತಕ್ಕ

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವ್ಯವಸ್ಥೆಯನ್ನು ತಾವು ಮಾಡಬೇಕು. ಇವೆಲ್ಲಾ ನಮ್ಮ ಸಂಪನ್ಮೂಲವನ್ನು ಹೆಚ್ಚು ಮಾಡತಕ್ಕ ಯೋಜನೆಗಳೆಂದು ನಾವು ಹೇಳಬಹುದು. ಕೆ ಇ ಬಿ ಇದೆ, ಅದು ಸ್ವಾಯತ್ತ ಸಂಸ್ಥೆಯೆಂದು ತಾವು ಹೇಳಬಹುದು ಆದರೆ ಸರ್ಕಾರಕ್ಕೆ ಆ ಸಂಸ್ಥೆಯಿಂದ 200 ಕೊಟಿ ರೂಪಾಯಿ ಬಾಕಿ ಬರಬೇಕಾಗಿದೆ. ಸುಮಾರು 1ಲಕ್ಷದ ಮೇಲೆ ಬಾಕಿ ಕೊಡಬೇಕಾಗಿರತಕ್ಕ ಸಂಸ್ಥೆಗಳು ನೂರಾರು ಇವೆ. ಈ ಬಾಕಿಯನ್ನು ವಸೂಲಿ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಎಲ್ಲೆಲ್ಲಿ ಸೋರಿಕೆ ಉಂಟಾಗಿದೆ ಅಂತಹದ್ದನ್ನು ತಡೆಗಟ್ಟುವುದಕ್ಕೆ ಮತ್ತು 'ಹೆಚ್ಚಿನ ಆದಾಯ ತರುವಂತಹ ಕೆಲಸವನ್ನು ತಾವು ಮಾಡಬೇಕು. ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಹೆಚ್ಚು ಹೆಚ್ಚಾಗಿ ಮಾರಾಟ ಮಾಡಬೇಕು. ಅವುಗಳನ್ನು ಬಡಬಗ್ಗರಿಗೆ ಕೊಡುವುದು ಬೇಡ. ಒಳ್ಳೊಳ್ಳೆಯ ಬಿಸಿನೆಸ್ಸನ್ನು ಯಾರು ಮಾಡುತ್ತಾರೆ ಅಂತಹ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಅವರುಗಳಿಗೆ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಮಾರಾಟಮಾಡಿ ತನ್ಮೂಲಕ ಹಣವನ್ನು ಸಂಗ್ರಹ ಮಾಡತಕ್ಕ ಒಂದು ಕೆಲಸವನ್ನು ಮಾಡಿ. ಎಲ್ಲ ವಿಧಗಳಿಂದ ಇನ್ನು ಹೆಚ್ಚಿನ ರೀತಿಯಲ್ಲಿ ಆರ್ಥಿಕ ಸ್ಥಿತಿ ಸುಧಾರಿಸುವಂತೆ ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದರ ಜೊತೆಗೆ ದುಂದುವೆಚ್ಚವನ್ನು ಕಡಿಮೆ ಮಾಡಬೇಕು. ಈಗಾಗಲೇ ಸರ್ಕಾರ ಅದರ ಬಗ್ಗೆ ಹೆಜ್ಜೆ ಇಟ್ಟಿರುವುದನ್ನು ನಾನು ಮತ್ತೆ ಹೇಳಬೇಕಾಗಿಲ್ಲ. ಬೇರೆ ಸದಸ್ಯರೂ ಸಹ ಈಗಾಗಲೇ ಇದರ ಬಗ್ಗೆ ಹೇಳಿದ್ದಾರೆ. ಪ್ರತಿಯೊಂದು ವಲಯದಲ್ಲೂ ಮಿತವ್ಯಯವನ್ನು ಕಾಪಾಡತಕ್ಕ ಒಂದು ಕೆಲಸವನ್ನು ಮಾಡಬೇಕು. ಇಬ್ಬರು ಮಂತ್ರಿಗಳು ಹೆಚ್ಚಾಗಿ ಒಂದೇ ಕಡೆಗೆ ಪ್ರವಾಸ ಹೋಗತಕ್ಕದ್ದು, ರಾಜ್ಯವನ್ನು ಬಿಟ್ಟು ಬೇರೆ

ರಾಜ್ಯಗಳಿಗೆ ಪ್ರವಾಸ ಹೋಗತಕ್ಕದ್ದು, ಇಂತಹುವುಗಳನ್ನು ನಿಯಂತ್ರಣ ಮಾಡತಕ್ಕದ್ದು, ಮಿತವ್ಯಯ ಮಾಡಿದರೆ ಹೆಚ್ಚಿನ ಹಣವನ್ನು ಶೇಖರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವರ್ಷದಲ್ಲಿ ಒಂದು ತಿಂಗಳು ಮಾತ್ರ ವರ್ಗಾವಣೆಯನ್ನು ಮಾಡತಕ್ಕದ್ದು; ಇದನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು, ಹೆಲ್ತ್‌ಗ್ರೌಂಡ್ಸ್ ಮೇಲೆ ಅನಿವಾರ್ಯವಾಗಿ ವರ್ಗಾವಣೆಯನ್ನು ಮಾಡಬೇಕಾದ ಸಂದರ್ಭದಲ್ಲಿ ಮಾಡಬೇಕು ಮತ್ತು ವರ್ಗಾವಣೆಯನ್ನು ಮಾಡುವುದಕ್ಕೆ ವರ್ಷದಲ್ಲಿ ಒಂದೇ ಒಂದು ತಿಂಗಳನ್ನು ಮೀಸಲಾಗಿಡಬೇಕು. ಸಾಮೂಹಿಕ ವರ್ಗಾವಣೆಯನ್ನು ಮಾಡಿದರೆ ಒಳ್ಳೆಯದು. ಏಕೆಂದರೆ ಬೇರೆ ಬೇರೆ ಕಾಲದಲ್ಲಿ ವರ್ಗಾವಣೆಯನ್ನು ಮಾಡಿದರೆ ಅವರಿಗೆ ಹೆಚ್ಚಿನ ಟಿ.ಎ.,ಡಿ.ಎ. ಅಧಿಕಾರಿಗಳಿಗೆ ಕೊಟ್ಟು ಖಜಾನೆಗೆ ಭಾರವಾಗುವುದರಿಂದ ದಯಮಾಡಿ ಈವೊಂದು ಕೆಲಸವನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಎಲ್ಲಾ ಮಂತ್ರಿಗಳಿಗೂ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮಾನ್ಯ ಬಂಗಾರಪ್ಪನವರ ಸರ್ಕಾರ ದಕ್ಷತೆಯಿಂದ ಆಡಳಿತವನ್ನು ಕೊಡುತ್ತಿದೆ, ಈಗಿನ ಆಡಳಿತ ಜನಸಾಮಾನ್ಯರ ಮೇಲೆ ಒಳ್ಳೆಯ ಪರಿಣಾಮ ಬೀರಿದೆ ಎಂದು ನಾನು ಹೇಳಬೇಕಾದ ಅವಶ್ಯಕತೆಯಿಲ್ಲವೆಂದು ನನಗನಿಸುತ್ತಿದೆ. ಎಲ್ಲಾ ವರ್ಗದವರ ಅದರಲ್ಲೂ ಕೂಡ ಸಮಾಜದಲ್ಲಿ ಆರ್ಥಿಕವಾಗಿ, ಮತ್ತು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರತಕ್ಕ ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕ ಜನರನ್ನು ಮೇಲಕ್ಕೆ ಎತ್ತತಕ್ಕ ವಿಚಾರದಲ್ಲಿ ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಮ್ಮಿಕೊಂಡಿರುವ ವಿಷಯ ತಮಗೆಲ್ಲರಿಗೂ ತಿಳಿದಿದೆ. ಚುನಾವಣೆ ಕಾಲದಲ್ಲಿ ನಾವು ಜನಸಾಮಾನ್ಯರಿಗೆ ಏನು ಆಶ್ವಾಸನೆಗಳನ್ನು , ಭರವಸೆಗಳನ್ನು ಕೊಟ್ಟಿದ್ದೇವೋ, ಆ ದಿಕ್ಕಿನಲ್ಲಿ ಹೋಗಲು ನಮ್ಮ ಸರ್ಕಾರ ಹೆಜ್ಜೆ ಇಟ್ಟಿದೆ. ಆ ಗುರಿ ಮುಟ್ಟುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಮತದಾನ ಪ್ರಭುಗಳನ್ನು ಸಂತೃಪ್ತಿಯಲ್ಲಿಡಲು ಸಾಕಷ್ಟು ಶ್ರಮವಹಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಪ್ರತಿಯೊಂದು ಹೆಜ್ಜೆಯಲ್ಲೂ, ಪ್ರತಿಯೊಂದು ಚಿಂತನೆಯಲ್ಲೂ ಮತದಾನ ಪ್ರಭುಗಳ ಯೋಗಕ್ಷೇಮ ಅಡಗಿದೆ. ಅವನ ಪ್ರಗತಿಯತ್ತ ಕಾಯಾವಾಚಾ ಮನಸಾ ಸದಾ ನಮ್ಮ ಸರ್ಕಾರ ಯೋಚಿಸುತ್ತಿದೆ. ಅವರ ಆಸ್ತಿಗೆ ಸರ್ವರೀತಿಯ ರಕ್ಷಣೆಯನ್ನು ನಾವು ಕೊಡುತ್ತಾ ಬಂದಿದ್ದೇವೆ. ಅವನ ಸಮಸ್ತ ಸಮಸ್ಯೆಗಳನ್ನು ಪರಿಹರಿಸಲು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳನ್ನು ಆತನ ಮನೆಯ ಬಾಗಿಲಿಗೆ ಕರೆದುಕೊಂಡು ಹೋಗುವಂತೆ ಗ್ರಾಮ ಸಭೆಗಳನ್ನು ಮೂರು ತಿಂಗಳಿಗಳಿಗೊಮ್ಮೆ ಮಾಡಬೇಕೆಂದು ಹೇಳಿ ನಮ್ಮ ಸರ್ಕಾರ ಈಗಾಗಲೇ ಸೂಚನೆಯನ್ನು ಕೊಟ್ಟಿದೆ. ನಾವು ಪ್ರತಿ ಶಾಸಕರ ಪ್ರತಿ ಮೂರು ತಿಂಗಳಿಗೊಮ್ಮೆ ಮಂಡಲ ಪಂಚಾಯಿತಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಕುಳಿತು, ಅಲ್ಲಿರತಕ್ಕಂಥ ರೈತರನ್ನು ಕರೆಸಿ, ಅವರ ಸಮಸ್ಯೆಗಳು ಏನೆಂದು ತಿಳಿದುಕೊಂಡು ಅವುಗಳನ್ನು ಸ್ಥಳದಲ್ಲೇ ವಿಚಾರಣೆ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ನಮ್ಮ ಸರ್ಕಾರ ಸುತ್ತೋಲೆ ಕಳುಹಿಸಿ ಇದನ್ನು ನಾವೆಲ್ಲರೂ ಮಾಡುತ್ತಿದ್ದೇವೆ. ಅಂದರೆ ನೇರವಾದ ಸಂಪರ್ಕ ಜನರಿಗೆ ಮತ್ತು ಸರ್ಕಾರಕ್ಕೆ ಯಾವ ರೀತಿ ಆಗಬೇಕೆಂದು ತಿಳಿದುಕೊಂಡು ಆ ರೀತಿ ಕೆಲಸ ಮಾಡಿ ಅದನ್ನು ಪೂರೈಸುತ್ತಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಡುಬಡ ರೋಗಿಗಳಿಗೆ ದೊಡ್ಡ ಪ್ರಮಾಣದ ಶಸ್ತ್ರ ಚಿಕಿತ್ಸೆ ಮಾಡತಕ್ಕಂಥ ಕಾಲದಲ್ಲಿ ಸುಮಾರು ನೂರಾರು ಜನರಿಗೆ ನಾವು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣವನ್ನು ಪುಕ್ಕಟೆಯಾಗಿ ಕೊಟ್ಟಿದ್ದೇವೆ. ಮಾನ್ಯ

ಮುಖ್ಯಮಂತ್ರಿಗಳು ಈ ಅಧಿವೇಶನ ಮುಗಿದ ನಂತರ ಪ್ರತಿಯೊಂದು ಜಿಲ್ಲೆಯಲ್ಲಿ ಕೂಡ ತಾವು ಪ್ರವಾಸ ಮಾಡಬೇಕು, ಜನ ಸಾಮಾನ್ಯರನ್ನು ಭೇಟಿ ಮಾಡಬೇಕು, ಅವರ ಸಮಸ್ಯೆಗಳನ್ನು ಅರಿತುಕೊಳ್ಳಬೇಕು, ಆ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಮಾಡಬೇಕೆಂದು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಅವರು ಮತ್ತು ಜಿಲ್ಲೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಎಲ್ಲರೂ ಕೂಡ ಈ 19-20 ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ನೇರ ಸಂಪರ್ಕ ಪಡೆಯಬೇಕು ಎನ್ನತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡರೆ ಅದು ಒಳ್ಳೆಯ ಕೆಲಸ ಆಗುತ್ತದೆ ಎಂದು ನಾನಾದರೂ ಕೂಡ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದು ಸರ್ಕಾರದಲ್ಲಿರತಕ್ಕಂಥ ವರಿಷ್ಠರಿಗೆ, ಅಧಿಕಾರಿಗಳಿಗೆ ಮತ್ತು ಜನಸಾಮಾನ್ಯರಿಗೆ ನೇರ ಸಂಪರ್ಕ ಉಂಟು ಮಾಡತಕ್ಕಂಥ ಒಂದು ವಿಧಾನ ಆಗಿರುವುದರಿಂದ ಈ ವಿಧಾನದಿಂದ ತುಂಬ ಒಳ್ಳೆಯದಾಗುತ್ತದೆ ಎಂದು ನಾನು ತಿಳಿಸುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ನಾವು ಜನಸಾಮಾನ್ಯರು ಯಾವುದೇ ಒಂದು ಸರ್ಕಾರಿ ಕಚೇರಿಗೆ ಬಂದಾಗ ಅವರನ್ನು ಆದರಿಸಿ, ಗೌರವಿಸಿ, ಕೂರಿಸಿ, ನಿಮ್ಮ ಸಮಸ್ಯೆ ಏನೆಂದು ಕೇಳಿ, ಸ್ಥಳದಲ್ಲೇ ಆ ಅಧಿಕಾರಿ ಪರಿಹಾರ ಮಾಡತಕ್ಕಂಥ ಒಂದು ಸುತ್ತೋಲೆಯನ್ನು ಕೂಡ ಕಳುಹಿಸಿದ್ದೇನೆ. ಇದು ಅನೇಕ ಕಡೆ ನಡೆಯುತ್ತಿದೆ. ಕೆಲವು ಕಡೆ ಇಲ್ಲ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರೆ ನಮ್ಮ ಜನಸಾಮಾನ್ಯರಿಗೆ ಸಿಗತಕ್ಕಂಥ ಮೊದಲನೇ ಅಧಿಕಾರಿ ಎಂದರೆ ಒಬ್ಬ ವಿಲೇಜ್ ಅಕೌಂಟೆಂಟ್. ಆತ ಸರಿಯಾದ ರೀತಿಯಲ್ಲಿ ಜನಸಾಮಾನ್ಯರ ಕೆಲಸ ಮಾಡುತ್ತಿದ್ದಾನೆಯೇ ಎಂದು ಯೋಚನೆ ಮಾಡಿದಾಗ ಸ್ವಲ್ಪ ಕಡಿಮೆ ಎಂದು ಹೇಳಬೇಕಾಗುತ್ತದೆ. ಅವನೊಬ್ಬನೇ ರೈತನನ್ನು ಸರ್ವರೀತಿಯಲ್ಲಿ ಹಿಂಡಿ ಹಿಪ್ಪೆ ಮಾಡುತ್ತಾನೆ. ಈಗ ನಾವೇನು ಒಂದು ಹೊಸ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎಂದರೆ ಸರ್ಕಾರವೇ ಒಂದು ನಮೂನೆಯ ಅರ್ಜಿಯನ್ನು ತಯಾರಿಸಿ ಆ ಅರ್ಜಿಯನ್ನು ರೈತನ ಕೈಗೆ ಕೊಟ್ಟು ಅವನ ಸಮಸ್ಯೆಗಳು ಏನೆಂದು ಅದರಲ್ಲಿ ಬರೆದು ಸಂಬಂಧಪಟ್ಟ ಅಧಿಕಾರಿಗಳಿಗೆ ಆತ ಕೊಡಬೇಕು. ಯಾವ ಅಧಿಕಾರಿ ಅಂತಹ ಅರ್ಜಿಯನ್ನು ತೆಗೆದುಕೊಳ್ಳುತ್ತಾನೆ. ಅವರು ಒಂದು ರಸೀದಿಯನ್ನು ಕೊಡಲಿಕ್ಕೆ ಅನುಕೂಲವಾಗುವಂತೆ ಆ ಅರ್ಜಿಯ ಕೆಳಗಡೆ ಒಂದು ಕಾಲಮ್ ಇರುತ್ತದೆ. ಯಾವ ದಿನ ಅರ್ಜಿ ತೆಗೆದುಕೊಳ್ಳಲಾಯಿತು, ಅವನ ಸಮಸ್ಯೆಗಳೇನು, ಎಷ್ಟು ದಿವಸದಲ್ಲಿ ಪರಿಹಾರ ಮಾಡಿಕೊಡಲಾಗುತ್ತದೆ ಎಂಬುದನ್ನು ಅರ್ಜಿ ಕೊಟ್ಟವನ ಕೈಗೆ ಕೊಡಬೇಕು. ಇಷ್ಟು ದಿವಸಗಳಲ್ಲಿ ಅವನ ಸಮಸ್ಯೆ ಬಗೆ ಹರಿಸುತ್ತೇನೆ ಎಂದು ಹೇಳಿ ಒಂದು ವೇಳೆ ಈ ಕೆಲಸ ಮಾಡದೇ ಹೋದರೆ, ಅದನ್ನು ಮೇಲಿನ ಅಧಿಕಾರಿಗಳಿಗೆ ತಿಳಿಸತಕ್ಕಂಥ ಕ್ರಮವನ್ನು ಕೂಡ ನಾವು ಯೋಚನೆ ಮಾಡಬೇಕೆಂದು ಆಲೋಚಿಸುತ್ತಿದ್ದೇವೆ. ಹಿಂದೆ ಏನು ಸರ್ಕಾರಿ ಕಚೇರಿಯಲ್ಲಿ ಸಾಮಾನ್ಯ ಜನರನ್ನು ಅಲ್ಲಿರುವ ಪೀವನ್ ಬಿಡುತ್ತಿರಲಿಲ್ಲ. ಅವರು ಕ್ಯೂನಲ್ಲಿ ನಿಂತು ಹೋಗಬೇಕಿತ್ತು. ಆದರೆ ನೇರ ಸಂಪರ್ಕ ಜನ ಸಾಮಾನ್ಯರಿಗೆ ಮತ್ತು ಅಧಿಕಾರಿಗಳಿಗೆ ಆಗಬೇಕು, ಅವನು ಹೇಳತಕ್ಕಂಥ ಸಮಸ್ಯೆಯನ್ನು ಅಧಿಕಾರಿ ಅರ್ಥಮಾಡಿಕೊಳ್ಳಬೇಕು. ಕೇವಲ ಮೂರು ದಿವಸ ಅಲ್ಲ ಒಂದು ವಾರ ಗಡುವು ಕೊಟ್ಟು ಆ ಸಮಸ್ಯೆಯನ್ನು ನಿವಾರಣೆ ಮಾಡತಕ್ಕಂಥ ಕಾರ್ಯಕ್ರಮವನ್ನು ಜಾರಿಗೆ ಮಾಡತಕ್ಕಂಥ ವ್ಯವಸ್ಥೆಯನ್ನು ಕೂಡ ನಮ್ಮ ಸರ್ಕಾರ ಮಾಡಿದೆ. ಈ ಒಳ್ಳೆಯ ಕೆಲಸವನ್ನು ಇವತ್ತು ರಾಜ್ಯದ ಎಲ್ಲ ಕಡೆಗೂ ಮಾಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆಡಳಿತದ ಬಗ್ಗೆ ನಾವು ಬಹಳ ಚುರುಕು ಮುಟ್ಟಿಸಬೇಕೆಂದು ಹೇಳಿ ಮಾನ್ಯ ವೀರಪ್ಪ ಮೊಯಿಲಿಯವರು ಶಿಕ್ಷಣ ಕಡತಯಜ್ಞ ಮಾಡಿದರು. ಈ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಅವರು ಸಂಬಂಧಪಟ್ಟ ಎಲ್ಲಾ ಶಾಸಕರುಗಳನ್ನು

ಕೂಡ ಕರೆಸಿ, ಅಧಿಕಾರಿಗಳನ್ನು ಕರೆಸಿ ಅನೇಕ ವರ್ಷಗಳಿಂದ ತುಕ್ಕು ಹಿಡಿದು ಬಿದ್ದಿರತಕ್ಕಂಥ, ವಿಲೇವಾರಿ ಆಗದೇ ಇರತಕ್ಕಂಥ ಕಡತಗಳನ್ನು ತರಿಸಿ ಮೂರು ದಿವಸಗಳಲ್ಲಿ ಈ ಕೆಲಸವನ್ನು ಮಾಡಿದ್ದಾರೆ. ಮಂತ್ರಿಗಳೂ ಕೂಡ ಕಡತಯಜ್ಞವನ್ನು ಕೈಗೊಳ್ಳಬೇಕೆಂದು ಮುಖ್ಯಮಂತ್ರಿಗಳು ಸೂಚನೆ ಕೊಟ್ಟಿದ್ದಾರೆ. ಬಹುಶಃ ಈ ಕೆಲಸವನ್ನು ತೃಪ್ತಿಯಾಗಿ ಮಾಡುವುದರಿಂದ, ಜನಸಾಮಾನ್ಯರ ಕೆಲಸ ಬೇಗನೆ ಆಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ವಿಷಯ. ಹಿಂದೆ ಇರತಕ್ಕಂಥ ಮುಖ್ಯ ಮಂತ್ರಿಗಳು 1 ಸಾವಿರ 2 ಸಾವಿರ ಕಡತಗಳು ಬಂದಾಗ 4-5 ದಿವಸಗಳ ಕಾಲ ಅಂಡರ್‌ಗ್ರೌಂಡ್ ಅಥವಾ ಇನ್ನಾವುದೋ ಒಂದು ಸ್ಥಳಕ್ಕೆ ಹೋಗಿ, ಕೆಲಸ ಮಾಡತಕ್ಕಂಥ ಪರಿಪಾಠವನ್ನು ಬೆಳೆಸಿಕೊಂಡಿದ್ದರು. ಆದರೆ, ನಮ್ಮ ಮುಖ್ಯಮಂತ್ರಿಗಳು ಆ ರೀತಿ ಇಲ್ಲ ಅವರಲ್ಲಿ ಯಾವುದೇ ಕಡತ ಹೋದರೂ ನಾಲ್ಕು ದಿವಸದಲ್ಲಿ ವಾಪಸ್ಸ್ ಬರುತ್ತದೆ. ಅವರು ಹಿಂದಿನ ಸಿಸ್ಟಂ ಇಟ್ಟುಕೊಂಡಿಲ್ಲ. ಆದ್ದರಿಂದ, ಮೊದಲಿಗಿಂತ ಆಡಳಿತ ಯಂತ್ರ ಚುರುಕಾಗಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಈ ಒಂದು ಉದಾಹರಣೆಯನ್ನು ತಮಗೆ ಕೊಡುತ್ತಿದ್ದೇನೆ. ಮತ್ತು ಯಾವುದೇ ಆಫೀಸಿನಲ್ಲಿ ಕೆಲಸವಾಗಬೇಕಾದರೆ, ತಾಲ್ಲೂಕು ಮತ್ತು ಜಿಲ್ಲೆಯನ್ನು, ಯಾವ ಯಾವುದು ದೊಡ್ಡದು ಇದೆಯೋ ಅವುಗಳನ್ನು ಪುನರ್ ವಿಂಗಡಣೆ ಮಾಡತಕ್ಕ ಕೆಲಸವನ್ನು ಮಾಡಬೇಕು. ಈ ಮಾತನ್ನು ನಾನು ಹೇಳುತ್ತಿದ್ದೇನೆ, ಆ ರೀತಿ ಮಾಡುವುದು ಸರ್ಕಾರದ ಇಚ್ಛೆ. ಮುಖ್ಯವಾಗಿ ಇಡೀ ರಾಜ್ಯದಲ್ಲಿ ಅತೀ ಹೆಚ್ಚಿನ ವಿಸ್ತಾರವಾದ ತಾಲ್ಲೂಕು ನನ್ನ ಕೊಳ್ಳೆಗಾಲ ತಾಲ್ಲೂಕು. ಇದು ಸುಮಾರು ಬೆಂಗಳೂರು, ಮೈಸೂರಿಗೆ ಎಷ್ಟು ದೂರ ಇದೆಯೋ ಅಷ್ಟು ದೂರ ಇದೆ. ಸುಮಾರು 160 ಕಿಲೋಮೀಟರ್ ಆಗುತ್ತದೆ. ಇಷ್ಟು ದೂರದಲ್ಲಿ ತಾಲ್ಲೂಕಿರತಕ್ಕ ತಹಶೀಲ್ದಾರ ಕೊನೇ ಹಳ್ಳಿಗೆ ಹೋಗಬೇಕಾದರೆ 1-2 ದಿವಸವಾಗುತ್ತದೆ. ದಯಮಾಡಿ ಇದನ್ನು ವಿಭಾಗ ಮಾಡಬೇಕೆಂದು ಹೇಳಿದೆ, ಇದಕ್ಕೆ ಸರ್ಕಾರದ ಬಂಡವಾಳ ಒಂದು ನೂರು ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ನಾನು ಸರ್ಕಾರಕ್ಕೆ ಈ ಒಂದು ಸಲಹೆಯನ್ನು ಕೊಟ್ಟೆ. ರಾಜ್ಯದಲ್ಲಿ ಅತಿ ದೊಡ್ಡ ತಾಲ್ಲೂಕು ಕೊಳ್ಳೆಗಾಲ, ಅತಿ ಸಣ್ಣ ತಾಲ್ಲೂಕು ಯಳಂದೂರು ತಾಲ್ಲೂಕು. ಇವೆರಡೂ ಅಕ್ಕಪಕ್ಕದಲ್ಲಿವೆ. ದಯಮಾಡಿ ಕೊಳ್ಳೇಗಾಲ ತಾಲ್ಲೂಕಿಗೆ ಯಳಂದೂರು ತಾಲ್ಲೂಕನ್ನು ಸೇರಿಸಿ. ಏಕೆಂದರೆ, ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರದಲ್ಲಿ ಯಳಂದೂರು ಸೇರಿಕೊಂಡಿದೆ. ವಿಧಾನ ಸಭಾ ಕ್ಷೇತ್ರಕ್ಕೆ ಸೇರಿಕೊಂಡಿರುವ ಪ್ರಯುಕ್ತ, ಯಳಂದೂರು ತಾಲ್ಲೂಕನ್ನು ಕೊಳ್ಳೇಗಾಲಕ್ಕೆ ಸೇರಿಸಿ, ಹನೂರನ್ನು ಒಂದು ತಾಲ್ಲೂಕನ್ನಾಗಿ ಮಾಡಿ. ಯಳಂದೂರಿನಲ್ಲಿರತಕ್ಕ ಸಿಬ್ಬಂದಿಯನ್ನು ಹನೂರಿಗೆ ಹಾಕತಕ್ಕ ಕೆಲಸ ಮಾಡಿದರೆ, ಸರ್ಕಾರಕ್ಕೆ ಒಂದು ರೂಪಾಯಿ ಕೂಡ ಖರ್ಚಾಗುವುದಿಲ್ಲ. ದಯಮಾಡಿ ಇದನ್ನು ಮಾಡಿಕೊಡಬೇಕೆಂದು ಬಹಳ ದಿವಸಗಳಿಂದ ಒತ್ತಾಯ ಮಾಡುತ್ತಿದ್ದೇವೆ. ಆದರೆ ಇದನ್ನು ಪರಿಶೀಲಿಸುವುದಾಗಿ ಹೇಳುತ್ತಿದ್ದಾರೆಯೇ ಹೊರತು, ಮತ್ತೆ ಏನನ್ನೂ ಮಾಡುತ್ತಾ ಇಲ್ಲ. ಆಡಳಿತವನ್ನು ಚುರುಕು ಮಾಡಬೇಕಾದರೆ, ಆಡಳಿತವನ್ನು ಸಾಕಷ್ಟು ಪ್ರಮಾಣದಲ್ಲಿ, ಎಲ್ಲಾ ವರ್ಗದ ಜನರಿಗೂ ಸಿಗುವಂತೆ ಮಾಡಬೇಕಾದರೆ, ತಾಲ್ಲೂಕು ಮತ್ತು ಜಿಲ್ಲೆಗಳನ್ನು ಪುನರ್‌ವಿಂಗಡಣೆ ಮಾಡತಕ್ಕಂಥಾದ್ದು ಒಳ್ಳೆಯದೆಂದು ಹೇಳಿ, ಈ ನಾಲ್ಕು ವಿಷಯಗಳನ್ನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕರಿಯಣ್ಣ (ಹೊಳೆಹೊನ್ನೂರು):-ಮಾನ್ಯ ಅಧ್ಯಕ್ಷಿಣಿಯವರೇ, ಇವತ್ತು ಇಟ್ಟಿರತಕ್ಕಂಥ ಎಲ್ಲಾ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಖಂಡಿತವಾಗಿಯೂ ನಮ್ಮ ಮುಖ್ಯಮಂತ್ರಿಗಳು ನಾಯಕತ್ವ ವಹಿಸಿಕೊಂಡ

ನಂತರದಲ್ಲಿ, ಅವರು ಬಡವರ ಏಳಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ತಂದಿದ್ದಾರೆ. ಇದು ನಿಜವಾಗಿಯೂ ಸ್ವಾಗತಾರ್ಹವಾದುದು. ಅಕ್ಷಯ ಕಾರ್ಯಕ್ರಮವಾಗಲೀ, ಆರಾಧನಾ ಕಾರ್ಯಕ್ರಮವಾಗಲೀ, ಇನ್ನೂ ಅನೇಕ ವಿಚಾರಗಳಾಗಲೀ, ಬಡವರಿಗೆ ಮುಟ್ಟತಕ್ಕಂಥ ಕಾರ್ಯಕ್ರಮಗಳು. ಆದರೆ ಇವು ಬಡವರಿಗೆ ಮುಟ್ಟಬೇಕಾದರೆ, ಸರ್ಕಾರದ ಯಂತ್ರ, ಆಡಳಿತ ಮಾಡತಕ್ಕ ಅಧಿಕಾರಿವರ್ಗದವರು ಏನಿದ್ದಾರೆ, ಅವರಲ್ಲಿಯೂ ಸಹ ಸುಧಾರಣೆಯಾಗಿ, ಅವರೂ ಸಹಿತ ಮನಃಪೂರ್ವಕವಾಗಿ ಕೆಲಸ ಮಾಡಿದಾಗ ಮಾತ್ರ ಇವು ಬಡವರಿಗೆ ಮುಟ್ಟುವುದಕ್ಕೆ ಮತ್ತು ಈ ಕಾರ್ಯಕ್ರಮಗಳು ಜಾರಿಗೆ ಬರುವುದಕ್ಕೆ ಅನುಕೂಲವಾಗುತ್ತದೆ. ಇದರಲ್ಲಿಯೂ ಬಹು ಮುಖ್ಯವಾಗಿ ರೆವಿನ್ಯೂ ಇಲಾಖೆ. ಈ ಕಂದಾಯ ಇಲಾಖೆಯ ಮುಖಾಂತರ, ನಮಗೆ ಏನು ಆರಾಧನಾ ಮತ್ತು ಆಶ್ರಯ ಯೋಜನೆ, ಮತ್ತು ಬಗರ್‌ಹುಕುಂ ಸಾಗುವಳಿ ಇದೆ, ಇವೆಲ್ಲವೂ ಖಾಯಂ ಆಗಬೇಕಾದುದು ಮತ್ತು ಈ ಇಲಾಖೆಯಲ್ಲಿ ಮಹತ್ವದ ಕೆಲಸ ಆಗಬೇಕು. ಆದರೆ ಮುಖ್ಯಮಂತ್ರಿಗಳ ಭಾಷಣದಲ್ಲಿ ಅಸಿಸ್ಟೆಂಟ್ ಕಮೀಷನರ್ ಹುದ್ದೆಯನ್ನು ರದ್ದು ಮಾಡುತ್ತೇವೆಂದು ಹೇಳಿದ್ದಾರೆ, ಈಗ ಇರತಕ್ಕಂಥ ತಹಶೀಲ್ದಾರರು ಏನಾದರೂ ತಪ್ಪು ಮಾಡಿದರೆ, ಅಸಿಸ್ಟೆಂಟ್ ಕಮೀಷನರ್ ಹತ್ತಿರ ಹೋಗುವುದಕ್ಕೆ ಅವಕಾಶ ಇತ್ತು, ಆದೂ ಒಂದು ಜಿಲ್ಲೆಯಲ್ಲಿ ಎರಡು ಅಸಿಸ್ಟೆಂಟ್ ಕಮೀಷನರ್ ಹುದ್ದೆಗಳಿವೆ. ಈಗ ಏನಾಗುತ್ತಿದೆ ಎಂದರೆ, ಜಿಲ್ಲಾಧಿಕಾರಿಗಳ ಹತ್ತಿರ ಅಪೀಲು ಹೋಗತಕ್ಕ ಸಂದರ್ಭ ಬರುತ್ತಿದೆ. ಆದರೆ, ತಹಶೀಲ್ದಾರ್‌ರವರನ್ನು ಅಪ್‌ಗ್ರೇಡ್ ಮಾಡಬೇಕು, ಅದರಲ್ಲಿ ಸೀನಿಯರ್ ತಹಶೀಲ್ದಾರ್‌ಗಳು ಹೋಗಬೇಕೆಂದು ಹೇಳಿದ್ದಾರೆ. ಆದರೆ, ಸೀನಿಯರ್ ತಹಶೀಲ್ದಾರ್ ಮತ್ತು ಕೆ.ಎ.ಎಸ್. ಮಾಡಿರತಕ್ಕಂಥಾವರು ಹಾಗೂ ಪ್ರಮೋಷನ್‌ನಿಂದ ಬಂದಿರುವವರೂ ಇದ್ದಾರೆ. ಈ ಪ್ರಮೋಷನ್‌ನಿಂದ ಬಂದಿರುವವರಿಗೆ ಸೀನಿಯರ್ ತಹಶೀಲ್ದಾರ್ ಮಾಡುತ್ತಾರೋ, ಕೆ.ಎ.ಎಸ್.ನವರು ಸೀನಿಯರ್ ತಹಶೀಲ್ದಾರ್ ಮಾಡುತ್ತಾರೋ, ಇದೊಂದು ರೀತಿಯ ಗೊಂದಲಮಯ ವಾತಾವರಣವಾಗಿದೆ. ಈಗ ಏನಾಗಿದೆ ಎ.ಸಿ. ಆಫೀಸಿನಲ್ಲಿ, ತಹಶೀಲ್ದಾರ್ ಆಫೀಸಿನಲ್ಲಿ ಕೆಲಸ ಮಾಡುವುದಕ್ಕೆ ಆಗದೇ ಗೊಂದಲವಾದ ವಾತಾವರಣ ಸೃಷ್ಟಿಯಾಗಿದೆ. ಅದಕ್ಕಾಗಿ ಹೇಳುತ್ತಿದ್ದೇವೆ. ಎಲ್ಲಾ ಕೆಲಸವನ್ನೂ ರೆವಿನ್ಯೂ ಇಲಾಖೆಗೇ ವಹಿಸುತ್ತಾರೆ. ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಲ್ಲಿ ರಿಕವರಿ ಆಗಲಿಲ್ಲವೇ, ರೆವಿನ್ಯೂ ಇಲಾಖೆಯವರನ್ನು ಕಳುಹಿಸಿ, ಜಪ್ತಿ ಮಾಡಿಕೊಂಡು ಬಂದು ದುಡ್ಡು ವಸೂಲು ಮಾಡಿಕೊಂಡು ಬನ್ನಿ ಎಂದು ಹೇಳುತ್ತಾರೆ. ಇನ್‌ಕಮ್ ಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್ ವಸೂಲಾಗಲಿಲ್ಲವೇ, ಆರ್ಡರ್ ಮಾಡುತ್ತಾರೆ, ಅಲ್ಲಿ ಹೋಗಿ ವಸೂಲು ಮಾಡಿಕೊಂಡು ಬನ್ನಿ ಎಂದು ಹೇಳುತ್ತಾರೆ. ಫುಡ್ ಇಲಾಖೆಯಿಂದ ರೇಷನ್ ಕಾರ್ಡನ್ನು, ಹಸಿರು ಕಾರ್ಡನ್ನು ಏನಾದರೂ ಕೊಡಬೇಕೇ, ತಹಶೀಲ್ದಾರರನ್ನು ಅಥವಾ ರೆವಿನ್ಯೂ ಇಲಾಖೆಯವರನ್ನು ಹೋಗಿ ಅದನ್ನು ಸರ್ವೆ ಮಾಡಿಕೊಂಡು ಬನ್ನಿ ಎಂದು ಹೇಳುತ್ತಾರೆ. ಮತ್ತೆ ಯಾರಾದರೂ ಸತ್ತು ಹೋದರೆ, ಬೇವರ್ಸಿಯಾದರೆ ಆ ಹೆಣವನ್ನು ಹೊತ್ತು ಹಾಕಿ ಬರಬೇಕೆಂದು ಹೇಳುತ್ತಾರೆ. ಆದರೆ ಆ ಇಲಾಖೆಯಲ್ಲಿ ಇರತಕ್ಕ ಕೆಳದರ್ಜೆ ಅಧಿಕಾರಿಗಳನ್ನು ಸಮರ್ಪಕವಾಗಿ ಗಣನೆಗೆ ತೆಗೆದುಕೊಳ್ಳದೇ ಅಲ್ಲಿ ಸ್ವಲ್ಪ ತೊಂದರೆಯಾಗಿರುವುದರಿಂದ ಈ ಯೋಜನೆಗಳಿಗೆ ಧಕ್ಕೆ ಬರುತ್ತದೆ ಎಂದು ನನಗನ್ನಿಸುತ್ತದೆ. ನಾವು ಆಡಳಿತ ಸುಧಾರಣೆ ಮಾಡಬೇಕು ನಿಜ, ಹಣವನ್ನು ಉಳಿಸಬೇಕು ನಿಜ, ಆದರೆ ಹಣವನ್ನು ಉಳಿಸಬೇಕಾದುದು ಆಡಳಿತ ನಡೆಸಬೇಕಾದುದು ಬೇರೆ ರೀತಿಯಿಂದ. ನಾವು ಬ್ರಿಟೀಷರ ಆಡಳಿತ ಪದ್ಧತಿ ಏನಿತ್ತೋ ಅದನ್ನೇ ಅನುಸರಿಸಿಕೊಂಡು ಬಂದಿರುವುದರಿಂದ ಮೇಲ್ಮಟ್ಟದ ಅಧಿಕಾರಿಗಳಿಗೆ ಜಾಸ್ತಿ ಮಾನ್ಯತೆ ಕೊಟ್ಟು ಕೆಳಮಟ್ಟದ ಅಧಿಕಾರಿಗಳಿಗೆ ಕಡಿಮೆ ಮಾನ್ಯತೆ

ಕೊಡುತ್ತಿರುವುದರಿಂದ ಕೆಳಮಟ್ಟದಲ್ಲಿ ಕೆಲಸ ಸಮರ್ಪಕವಾಗಿ ಆಗುತ್ತಿಲ್ಲ. ಮೇಲ್ಮಟ್ಟದಲ್ಲಿ ಅನೇಕ ಖರ್ಚುಗಳಾಗುವುದಕ್ಕೆ ಕಾರಣವಾಗಿದೆ. ಉದಾಹರಣೆಗೆ ಕಾರ್ಯದರ್ಶಿಗಳ ಮಟ್ಟದಲ್ಲಿ ಏನಾಗಿದೆ, ಐ.ಎ.ಎಸ್. ನವರಿಗೆ ಅಧಿಕಾರಿಗಳ ಹುದ್ದೆ ಕೊಡುವುದಕ್ಕೋ ಏನೋ, ಕಾರ್ಯದರ್ಶಿ-1, ಕಾರ್ಯದರ್ಶಿ-2, ಮತ್ತೆ ಅದಕ್ಕೆ ಡೆಪ್ಯುಟಿ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ ಆದಮೇಲೆ ಅಂಡರ್ ಸೆಕ್ರೆಟರಿ, ಅಂಡರ್ ಸೆಕ್ರೆಟರಿ ಆದಮೇಲೆ ಸೂಪರಿಂಟೆಂಡೆಂಟ್, ಸೂಪರಿಂಟೆಂಡೆಂಟ್ ಆದ ಮೇಲೆ ಒಬ್ಬ ಗುಮಾಸ್ತ. ನಾನು ಏನಾದರೂ ಒಂದು ಕಾಗದ ಮಂತ್ರಿಗಳಿಗೆ ಕೊಟ್ಟರೆ ಅದು ಕಾರ್ಯದರ್ಶಿಗಳಿಗೆ ಹೋಗುತ್ತದೆ. ಕಾರ್ಯದರ್ಶಿಗಳಿಂದ ಮತ್ತೆ ಕೆಳಗಡೆ ಹೋಗುತ್ತದೆ. ಒಂದನೇ ಕಾರ್ಯದರ್ಶಿಗಳಿಗೆ ಹೋಗುತ್ತದೋ , ಎರಡನೇ ಕಾರ್ಯದರ್ಶಿಗಳಿಗೆ ಹೋಗುತ್ತದೋ ಏನೋ ಕೇಳಬೇಕಾಗಿದೆ. ಮೊದಲು ಕೆಳಗಡೆ ಗುಮಾಸ್ತನಿಗೆ ಹೋಗುತ್ತದೆ, ಗುಮಾಸ್ತ ಬರೆದದ್ದು ಸೂಪರಿಂಟೆಂಡೆಂಟ್‌ಗೆ ಹೋಗುತ್ತದೆ ಅವರು ನೋಡಬೇಕು, ಸೂಪರಿಂಟೆಂಡೆಂಟ್ ಬರೆದದ್ದು ಅಂಡರ್ ಸೆಕ್ರೆಟರಿ ನೋಡಬೇಕು, ಅಂಡರ್ ಸೆಕ್ರೆಟರಿ ಬರೆದದ್ದು ಡೆಪ್ಯುಟಿ ಸೆಕ್ರೆಟರಿಗೆ ಹೋಗಬೇಕು ಅವರು ನೋಡಬೇಕು, ಆಮೇಲೆ ಸೆಕ್ರೆಟರಿಗೆ ಹೋಗಬೇಕು. ಇದು ಯಾವ ಪದ್ಧತಿ ? ಏನು ಗುಮಾಸ್ತ ಬರೆದದ್ದನ್ನು ಸೂಪರಿಂಟೆಂಡೆಂಟ್ ಅಥವಾ ಅಂಡರ್ ಸೆಕ್ರೆಟರಿ ನೋಡಿ ಬಿಟ್ಟು ಕಾರ್ಯದರ್ಶಿಗಳಿಗೆ ಕಳುಹಿಸುವುದಕ್ಕೆ ಆಗುವುದಿಲ್ಲವೇ? ಈ ಅಧಿಕಾರಿಗಳನ್ನು ಏತಕ್ಕೆ ತೆಗೆಯಬಾರದು ?ಅದನ್ನು ಬಿಟ್ಟು ಕೆಳಮಟ್ಟದಲ್ಲಿರತಕ್ಕಂಥ ಅಧಿಕಾರಿಗಳಲ್ಲಿ ಆದಷ್ಟು ಬೇಗ ಅಧಿಕಾರ ವಿಕೇಂದ್ರೀಕರಣವಾಗಿ, ಜನಕ್ಕೆ ಕೊಟ್ಟಂಥ ಕಾರ್ಯಕ್ರಮಗಳು, ಜಲ್ದಿ ಜನಕ್ಕೆ ಮುಟ್ಟಲಿ, ಜನಗಳಿಗೆ ಸವಲತ್ತುಗಳು ಸಿಗಲಿ ಎಂದು, ಕೆಳಮಟ್ಟದಲ್ಲಿರತಕ್ಕಂಥ ಅಧಿಕಾರಗಳನ್ನು ಏತಕ್ಕಾಗಿ ಬದಲಾವಣೆ ಮಾಡಬೇಕು ನನಗೆ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿವರವಾಗಿ ಹೇಳಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತಿದ್ದೇನೆ. ಇದರ ಜೊತೆಯಲ್ಲಿ ಇನ್ನು ಮೇಲ್ಮಟ್ಟದಲ್ಲಿ ನಾವು ಸೆಕ್ರೆಟೇರಿಯೇಟ್ ನೋಡಿದರೆ, ಕಾರ್ಯದರ್ಶಿಗಳಿಗಾಗಲೀ ಅಥವಾ ಅವರಿಗಿಂತ ಕೆಳಮಟ್ಟದಲ್ಲಿರತಕ್ಕಂಥವರಿಗಾಗಲೀ, ಅವರು ಮನೆಯಿಂದ ಆಫೀಸ್‌ಗೆ ಬರುವುದಕ್ಕೆ ಒಂದು ಕಾರ್ ಕೊಟ್ಟಿದ್ದೀರಿ, ಯಾವುದಾದರೂ ಮೀಟಿಂಗ್‌ಗೆ ಬರುವುದಕ್ಕೆ ಕಾರ್ ಕೊಟ್ಟಿದ್ದೀರಿ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ತಾಲ್ಲೂಕು ಆಫೀಸ್‌ನಲ್ಲಿ ತಹಶೀಲ್ದಾರ್ ಆಗಿ ಕೆಲಸ ಮಾಡುವವರಿಗೆ ಒಂದು ಜೀಪ್ ಕೊಟ್ಟು, 250 ರೂಪಾಯಿ ಪೆಟ್ರೋಲ್‌ಗೆ ಕೊಡುತ್ತೀರಿ. ಇಲ್ಲಿ ಇವರಿಗೆ ಲಿಮಿಟ್ ಇಲ್ಲ. ಇವರು ಮನೆಯಿಂದ ಕಾರ್ ಹಾಕಿಕೊಂಡು ಬಂದು ಸೆಕ್ರೆಟೇರಿಯೇಟ್‌ನಲ್ಲಿ ಫ್ಯಾನ್ ಹಾಕಿಕೊಂಡು ರೂಮ್‌ನಲ್ಲಿ ಕುಳಿತುಕೊಳ್ಳುವುದಕ್ಕೆ ಒಂದು ಕಾರ್. ಅದಕ್ಕೆ ಒಬ್ಬ ಡ್ರೈವರ್, ಅವನಿಗೆ ಸಂಬಳ ಪೆನ್‌ಷನ್ ಕೊಡತಕ್ಕದ್ದು. ಕಾರಿನ ಪೆಟ್ರೋಲ್‌ಗೆ ಎಷ್ಟು ದುಡ್ಡು ಕೇಳುತ್ತಾರೆ ಅಷ್ಟು ದುಡ್ಡು. ನೀವು ಅವರೆಲ್ಲರಿಗೂ ಒಂದು ಕಡೆಯಿಂದ ಕರೆದುಕೊಂಡು ಬರುವುದಕ್ಕೆ ಒಂದು ಬಸ್ ವ್ಯವಸ್ಥೆ ಅಥವಾ ಬೇರೆ ಯಾವುದಾದರೂ ವ್ಯವಸ್ಥೆ ಮಾಡಿ ಸ್ವಂತ ಕಾರನ್ನು ಕೊಂಡು ಕೊಂಡು ಬಿಟ್ಟು ತಿಂಗಳಿಗೆ ಒಂದಿಷ್ಟು ಪೆಟ್ರೋಲ್‌ಗೆ ಖರ್ಚು ಎಂದು ಕೊಟ್ಟು ಬಿಟ್ಟರೆ ನಿಮಗೆ ಡ್ರೈವರ್ ಸಂಬಳ ಉಳಿಯುತ್ತದೆ, ರಿಪೇರಿ ದುಡ್ಡು ಉಳಿಯುತ್ತದೆ, ಅದರ ಜೊತೆಯಲ್ಲಿ ನಿಮಗೆ ಕೆಳಮಟ್ಟದ ಆಫೀಸ್‌ಗಳಿಗೆ ಇದನ್ನು ಕೊಟ್ಟರೆ ಅವರು ಹೇಳಿದಹಾಗೆ ಅವರು ಎಲ್ಲಾದರೂ ತಮ್ಮ ತಾಲ್ಲೂಕಿನಲ್ಲಿ ಹಳ್ಳಿಗಳಲ್ಲಿ ಸುತ್ತಾಡಿಕೊಂಡು ಬಂದು ಬಡವರ ವಿಚಾರ ತಿಳಿಯುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಲ್ಲಿ ಅಧಿಕಾರಿಗಳ ಆಡಳಿತದ ಸುಧಾರಣೆ ಆಗಬೇಕೇ ವಿನಹಃ , ಕೆಳಮಟ್ಟದಲ್ಲಿರುವವರನ್ನು ತೆಗೆದುಬಿಟ್ಟು ಮೇಲ್ಮಟ್ಟದವರನ್ನು ಹೆಚ್ಚುಮಾಡಿಕೊಂಡು , ಮೇಲ್ಮಟ್ಟಕ್ಕೆ ಖರ್ಚು ಮಾಡಿಕೊಂಡು ಹೋಗುವುದು

ಸಮಂಜಸ ಅಲ್ಲ. ಇದರ ಬಗ್ಗೆ ಮತ್ತೊಂದು ಸಾರಿ ಮರುಪರಿಶೀಲನೆ ಮಾಡತಕ್ಕ ಒಂದು ಯೋಚನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮೇಡಂ ಛೇರ್ಮನ್:- ಪಾರ್ಲಿಮೆಂಟ್‌ನಲ್ಲಿ ಮೆಂಬರ್ಸ್‌ಗಳನ್ನು ಕರೆದುಕೊಂಡು ಹೋಗಲಿಕ್ಕೆ, ಬರಲಿಕ್ಕೆ ಒಂದೊಂದು ವ್ಯಾನ್ ಇದೆ.

ಶ್ರೀ ಕರಿಯಣ್ಣ:-ಆ ಟೈಪ್‌ನಲ್ಲಿ ಇವರಿಗೂ ಕೊಡಿ ಅಂತ ಹೇಳ್ತೀರಾ ? ತುಂಬಾ ಸಂತೋಷ. ನನಗೆ ಸಹಕಾರ ಮಾಡಿದ್ದಕ್ಕೆ. ಇನ್ನು ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಬೇಕಾದರೆ ಸಾಲ ಕೊಟ್ಟುಬಿಡಿ. ಅವರೇ ಕಾರು ಕೊಂಡುಕೊಳ್ಳುವುದಕ್ಕೆ ಬರುತ್ತದೆ. ಆ ಸಾಲ ಸಹ ವಾಪಸ್ಸ್ ಬರುತ್ತದೆ. ತಾವು 500ರೂಪಾಯಿ ಪೆಟ್ರೋಲ್‌ಗೆ ಏನು ಕೊಡುತ್ತೀರಿ ಅದು ಸಾವಿರ ಗಟ್ಟಲೆ ಮೇಲೆ ಆಗುವುದಿಲ್ಲವೇ ? ಅವರಿಗೆ ಒಂದು ಗ್ಯಾರೇಜ್ ಮಾಡಬೇಕು. ಕಾರು ನಿಲ್ಲಿಸುವುದಕ್ಕೆ. ಆ ಡ್ರೈವರ್ ಅವರನ್ನು ಕರೆದುಕೊಂಡು ಹೋಗಿ ಮನೆಗೆ ಬಿಟ್ಟು ಮತ್ತೆ ಗ್ಯಾರೇಜ್‌ನಲ್ಲಿ ಕಾರು ಬಿಡಲು ಡ್ರೈವರ್ ಪುಗಸಟ್ಟೆ ಪೆಟ್ರೋಲ್ ಸುಟ್ಟುಕೊಂಡು ಬರಬೇಕು. ಇವತ್ತು ಇದೆಲ್ಲಾ ನ್ಯಾಷನಲ್ ವೇಸ್ಟ್ ಆಗುತ್ತಿದೆ. ಏಕೆಂದರೆ ನಾವು ಪೆಟ್ರೋಲ್ ಮತ್ತು ಡೀಸಲ್‌ನ್ನು ಫಾರಿನ್ ಕರೆನ್ಸಿಕೊಟ್ಟು ಕೊಂಡುಕೊಂಡು ಬರಬೇಕಾಗಿದೆ. ಅದೂ ಸಹ ಉಳಿಯುತ್ತದೆ. ಅದರ ಬದಲು ನಮ್ಮ ರೈತರಿಗೆ ಗೊಬ್ಬರಕ್ಕೆ ರೈತರ ಅಭಿವೃದ್ಧಿಗೆ ಗೊಬ್ಬರ ಅಥವಾ ವಿಶೇಷವಾಗಿ ಕೈಗಾರಿಕೆಗಳನ್ನು ಸೃಷ್ಟಿ ಮಾಡುವುದಕ್ಕೆ ಕೈಗಾರಿಕಾ ಸಾಮಾನುಗಳನ್ನು ತರುವುದಕ್ಕೆ ಹಾಗೂ ಬೇರೆ ವಿಚಾರಕ್ಕೆ ಇದನ್ನು ಉಪಯೋಗಿಸಿಕೊಳ್ಳುವುದಕ್ಕೆ ಬರುತ್ತದೆ. ಇದನ್ನು ಕಡಿಮೆ ಮಾಡಬೇಕೆಂಬುದು ನನ್ನ ಸಲಹೆ. ಇದರ ಜೊತೆಯಲ್ಲಿ ಐ.ಪಿ.ಎಸ್.ಆಫೀಸರ್ಸ್‌ಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಾವು ಮೊನ್ನೆ ಭಾಷಣ ಮಾಡುತ್ತಾ ಹೇಳಿದ್ದೆವು. ಅದು ಬೇಡ ಸ್ವಾಮಿ. ನಮಗೆ ಪೇದೆಗಳ ಕೊರತೆ ಇದೆ. ಅಲ್ಲಿ ನೋಡಿದರೆ ಪೋಲೀಸಿನವರೇ ಇಲ್ಲ. ಒಂದು ಗಲಾಟೆ ಆದರೆ ಸಾವಿರಾರು ಜನರಿಗೆ 5 ಜನ ಪೋಲೀಸರು ಹೋಗುತ್ತಾರೆ ಅವರು 10 ಸಾವಿರ ಜನರು ಇದ್ದರೆ, 5 ಜನ ಪೋಲೀಸಿನವರು ಇರುತ್ತಾರೆ. ಅವರು ಹೇಗೆ ನಿಯಂತ್ರಣ ಮಾಡುವುದಕ್ಕಾಗುತ್ತದೆ, ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೆವು. ಆದರೆ ಮತ್ತೆ 20 ಜನ ಅಡಿಷನಲ್ ಎಸ್.ಪಿ.ಹುದ್ದೆಗಳನ್ನು ಸೃಷ್ಟಿ ಮಾಡಿ ಐ.ಪಿ.ಎಸ್.ಆಫೀಸರ್ಸ್‌ನ್ನು ಎಲ್ಲಾ ಜಿಲ್ಲೆಗಳಿಗೂ ಒಬ್ಬೊಬ್ಬರನ್ನು ಹಾಕಿದ್ದೀರಿ. ಏತಕ್ಕೆ ಬೇಕು. ಅಡಿಷನಲ್ ಎಸ್.ಪಿ.ಗಳು ? ಈಗ ಇರುವ ಒಬ್ಬ ಎಸ್.ಪಿ.ಕೈಗೆ ಕೈ ತುಂಬಾ ಕೆಲಸ ಇಲ್ಲ. ಅವರ ಕೈ ಕೆಳಗೆ ಒಬ್ಬ ಡಿ.ವೈ.ಎಸ್.ಪಿ. ಇರುತ್ತಾರೆ. ಇರುವ ಒಂದೊಂದು ಡಿವಿಜನ್‌ಗೆ ಒಂದೊಂದು ಡಿ.ವೈ.ಎಸ್.ಪಿ. ಮಾಡಿದ್ದೀರಿ. ಎರಡು ಮೂರು ತಾಲ್ಲೂಕುಗಳನ್ನು ಕೊಟ್ಟು ಒಂದೊಂದು ಡಿ.ವೈ.ಎಸ್.ಪಿ ಮಾಡಿದ್ದೀರಿ. ಮತ್ತೆ ಒಂದೊಂದು ತಾಲ್ಲೂಕಿಗೆ ಎರಡೆರಡು ಜನ ಸರ್ಕಲ್ ಇನ್ಸ್‌ಪೆಕ್ಟರ್ಸ್ ಆಗಲೇ ಆಗಿ ಹೋಗಿದ್ದಾರೆ. ಇಷ್ಟೆಲ್ಲಾ ಇರಬೇಕಾದರೆ ಇನ್ನೊಬ್ಬ ಅಡಿಷನಲ್ ಎಸ್.ಪಿ. ಹಾಕಿದ್ದೀರಿ. ಮೇಲ್ವರ್ಗದ ಅಧಿಕಾರಿಗಳ ಸಮೀಕ್ಷೆ ಮಾಡಿ ಅವರ ಸಂಖ್ಯೆ ಕಡಿಮೆ ಮಾಡಬೇಕು. ಆದರೆ ಇದು ಏನಾಗಿದೆ ಎಂದರೆ, ಇದೆಲ್ಲಾ ಸರಿಯೋ ತಪ್ಪೋ ಎಂದು ತಿಳಿಯಲು ಮೇಲ್ವರ್ಗದ ಅಧಿಕಾರಿಗಳೇ ಸೇರಿಕೊಂಡು ಬಿಟ್ಟಿದ್ದಾರೆ. ಆಗ ಅವರು ಮೇಲ್ವರ್ಗದ ಬಗ್ಗೆ ಯೋಚನೆ ಮಾಡುತ್ತಾರೆಯೇ ವಿನ: ಕೆಳ ವರ್ಗದವರ ಬಗ್ಗೆ ಏನಾಗುತ್ತದೆಂದು ಯೋಚನೆ ಮಾಡುವುದಿಲ್ಲ. ಅದಕ್ಕೆ ಈ ರೀತಿಯ ಕೊರತೆ ಆಯಿತೇನೋ ಎಂಬುದು ನನ್ನ ಭಾವನೆ. ಆದ್ದರಿಂದ, ಇದನ್ನು ಮತ್ತೊಂದು ಸಾರಿ ಪರಿಶೀಲನೆ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಯಾವುದಾದರೊಂದು ಕೈಗಾರಿಕೆ ನಷ್ಟದ ಖಾತೆಗೆ ಬಂತು ಅಂದ

ತಕ್ಷಣ ಅಲ್ಲಿ ಆಡಳಿತ ಮಂಡಳಿಯನ್ನು ರದ್ದು ಮಾಡಿ ನೀವು ಆಡಳಿತಾಧಿಕಾರಿಗಳನ್ನಾಗಿ ಈ ಐ.ಎ.ಎಸ್. ಆಫೀಸರ್ಸ್‌ನ್ನು ಹಾಕಿಬಿಡುತ್ತೀರಿ. ಅವರು ಬಂದ ತಕ್ಷಣ ಉತ್ಪತ್ತಿ ಜಾಸ್ತಿಯಾಗುತ್ತದೆ ಅಂತ ಹೇಳಿ ನಾವು ಅವರನ್ನು ಹಾಕತಕ್ಕಂಥ ಪದ್ಧತಿಯನ್ನು ಅಳವಡಿಸಿಕೊಂಡಿದ್ದೇವೆ. ನಾವು ನೋಡಿದ ಹಾಗೆ ಹೆಚ್ಚು ಕಡಿಮೆ ಐ.ಎ.ಎಸ್. ಆಫೀಸರ್ಸ್ ಯಾವ ಯಾವ ಕಾರ್ಖಾನೆಗಳಲ್ಲಿ ಆಡಳಿತ ಮಾಡಿದರೋ ಅಲ್ಲೆಲ್ಲ ಹಿಂದಿನ ವರ್ಷಕ್ಕಿಂತ ಅವರು ಬಂದಾಗಲೇ ಹೆಚ್ಚು ನಷ್ಟವಾಗಿದೆ. ಆ ನಷ್ಟವಾಗಿರತಕ್ಕಂಥದ್ದನ್ನು ಪರಿಗಣಿಸಿ ಯಾರೋ ಒಬ್ಬ ಪರದೇಶಿ ಎಂದರೆ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥವನು ಸರಿಯಾಗಿ ಪ್ರೊಡಕ್ಷನ್ ಮಾಡಲಿಲ್ಲ ಅಂತ ಹೇಳಿ ಅವನನ್ನು ಡಿಸ್‌ಮಿಸ್ ಮಾಡುತ್ತೇವೆ, ಅವನು 10-15 ವರ್ಷಗಳ ಕಾಲ ಕೆಲಸ ಮಾಡಿದ್ದರೂ ಸಹ ಅವನನ್ನು ಮನೆಗೆ ಕಳುಹಿಸಿಬಿಡುತ್ತೀರಿ. ಆದರೆ, ಸಮರ್ಪಕವಾಗಿ ಆಡಳಿತ ಮಾಡದೆ ಲಾಭಕ್ಕೆ ತರುವ ಹಾಗೆ ಮಾಡದೇ ಹೋದರೆ ಐ.ಎ.ಎಸ್.ಆಫೀಸರ್ಸ್‌ಗೆ ಸೂಪರ್ ಟೈಮ್ ಸ್ಕೇಲ್ ಪ್ರಮೋಷನ್ ಕೊಟ್ಟುಬಿಡುತ್ತೀರಿ. ಇದು ಯಾವ ಆಡಳಿತ ಸುಧಾರಣೆ ? ಅವರು ಕೆಲಸ ಮಾಡತಕ್ಕಂಥಾದ್ದರ ಬಗ್ಗೆ ನಾವು ಹೆಚ್ಚಿನ ಗಮನ ಹರಿಸಬೇಕಾಗುತ್ತದೋ ಇಲ್ಲವೋ ಎಂಬುದನ್ನು ತಾವು ಯೋಚನೆ ಮಾಡಿ. ನಾವು ಅವರನ್ನು ನಂಬಿದ್ದೇನೆ. ಏಕೆಂದರೆ, ಇವತ್ತು ನಮ್ಮ ಆಡಳಿತವನ್ನು ಸ್ವಚ್ಛಗೊಳಿಸುತ್ತಾರೆ, ಬಿಗಿ ಮಾಡುತ್ತಾರೆ, ಲಾಭ ತರುತ್ತಾರೆಂಬ ಕಾರಣದಿಂದ. ಅವರಿಗೆ ಅಧಿಕಾರ ಕೊಟ್ಟರೆ ಯಾವ ರೀತಿಯಲ್ಲಿ ನಷ್ಟವಾಗುತ್ತದೆಂದು ಅವರು ಹೇಳುವುದಿಲ್ಲ. ಅವರು ಕೇವಲ ನಮ್ಮ ಖಾತೆಗಳಿಗೆ ನಷ್ಟ ತರತಕ್ಕಂಥಾದ್ದನ್ನು ಹೆಚ್ಚಿಗೆ ಮಾಡುತ್ತಾರೆ. ಅದೂ ಅಲ್ಲದೆ ನಮ್ಮಲ್ಲಿ ಈಗ ಅಬಕಾರಿ (ಎಕ್ಸೈಸ್ ಡಿಪಾರ್ಟ್‌ಮೆಂಟ್) ಇಲಾಖೆ ಇದೆ. ಇದು ನಮಗೆ ತುಂಬಾ ಹಣ ಕೊಡುತ್ತದೆ. ದುಡ್ಡು ಕೊಡುತ್ತದೆ. ಅದರಿಂದ ಹಣ ಬರುತ್ತದೆ ಎನ್ನತಕ್ಕಂಥಾದ್ದರ ಒಂದು ದೃಷ್ಟಿ ನಮ್ಮೆಲ್ಲರ ಕಣ್ಣಲ್ಲಿದೆ. ಹಿಂದೆ ಜಿಲ್ಲಾಧಿಕಾರಿಗಳೇ ಈ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದರು. ಈಗ ಜಿಲ್ಲಾಧಿಕಾರಿಗಳ ಹಿಡಿತ ತಪ್ಪಿಸಿಬಿಟ್ಟು ಅವರ ಇಲಾಖೆಗೆ ಸಂಪೂರ್ಣವಾದ ಅಧಿಕಾರ ಕೊಟ್ಟು ಈಗ ಒಬ್ಬೊಬ್ಬರನ್ನು ಅವರಲ್ಲೇ ಜಿಲ್ಲಾಧಿಕಾರಿಗಳನ್ನಾಗಿ ಮಾಡಿ ಇನ್ನೊಂದಷ್ಟು ನೌಕರರನ್ನು ಹೆಚ್ಚು ಮಾಡಿದ್ದಾರೆ. ಇದರಿಂದ ಆಡಳಿತದಲ್ಲಿ ಏನು ಸುಧಾರಣೆಯಾಗುತ್ತದೆಂಬುದನ್ನು ತಾವು ದಯವಿಟ್ಟು ಯೋಚನೆ ಮಾಡಿ. ಎಕ್ಸೈಸ್ ಇಲಾಖೆಯವರೇ ಬೇರೆ, ಡಿ.ಸಿ. ಆಗಿರತಕ್ಕಂಥವರು ಆ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿ ಬೇರೆ ಇರುವುದರಿಂದ ಏನಾಗಿದೆ ? ಹಿಂದೆ ಡಿ.ಸಿ.ಯವರು ಸೂಪರಿಂಟೆಂಡೆಂಟ್‌ಗಳನ್ನು ಸೂಪರ್‌ವೈಸ್ ಮಾಡುತ್ತಾರೆ ಅಂದರೆ ಅವರು ಹೆದರುತ್ತಿದ್ದರು. ಹೆಚ್ಚು ರಿಕವರಿ ಮಾಡಲು ಅನುಕೂಲವಾಗುತ್ತಿತ್ತು. ಈಗ ಅವರು ಯಾರಿಗೂ ಹೆದರುವುದಿಲ್ಲ. ಈಗ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರ ಮೇಲೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರೇ ಇರುವುದರಿಂದ ಇವರನ್ನು ಬೇರೆಯವರು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಇದರಿಂದ ಆಡಳಿತ ಸುಧಾರಣೆಯಾಗುವುದಿಲ್ಲ. ಆಡಳಿತ ಸುಧಾರಣೆ ಮಾಡುತ್ತೇನೆಂದು ಎ.ಸಿ.ಹುದ್ದೆಗಳನ್ನು ತಪ್ಪಿಸಲು ಹೋಗಿ ಇನ್ನಷ್ಟು ಡಿ.ಸಿ.ಹುದ್ದೆಗಳನ್ನು ನಾವು ಸೃಷ್ಟಿ ಮಾಡಿಸಿದ್ದೇವೆ. ಇದೆಲ್ಲಾ ಆಡಳಿತ ಸುಧಾರಣೆಗೆ ಬರುತ್ತದೆ. ತಾವು ಇದನ್ನು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳಿ ಏತಕ್ಕಾಗಿ ಇದನ್ನು ಮಾಡುತ್ತೀರೋ ನನಗೆ ಗೊತ್ತಾಗುತ್ತಿಲ್ಲ. ಇದನ್ನು ಸ್ವಲ್ಪ ತಾವು ಗಮನದಲ್ಲಿಟ್ಟುಕೊಂಡು ಇದನ್ನು ಪರಿವರ್ತನೆ ಮಾಡುವುದಕ್ಕೆ ಆಗುವುದಿದ್ದರೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದೂ ಅಲ್ಲದೆ ನಾವು ಎಕ್ಸೈಸ್‌ನಲ್ಲಿ ಮತ್ತಷ್ಟು ಉತ್ಪತ್ತಿಯನ್ನು ಕಾಣಬಹುದು. ಆದರೆ ಅಧಿಕಾರಿಗಳನ್ನು ಸ್ವಲ್ಪ ಹಿಡಿತದಲ್ಲಿ ಇಟ್ಟುಕೊಂಡು ಯಾರು ಯಾರು ಸೆಕೆಂಡ್ಸ್ ಮಾಡುತ್ತಾರೋ

ಅವರ ಮೇಲೆ ನಿಗಾ ಇಟ್ಟು ತೆರಿಗೆ ವಸೂಲು ಮಾಡಿದರೆ ಖಂಡಿತಾ ಇನ್ನೂ ಒಂದಷ್ಟು ಉತ್ಪತ್ತಿ ಜಾಸ್ತಿ ಮಾಡಬಹುದು. ಇದರಿಂದ ರಾಜ್ಯದ ಜನಕ್ಕೆ ಪ್ರಯೋಜನವಾಗತಕ್ಕಂಥದ್ದನ್ನು ನಾವು ಮಾಡಬಹುದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದೂ ಅಲ್ಲದೆ ನಮ್ಮ ಮುಖ್ಯಮಂತ್ರಿಗಳು ಹಣಕಾಸಿನ ಖಾತೆಯನ್ನು ಹಿಡಿದಿದ್ದಾರೆ. ಅವರು ಈ ದಿಶೆಯಲ್ಲಿ ಬಿಗಿ ಮಾಡಿದರೆ ಖಂಡಿತಾ ನಮಗೆ ಲಾಭ ಜಾಸ್ತಿ ಬರುತ್ತದೆ. ಈಗಾಗಲೇ ಟೈಟ್ ಮಾಡಿದ್ದಾರೆ. ಇವರು ಬಂದ ಮೇಲೆ 100ಕೋಟಿ ರೂಪಾಯಿ ಜಾಸ್ತಿ ಆದಾಯ ಬರುವಂತೆ ಮಾಡಿದರು. ಮುಂದೆ ಇದು ಇನ್ನೂರು ಕೋಟಿ ಜಾಸ್ತಿ ಆಗತಕ್ಕಂಥಾದ್ದು ಇದೆ. ಏಕೆಂದರೆ, ಸೇಲ್ಸ್ ಟ್ಯಾಕ್ಸ್ ಮತ್ತು ಇನ್‌ಕಂ ಟ್ಯಾಕ್ಸ್ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳ ಹತ್ತಿರ ಯಾರು ಯಾರು ಟ್ಯಾಕ್ಸ್ ಕದಿಯುತ್ತಾರೆ ಎನ್ನತಕ್ಕಂಥ ಪಟ್ಟಿ ಖಂಡಿತಾ ಇರುತ್ತದೆ. ಜೊತೆಗೆ ಯಾವ ರೀತಿ ಟ್ಯಾಕ್ಸ್ ತಪ್ಪಿಸಿಕೊಳ್ಳಬಹುದೆಂದು ಹೇಳಿಕೊಡುವುದು ಅವರಿಗೆ ಗೊತ್ತಿದೆ. ಆದ್ದರಿಂದ ಸರ್ಕಾರ ಬಿಗಿ ಮಾಡಿದಷ್ಟೂ ಜೋರಾಗಿ ವಸೂಲು ಮಾಡುವುದು, ಇಲ್ಲದಿದ್ದರೆ ಬಿಡುವುದು ಹೀಗೆ ಎರಡೂ ಅವರಿಗೆ ಗೊತ್ತಿದೆ. ಎಲ್ಲರ ಪಟ್ಟಿ ಅವರ ಕಡೆ ಇರುವುದರಿಂದ ಈ ಇಲಾಖೆಯಲ್ಲಿ ಸಮರ್ಪಕವಾಗಿ ಆಡಳಿತ ಮಾಡುವುದಕ್ಕೆ ನಮ್ಮ ಮುಖ್ಯಮಂತ್ರಿಗಳು ಮತ್ತೊಂದಷ್ಟು ಬಿಗಿ ಮಾಡಬೇಕು. ವಸೂಲಾತಿಯನ್ನು ನಿಖರವಾಗಿ ಕಟ್ಟುನಿಟ್ಟಾಗಿ ಮಾಡಿದರೆ ನಮ್ಮ ರಾಜ್ಯದ ಉತ್ಪತ್ತಿ ಜಾಸ್ತಿಯಾಗುತ್ತದೆ. ಆ ಇಲಾಖೆಯನ್ನು ಚುರುಕು ಗೊಳಿಸುವುದಕ್ಕೆ ಒಂದಷ್ಟು ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಸ್ನೇಹಿತರು ಹೇಳಿದ ಹಾಗೆ 3 ವರ್ಷದ ಮೇಲೆ ಒಂದು ಕಡೆ ಅವರನ್ನು ಇರುವುದಕ್ಕೆ ಬಿಡದ ಹಾಗೆ ಎಲ್ಲಾ ಕಡೇನೂ ಬದಲಾವಣೆ ಮಾಡಿ ಹೊಸಬರನ್ನು ಅಲ್ಲಲ್ಲಿ ಹಾಕುವುದರಿಂದ ಉತ್ಪತ್ತಿ ಜಾಸ್ತಿಯಾಗುತ್ತದೆಂದು ಹೇಳಲಿಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ಈಗ ಡಿ.ಪಿ.ಎ.ಆರ್. ಸೆಕ್ಷನ್ ಏನಿದೆ, ಇದು ಇಡೀ ರಾಜ್ಯದಲ್ಲಿ ಬಹಳ ದೊಡ್ಡ ಸೆಕ್ಷನ್. ಇದು ಎಲ್ಲರ ಮೇಲೆ ರಾಜ ಇದ್ದ ಹಾಗೆ ಎಂದು ನಾವು ತಿಳಿದುಕೊಂಡುಬಿಟ್ಟಿದ್ದೇವೆ. ಈ ಡಿ.ಪಿ.ಎ.ಆರ್.ಸೆಕ್ಷನ್‌ನಲ್ಲಿ ಬಹಳ ಅನ್ಯಾಯಗಳು ಆಗುತ್ತಿದೆ. ಇದನ್ನು ಯಾರೂ ಹೇಳುವವರು ಕೇಳುವವರು ಇಲ್ಲದ ಹಾಗೆ ಆಗಿಹೋಗಿದೆ. ಚೀಫ್ ಮಿನಿಸ್ಟರ್ ಇದಕ್ಕೆ ಹೆಡ್ ಇರಬಹುದು. ಆದರೂ ಸಹಿತ ಡಿ.ಪಿ.ಎ.ಆರ್. ಸೆಕ್ಷನ್ ಏನಿದೆಯಲ್ಲಾ ಅದನ್ನು ಒಂದೊಂದು ಸಾರಿ ನಾವು ಎಷ್ಟೇ ಬದಲಾವಣೆ ಮಾಡಿ ಅಲ್ಲಿಗೆ ನಿಷ್ಠಾವಂತ ಅಧಿಕಾರಿಗಳನ್ನು ಪೋಸ್ಟಿಂಗ್ ಮಾಡುವುದಕ್ಕೆ ಹೋದರೂ ಸಹಿತ ಅವರು ತಮಗೆ ಬೇಕಾದಂಥ ಅಧಿಕಾರಿಗಳನ್ನೇ ಪೋಸ್ಟಿಂಗ್ಸ್ ಮಾಡುತ್ತಾರೆ. ಅದರಲ್ಲೂ ನಮ್ಮ ಹರಿಜನ ಗಿರಿಜನರಿಗೆ ಏನಾದರೂ ಪ್ರಮೋಷನ್ ಬರಬೇಕು, ಒಂದು ಪೋಸ್ಟಿಂಗ್ಸ್ ಮಾಡಬೇಕು ಎಂದರೆ ಅವನನ್ನು ಮಾಡುವುದಕ್ಕೇ ಹೋಗುವುದಿಲ್ಲ. ಹಾಗೆಯೇ ಇಟ್ಟುಕೊಂಡು ಕುಳಿತುಕೊಂಡುಬಿಡುತ್ತಾರೆ. ಈಗಾಗಲೇ ಒಂದು ಫೈಲ್ ಇದೆ. 4 ಜನ ಸೂಪರಿಂಟೆಂಡಿಂಗ್ ಇಂಜಿನಿಯರ್ಸ್ ರಿಟೈರ್ಡ್ ಆಗುತ್ತಾರೆ. ಅದೇನೋ ದೈವವಶಾತ್ 3 ಜನ ಸೂಪರಿಂಟೆಂಡಿಂಗ್ ಇಂಜಿನಿಯರ್ಸ್ ಮತ್ತು ಒಬ್ಬ ಚೀಫ್ ಇಂಜಿನಿಯರ್ ಸಹಿತ ಹರಿಜನರೇ ಪ್ರಮೋಷನ್‌ನಲ್ಲಿ ಜೇಷ್ಟತಾ ಪಟ್ಟಿಯಲ್ಲಿ ಇರುವುದರಿಂದ ಆ ಹರಿಜನರಿಗೆ ಸಿಕ್ಕಬಾರದು ಅನ್ನುವ ಪರಿಸ್ಥಿತಿಯೋ ಏನೋ, ಆ ಪ್ರಮೋಷನ್ ಪಟ್ಟಿಯನ್ನು ಹಾಗೆಯೇ ಉಳಿಸಿಕೊಂಡು ಬಿಟ್ಟಿದ್ದಾರೆ. ಪೋಸ್ಟ್ ವೇಕೆಂಟ್ ಇದ್ದಾವೆ, ಅವರು ರಿಟೈರ್ಡ್ ಆಗಿ ಮನೆಗೆ ಹೋಗುತ್ತಿದ್ದಾರೆ. ಇನ್ನೂ 4 ಜನಕ್ಕೆ ಪ್ರಮೋಷನ್ ಕೊಡಬೇಕು. ಆದರೆ ಅದೇಕೋ ಅದು ಅಲ್ಲಿಯೇ ಉಳಿದುಹೋಗಿಬಿಟ್ಟಿದೆ. ಹಾಗೇ ಯೂನಿವರ್ಸಿಟಿ ಲೆವೆಲ್‌ನಲ್ಲಿ ಪರೀಕ್ಷೆಯಲ್ಲಿ ಫಸ್ಟ್‌ನಲ್ಲಿ ಬಂದವರಿಗೆ ಕೆಲಸ ಕೊಡಬೇಕೆಂದಿದೆ.

ನನಗೆ ಉತ್ತರವನ್ನು ಡಿ.ಪಿ.ಎ.ಆರ್. ಸೆಕ್ಷನ್‌ನವರು ಕೊಟ್ಟಿದ್ದಾರೆ. ಯೂನಿವರ್ಸಿಟಿ ಪರೀಕ್ಷೆಯಲ್ಲಿ ಫಸ್ಟ್ ಬಂದಂಥ ಹರಿಜನ ಗಿರಿಜನರಿಗೆ ಯೂನಿವರ್ಸಿಟಿ ಲೆವೆಲ್‌ನಲ್ಲಿ ಅಮಾಂಗ್ ದಿ ಷೆಡ್ಯೂಲ್ಡ್ ಕ್ಯಾಸ್ಟ್ ಯಾರು ಒಂದು, ಎರಡು ಮೂರನೇ ಸ್ಥಾನದಲ್ಲಿ ಬಂದಿರುತ್ತಾರೋ ಅವರಿಗೆ ನೇರವಾಗಿ ನೌಕರಿಯನ್ನು ಕೊಡಬೇಕೆಂದು ಇದೆ, ಆದರೆ ಈಗ ಅದು ಟ್ರಿಬ್ಯುನಲ್ ಮುಂದೆ ಬಂದಿದೆ. ಸ್ಟೇ ಇಟ್ಟು. ಅದನ್ನು ಈಗ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಅವರು ಪರಿಶೀಲನೆ ಮಾಡುವುದರಲ್ಲಿ ಮತ್ತೇನಾದರೂ ಒಂದು ಗಂಡಾಂತರ ಬಂದು ಮತ್ತೆ ಅವರು ನೌಕರಿಗೆ ಬರದೇ ಇರುವಂತೆ ಆಗುತ್ತದೆ. ಇದಕ್ಕೇ ಮಾನ್ಯ ಮುಖ್ಯಮಂತ್ರಿಗಳು ಕೃಷಿ ಸಚಿವರಾಗಿದ್ದಾಗ, ಈ ತರಹ ಎಲ್ಲಾ ಮೋಸ ಮಾಡುತ್ತಾರೆಂದು ಹೇಳಿ ಕೆಲವರು ಕೋರ್ಟಿಗೆ ಹೋಗುವುದರೊಳಗೆ ಮೂರ್‍ನಾಲ್ಕು ಜನರನ್ನು ಕೃಷಿ ಅಧಿಕಾರಿಗಳನ್ನು ನೇರ ನೇಮಕ ಮಾಡೇಬಿಟ್ಟರು. ಇದು ಪ್ರಮೋಷನ್ ವಿಚಾರ, ನಾನೇ ಒಂದು ಕಂಪ್ಲೇಂಟ್‌ನ್ನು ಪ್ರಮೋಷನ್ ವಿಷಯದಲ್ಲಿ ಡಿ.ಪಿ.ಎ.ಆರ್. ಸೆಕ್ಷನ್‌ಗೆ ಕೊಟ್ಟಿದ್ದೇನೆ. ಆದರೆ ಇವತ್ತಿನವರೆಗೂ ನನ್ನ ಕಾಗದಕ್ಕೆ ಉತ್ತರಾನೇ ಬಂದಿಲ್ಲ. ಒಬ್ಬನಿಗೆ ಪ್ರಮೋಷನ್‌ನಲ್ಲಿ ಅನ್ಯಾಯವಾಗಿದೆ ಎಂದು ಹೇಳದವನಿಗೆ ಇದರ ಬಗ್ಗೆ ಇವನ್ನು ನ್ಯಾಯವಾಗಿ ಹೇಳುತ್ತಿದ್ದಾರೋ ಸುಳ್ಳು ಹೇಳುತ್ತಿದ್ದಾನೋ ಎಂಬುದನ್ನು ಪರಿಶೀಲನೆ ಮಾಡಿ ಅಂಥ ಹೇಳಿದರೆ ನನಗೆ ಉತ್ತರಾನೇ ಬಂದಿಲ್ಲ. ಹಾಗಾಗಿ ಶಾಸಕರುಗಳು ಯಾವುದೇ ಅಧಿಕಾರಿಗಳಿಗೆ ಒಂದು ಕಾಗದ ಬರೆದರೆ ಅದಕ್ಕೆ ಉತ್ತರ ಕೊಡತಕ್ಕಂಥ ಮನೋಭಾವನೆ ಅಧಿಕಾರಿಗಳಿಗೆ ಇಲ್ಲ. ಇದು ಕೆಲವರಿಗೆ ಇರಬಹುದು. ಎಲ್ಲರಿಗೂ ಎಂದು ನಾನು ಹೇಳುತ್ತಿಲ್ಲ. ಹಾಗಾಗಿ ಶಾಸಕರುಗಳು ಯಾವುದೇ ಅಧಿಕಾರಿಗಳಿಗೆ ಒಂದು ಕಾಗದವನ್ನು ಬರೆದರೆ ಅದಕ್ಕೆ ಉತ್ತರವನ್ನು ಕೊಡತಕ್ಕಂಥ ಸೌಜನ್ಯವೂ ಅವರಿಗೆ ಇಲ್ಲ. ಎಲ್ಲೋ ಕೆಲವರಿಗೆ ಉತ್ತರಿಸುವ ಸೌಜನ್ಯ ಇರಬಹುದು. ಈ ಕೆಲವು ವಿಚಾರಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಯವರಿಗೇ ಬರೆದಿದ್ದೇನೆ. ಮುಖ್ಯಮಂತ್ರಿಗಳಿಗೂ ಬರೆದಿದ್ದೇನೆ, ಅದು ಸಂಬಂಧಪಟ್ಟ ಸೆಕ್ಷನ್‌ಗೆ ಹೋಗಿದೆ ಎಂದು ಹೇಳುತ್ತಾರೆ. ಹೀಗೆ ಹೋಗಿ ಆರು ತಿಂಗಳು ಆದರೂ ಕೂಡ ನನಗೆ ಉತ್ತರ ಬಂದಿಲ್ಲ. ಅವರಿಗೆ ಈ ಹರಿಜನ ಗಿರಿಜನರು ಅಂದರೆ ಅಲರ್ಜಿಯೋ ಏನೋ ಎಂಬುದು ನನಗೆ ಗೊತ್ತಿಲ್ಲ. ಆದಷ್ಟು ಮಟ್ಟಿಗಾದರೂ ಈ ಹರಿಜನ ಗಿರಿಜನರ ಬಗ್ಗೆ ಡಿ.ಪಿ.ಎ.ಆರ್. ಸೆಕ್ಷನ್‌ನವರಿಗೆ ಕರುಣೆ ಇರಲಿ, ಬ್ಯಾಕ್‌ಲಾಗ್ ಏನಿಗೆ ಅದನ್ನು ತುಂಬುವ ಬಗ್ಗೆ ಸೂಕ್ತ ಕ್ರಮಗಳನ್ನು ಅವರು ತೆಗೆದುಕೊಳ್ಳಲಿ ಎಂದು ಕೇಳಿಕೊಂಡು ಈ ಬಗ್ಗೆ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತಾ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಲ್.ಆರ್.ಶಿವರಾಮೇಗೌಡ(ನಾಗಮಂಗಲ):- ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಮುಖ್ಯಮಂತ್ರಿಯವರು, ಯೋಜನಾ ಮಂತ್ರಿಯವರು, ಸಣ್ಣ ಉಳಿತಾಯ ಮತ್ತು ಲಾಟರಿ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಬೆಂಬಲಿಸಿ, ನನ್ನ ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ನಮ್ಮ ಮಾನ್ಯ ಬಂಗಾರಪ್ಪನವರು ಸಮಾಜವಾದಿ ಹಿನ್ನೆಲೆಯಿಂದ ರಾಜಕೀಯವನ್ನು ಮಾಡಿಕೊಂಡು ಬಂದವರು. ಈ ಹಿನ್ನೆಲೆಯಲ್ಲಿ ಬಂದಂಥ ಮುಖ್ಯಮಂತ್ರಿಯವರು ಗ್ರಾಮೀಣ ಜನತೆಗೆ ಸ್ಪಂದನ ಮಾಡುತ್ತಾರೆ ಎಂದು ಹೇಳಿ ಅವರು ಬಹಳಷ್ಟು ಕಾರ್ಯಕ್ರಮಗಳನ್ನು ಇವೊತ್ತು ಹಾಕಿಕೊಂಡಿದ್ದಾರೆ. ಈ ಎಲ್ಲಾ ಇಲಾಖೆಗಳು ಸ್ಪಂದಿಸಿದರೆ ಮಾತ್ರ ಆ ಕಾರ್ಯಕ್ರಮಗಳು ಎಲ್ಲವೂ ಫಲಪ್ರದವಾಗುತ್ತವೆ. ಯಶಸ್ವಿಯಾಗಿ ನಡೆಯುತ್ತವೆ ಎಂದು ನಾನು ಹೇಳಬಯಸುತ್ತೇನೆ. ಈ ಬಗ್ಗೆ ಸರಕಾರದವರು ಹೆಚ್ಚು ಒತ್ತನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇವೊತ್ತು 5000 ಕೋಟಿ ರೆವಿನ್ಯೂನಲ್ಲಿ 2,700 ಕೋಟಿ ರೂಪಾಯಿಗಳಷ್ಟು ನಾವು ಸಂಬಳವನ್ನು ಕೊಡುತ್ತಾ ಇದ್ದೇವೆ. 350 ಕೋಟಿ ರೂಪಾಯಿಗಳಷ್ಟು ಹತ್ತಿರ ನಾವು ಪೆನ್‌ಷನ್ ಕೊಡುತ್ತಾ ಇದ್ದೇವೆ. ಅಂದರೆ ನಮ್ಮ ಆದಾಯದಲ್ಲಿ ಶೇಕಡಾ 60 ರಷ್ಟು ಸಂಬಳಕ್ಕಾಗಿ ನಾವುಗಳು ಕೊಡುತ್ತಾ ಇದ್ದೇವೆ. ಆದರೆ ಇವೊತ್ತು ಸರಕಾರಿ ಕಚೇರಿಗಳಲ್ಲಿ ಏನು ಕೆಲಸಕಾರ್ಯಗಳು ನಡೆಯುತ್ತಾ ಇವೆ ಎಂಬುದನ್ನು ನೋಡಬೇಕಾಗುತ್ತದೆ. ಮತ್ತು ಆ ಒಂದು ದಿಸೆಯಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ಆಗುತ್ತಿಲ್ಲ ಎಂಬುದನ್ನು ಹೇಳಲು ನಾವು ಸಂಶಯ ಪಡಬೇಕಾಗಿಲ್ಲ. ನಾನು ಹಂತಹಂತವಾಗಿ ಕೆಲವು ವಿಚಾರಗಳನ್ನು ಹೇಳ ಬಯಸುತ್ತೇನೆ. ಈಗ ನಮ್ಮ ಸರಕಾರದಲ್ಲೂ ಸರಕಾರಿ ಉದ್ಯೋಗದಲ್ಲಿರತಕ್ಕವರು ಸತತವಾಗಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿಯನ್ನು ಹೊಂದಲು ಕಾನೂನು ಮಾಡಿದ್ದಾರೆ. ನಾನು ಹೇಳುವುದಾದರೆ ಅವರು 15 ವರ್ಷಗಳ ಕಾಲ ದುಡಿಯಬೇಕೆಂದು ಇಲ್ಲ, ಅವರು ಕೆಲಸಕ್ಕೆ ಸೇರಿ ಮೂರೇ ದಿವಸಗಳಾದರೂ ಕೂಡ ಅವರಿಗೆ ಕೈಮುಗಿದು ಬಾಕಿ ಕೊಟ್ಟು ಕಳುಹಿಸಿಬಿಡಿ. ಪ್ರಪಂಚದ ಯಾವುದೇ ರಾಷ್ಟ್ರದಲ್ಲಿ ಈ ರೀತಿಯಾಗಿ ಅಧಿಕಾರವನ್ನು ನಮ್ಮ ರಾಷ್ಟ್ರವೊಂದನ್ನು ಬಿಟ್ಟರೆ ನೌಕರರನ್ನು ಚೆನ್ನಾಗಿ ನೋಡಿಕೊಳ್ಳುವ ರಾಷ್ಟ್ರ ಬೇರೊಂದಿಲ್ಲ. ನಾವು ಅಧಿಕಾರದಲ್ಲಿ ಇರುವವರೆಗೆ ಅವರನ್ನು ಅಳಿಯಂದಿರ ಹಾಗೆ ನೋಡಿಕೊಳ್ಳುತ್ತೇನೆ. ಅವರು ಅಧಿಕಾರ ಬಿಟ್ಟಕೂಡಲೇ ಪೆನ್‌ಷನ್ ಇತ್ಯಾದಿಗಳನ್ನು ಕೊಟ್ಟು ಮಾವಂದಿರ ಹಾಗೆ ನೋಡಿಕೊಳ್ಳುತ್ತೇವೆ. ಇಷ್ಟಾದರೂ ಕೂಡ ಸರಕಾರಿ ನೌಕರರು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನಾವುಗಳು ಚಿಂತನೆ ಮಾಡಬೇಕಾಗುತ್ತದೆ. ಇವೊತ್ತು ಒಂದಕ್ಕೆ ನಾಲ್ಕರಷ್ಟು ಸರಕಾರದ ನೌಕರರು ಇದ್ದಾರೆ. ಆದ್ದರಿಂದ ನಾನು ಸರಕಾರದವರಿಗೆ ಒತ್ತಾಯ ಮಾಡುವುದೇನೆಂದರೆ ಇನ್ನು ಮುಂದೆ ಸರಕಾರದಲ್ಲಿ ಯಾರಿಗೂ ಯಾವುದೇ ಹುದ್ದೆಯನ್ನು ಕೊಡಬೇಡಿ. ಇವೊತ್ತು ಸರಕಾರಿ ನೌಕರಿ ಎಂದರೆ ತುಂಬಾ ಅಟ್ರಾಕ್ಟಿವ್ ಆಗಿರುವಂಥಾದ್ದು ಆಗಿರುತ್ತದೆ. ನಾವು ಇವೊತ್ತು ಗ್ರಾಮಾಂತರ ಪ್ರದೇಶಗಳಿಗೆ ಹೋದಾಗ ಹುಡುಗರು ಯಾವುದೇ ಒಂದು ಸರಕಾರಿ ನೌಕರಿ ಕೊಡಿಸಿ ಎಂದು ಕೇಳುತ್ತಾರೆ. ಹೀಗೆ ಏತಕ್ಕಾಗಿ ಅವರು ಕೇಳುತ್ತಿದ್ದಾರೆ ಅಂದರೆ ಅಷ್ಟು ಸೌಕರ್ಯ, ಸವಲತ್ತುಗಳನ್ನು ನಾವು ಅವರಿಗೆ ಕೊಟ್ಟಿದ್ದೇವೆ. ಹೀಗಾಗಿ ನೌಕರಿಗೆ ಸೇರಿದರೆ ಚೆನ್ನಾಗಿ ಮಜಾ ಮಾಡಬಹುದೆಂಬ ಭಾವನೆ ಬಂದಿದೆ. ಹೀಗಾಗಿ ಸರಕಾರಿ ನೌಕರಿಯು ಒಂದು ಫ್ಯಾನ್ಸಿಯಾಗಿ ಬಿಟ್ಟಿದೆ. ಆದ್ದರಿಂದ ತಾವುಗಳು ಅದಕ್ಕೆ ಒಂದು ಬಿಗಿಯನ್ನು ಹಾಕಬೇಕು. ನಿರುದ್ಯೋಗಿಗಳಿಗೆ ಸರಕಾರದ ಹಣ ಕೊಟ್ಟು ಏನಾದರೂ ಕೈಗಾರಿಕೆಗಳನ್ನು ಮಾಡಲು ಪ್ರೋತ್ಸಾಹಿಸಿ ಅವರ ಕಾಲ ಮೇಲೆ ಅವರು ನಿಂತುಕೊಳ್ಳುವುದಕ್ಕೆ ಪ್ರೋತ್ಸಾಹಿಸುವ ಒಂದು ವ್ಯವಸ್ಥೆಯನ್ನು ಮಾಡಿಕೊಡಿ. ಅದಕ್ಕೆ ನಾವು ಬೇಡ ಎಂದು ಹೇಳುವುದಿಲ್ಲ. ಬೇಕಾದರೆ ಸರಕಾರದ ವತಿಯಿಂದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಅವರಿಂದ ಕೆಲಸವನ್ನು ಮಾಡಿಸಿಕೊಳ್ಳಿ. ಒಟ್ಟಿನಲ್ಲಿ ಸರಕಾರದಲ್ಲಿ ಉದ್ಯೋಗವನ್ನು ಕೊಡುವುದನ್ನು ಮಾತ್ರ ನಿಲ್ಲಿಸಬೇಕು. ಸರಕಾರಿ ನೌಕರ ಒಮ್ಮೆ ಅಧಿಕಾರಕ್ಕೆ ಬಂದರೆ ಸಾಕು. ಆದರೆ ರಾಜಕಾರಣಿಗಳದ್ದು ಹಾಗಲ್ಲ, ಅವರ ಹಣೆಬರಹ ಚನ್ನಾಗಿದ್ದರೆ ಸರಿ, ಇಲ್ಲವಾದರೆ ಕಿತ್ತುಕೊಂಡು ಹೊರಟು ಹೋಗುತ್ತೇವೆ. ಈ ಅಧಿಕಾರಿಗಳು ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ಸೌಕರ್ಯಗಳನ್ನು ಪಡೆದುಕೊಂಡು ಕೊನೆಯವರೆಗೂ ಇರುತ್ತಾರೆ. ಸಾರ್ವಜನಿಕ ಉದ್ದಿಮೆಗಳಲ್ಲಿ 250-300 ಕೋಟಿ ಲಾಸಾಗಿದ್ದರೂ ಅಲ್ಲಿನ ಅಧಿಕಾರಿಗಳಿಗೆ ಕಾರನ್ನು ತಪ್ಪಿಸಿಲ್ಲ. ಅವರ ಮನೆಗಳಲ್ಲಿರುವ ಸಿಬ್ಬಂದಿ ತಪ್ಪಿಸಿಲ್ಲ, ಪ್ರಮೋಷನ್ ತಪ್ಪಿಸಿಲ್ಲ, ಪ್ರಮೋಷನ್ ಕೊಡುತ್ತಲೇ ಇದ್ದೀರಿ. ಕಾರ್‌ಗಳು ಓಡುತ್ತಲೇ ಇವೆ. ಅವರಿಗೆ ಏನೆಲ್ಲಾ ಸವಲತ್ತುಗಳು ಬೇಕೋ ಅದನ್ನೆಲ್ಲಾ

ಕೊಡುತ್ತಿದ್ದೀರಿ. ಇದರ ಬಗ್ಗೆ ಯಾವ ತರಹದ ಅಡಚಣೆಯೂ ಆಗಿಲ್ಲ, ನೀವು ಒಂದು ತೀರ್ಮಾನ ಮಾಡಿ, ಇವತ್ತು ಸರ್ಕಾರಿ ಅಧಿಕಾರಿಗಳಿಗೆ ಕಡಿವಾಣ ಹಾಕದೆ ಇದ್ದರೆ ಕಷ್ಟವಾಗುತ್ತದೆ. ಇವತ್ತು ಇಲ್ಲಿ ಈ ವರದಿಯನ್ನು ಹೇಳಿದ್ದೀರಿ, ಏನೆಂದರೆ ಸರ್ಕಾರಿ ಅಧಿಕಾರಿಗಳಿಗೆ ಕಡಿವಾಣ ಹಾಕಿದರೆ 50ರಿಂದ 100ಕೋಟಿ ರೂಪಾಯಿಯನ್ನು ಉಳಿತಾಯ ಮಾಡಬಹುದು ಎಂದು, ಇವತ್ತು ಕಾವೇರಿ ಯೋಜನೆಗೆ ಹಣ ಕೇಳಿದರೆ ಇಲ್ಲ ಎಂದು ಹೇಳುತ್ತಾರೆ. ಕೃಷ್ಣ ಯೋಜನೆಯ ಬಗ್ಗೆ ಹೆಚ್ಚಿಗೆ ಕೇಳಿದರೆ ಕೊಡುವುದಕ್ಕೆ ಆಗುವುದಿಲ್ಲವೆಂದು ಮುಖ್ಯಮಂತ್ರಿಗಳು ತಮ್ಮ ಅಸಹಾಯಕತೆ ವ್ಯಕ್ತಪಡಿಸ್ತಾರೆ. ಆದ್ದರಿಂದ ಇವರ ಮೇಲೆ ಕಡಿವಾಣ ಹಾಕಿದರೆ ಸಾಕಷ್ಟು ಹಣ ಇಲ್ಲಿ ಉಳಿಯುತ್ತದೆ. ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರ ಇದ್ದಾಗ ಇನ್ನೊಂದು ವರ್ಷದಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 55 ಕ್ಕೆ ಇಳಿಸುತ್ತೇವೆಂದು ಹೇಳಿದ್ದರು. ನಾನು ಕೇಳ್ತೀನಿ ಅದು ಏನಾಯ್ತು ? ನೀವು ಇನ್ನೂ ವರೆಗೆ ಅದರ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಕೂಡಲೇ ಚಿಂತನೆ ಮಾಡಿ ನಿವೃತ್ತಿ ವಯಸ್ಸನ್ನು58 ರಿಂದ 50 ವರ್ಷಕ್ಕೆ ಇಳಿಸಿದರೆ ಖಾಲಿ ಇರುವ ಹುದ್ದೆಗಳಿಗೆ ನಿರುದ್ಯೋಗಿಗಳನ್ನು ತುಂಬಬಹುದು. ಮತ್ತೆ ಈಗ ಪೆನ್‌ಷನ್ ಕೊಡುವ ಪದ್ಧತಿ ಏನಿದೆ ಅದನ್ನು ರದ್ದು ಮಾಡಬೇಕೂಂತ ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಬೇರೆ ಯಾವ ರಾಷ್ಟ್ರದಲ್ಲೂ ಪೆನ್‌ಷನ್ ಕೊಡುವ ಪದ್ಧತಿ ಇಲ್ಲ. ಅಧಿಕಾರದಲ್ಲಿರುವವರೆಗೂ ಸಂಬಳ ಹೊಡೀತಾರೆ ಬಿಟ್ಟುಹೋದ ಮೇಲೆ ಪೆನ್‌ಷನ್ ಕೊಟ್ಟು ಚೆನ್ನಾಗಿರಪ್ಪ ನೀನು ಎಂದು ಹೇಳುತ್ತಿದ್ದೇವೆ. 350 ಕೋಟಿ ಪೆನ್‌ಷನ್ ಕೊಡೋದಿಕ್ಕೆ ಖರ್ಚು ಮಾಡುತ್ತಿದ್ದೀರಿ. ಅದರ ಬದಲು ಸರ್ಕಾರ ಹೊಸ ಪದ್ಧತಿಯನ್ನು ಜಾರಿಗೆ ತಂದು ಗ್ರ್ಯಾಚ್ಯುಯಿಟಿಯನ್ನು ಎಷ್ಟು ಕೊಡಬೇಕೋ ಅಷ್ಟು ಕೊಟ್ಟು ಮನೆಗೆ ಕಳಿಸಿ, ಸಾಯುವವರೆಗೂ ಇವರನ್ನು ಸಾಕುವ ವ್ಯವಸ್ಥೆಯನ್ನು ನಿಲ್ಲಿಸಿ, ಗ್ರಾಮಾಂತರ ಪ್ರದೇಶದಲ್ಲಿ ಹೇಳುತ್ತಾರೆ ಏನೆಂದರೆ ಕೂತು ತಿನ್ನುವವನಿಗೆ ಕುಡಿಕೆ ಹಣ ಇದ್ದರೂ ಸಾಲದು ಅಂತ. ಹಾಗೆ ನೀವು ಇವರಿಗೆ ಎಷ್ಟು ಕೊಟ್ಟರೂ ತೀರದು. ಆದ್ದರಿಂದ ಇದನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಉದಾಹರಣೆಗೆ ದೊಡ್ಡ ಫ್ಯಾಕ್ಟರಿಗಳಲ್ಲೇನಾದರೂ ಪೆನ್‌ಷನ್ ಕೊಟ್ಟಿದ್ದರೆ ಆ ಕಾರ್ಖಾನೆಗಳು ಯಾವುದೂ ಉಳಿಯುತ್ತರಲಿಲ್ಲ. ನಮ್ಮ ನಾಯಕರಾಗಿದ್ದ ದಿವಂಗತ. ರಾಜೀವ್ ಗಾಂಧಿಯವರು ಗ್ರ್ಯಾಚ್ಯುಯಿಟಿ ಸಿಸ್ಟಮ್ ಜಾರಿಗೆ ತರಬೇಕೆಂಬ ಮಾತನ್ನು ಹೇಳಿದ್ದರು. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಏನೆಂದರೆ ಪೆನ್‌ಷನ್ ಸಿಸ್ಟಮ್ ರದ್ದು ಮಾಡಿ ನೀವು ಗ್ರ್ಯಾಚ್ಯುಯಿಟಿ ಸಿಸ್ಟಮ್ ಜಾರಿಗೆ ತರಬೇಕು ಎಂದು, ಈ ರೀತಿ ನೀವು ಮಾಡಿದ್ರೆ ಆದರೆ ನಿಮಗೆ ದುಡ್ಡಿನ ಹೊಡೆತ ಕಡಿಮೆಯಾಗುತ್ತದೆ. ನಮ್ಮ ಅಧಿಕಾರಿಗಳ ಹತ್ತಿರ ಕಾರ್ ಮತ್ತು ಫೋನ್ ಎಷ್ಟು ದುಬಾರಿಯಾಗಿದೆ ಅಂದರೆ ಅವರ್‍ಯಾರಿಗೂ ಬಹುಶಃ ಕಷ್ಟ ಗೊತ್ತಿಲ್ಲ, ಏಕೆಂದರೆ ಕಷ್ಟ ಪಟ್ಟು ಜೇಬಿನಿಂದ ಸ್ವಂತ ಹಣ ಕಟ್ಟೋರಿಗೆ ಆ ಪ್ರಾಬ್ಲಂ ಗೊತ್ತಾಗುತ್ತದೆ. ಸ್ವಂತ ಹಣದಲ್ಲಿ ಪೆಟ್ರೋಲ್ ಹಾಕಿಸುವವರಿಗೆ ಅದರ ಕಷ್ಟ ಗೊತ್ತಾಗುತ್ತದೆ. ಇವತ್ತು ಸರ್ಕಾರೀ ಕಾರ್‌ಗಳು ತರಕಾರಿ ತರೋದ್ರಿಂದ ಹಿಡಿದು ನೀರುತರೋದ್ರಿಂದ ಹಿಡಿದು ಮಕ್ಕಳನ್ನು ಸ್ಕೂಲಿಗೆ ಬಿಡೋಕ್ಕೆ, ಸಿನಿಮಾಕ್ಕೆ ಹೋಗೋಕ್ಕೆ ಮತ್ತು ಸ್ಟೆನೋಗಳನ್ನು ಅವರ ಮನೆಗಳಿಗೆ ಬಿಡುವ ಕೆಲಸಕ್ಕೂ ಸರ್ಕಾರಿ ಕಾರ್‌ಗಳು ಓಡಾಡುತ್ತಿವೆ. ನಾನು ಹೇಳ್ತೀನಿ, ಇವಕ್ಕೆ ನಿಮ್ಮ ಕಡಿವಾಣ ಇಲ್ಲವೇ ? ಇವತ್ತು ಹೆಲ್ಮೆಟ್ ಇಲ್ಲ ಅಂದರೆ ನೂರು ರೂ. ಜುಲ್ಮಾನೆ ಹಾಕುವ ಕಾನೂನು ರಾಜ್ಯದಲ್ಲಿತ್ತು, ಲಕ್ಷಾಂತರ ರೂ ಹೊಡೆಯುವವರಿಗೆ, ದುಂದು ವೆಚ್ಚ ಮಾಡುವವರಿಗೆ ಕಡಿವಾಣ ಹಾಕಬೇಕು. ಇಲ್ಲವಾದರೆ ಬೇರೆ ಯಾವ ರೀತಿ ಮಾಡಬೇಕೆಂದು ಚಿಂತನೆ ಮಾಡಬೇಕು. ಅಧಿಕಾರಿಗಳು ಮಾಡೋದಿರಲಿ, ಅವರ ಹತ್ತಿರ ಪಿ.ಎ.ಗಳು ಇದ್ದಾರಲ್ಲಾ ಅವರು ಸಹ

ಅಂತರರಾಷ್ಟ್ರೀಯ ಕರೆಗಳನ್ನು ಮಾಡ್ತಾರೆ. ನಾವು ಒಂದು ಅಂತರರಾಷ್ಟ್ರೀಯ ಕರೆ ಮಾಡಬೇಕಾದರೆ ಹಿಂದೆ ಮುಂದೆ ಯೋಚನೆ ಮಾಡಬೇಕಾಗಿದೆ. ಈ ಪಿ.ಎ.ಗಳಿಗೆ ಆ ಯೋಚನೆ ಇಲ್ಲ, ಬೇಕಾದರೆ ಪ್ರಪಂಚದ ಯಾವ ಭಾಗಕ್ಕೂ ಮಾತಾಡ್ತಾರೆ. ಅಷ್ಟು ಸುಲಭ ಇದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಕಾರ್‌ಗಳನ್ನು ಅಧಿಕಾರಿಗಳು ಸರ್ಕಾರಿ ಕೆಲಸಕ್ಕೆ ಮಾತ್ರ ಉಪಯೋಗಿಸಬೇಕು. ಪ್ರೊ.ನಂಜುಂಡಸ್ವಾಮಿಯವರು ಇಲ್ಲ, ಅವರು ಈ ಸದನದಲ್ಲಿ ಹೇಳಿದ್ದರು, ಏನೆಂದರೆ ಈ ರಾಜ್ಯದಲ್ಲಿ ಪ್ರತಿಷ್ಠಿತವಾದ ಕಾನ್ವೆಂಟ್‌ಗಳು ಏನಿವೆ, ಅವುಗಳ ಮುಂದೆ ಸರ್ಕಾರಿ ಕಾರ್‌ಗಳು ಎಷ್ಟು ಬರುತ್ತವೆ ಅಂತ ನೋಡಬೇಕೂಂತ. ಆ ಸರ್ಕಾರಿ ಕಾರ್‌ಗಳಲ್ಲಿ ಇವರ ಮಕ್ಕಳನ್ನು ಬಿಟ್ಟು, ಇವರ ಪುಸ್ತಕವನ್ನು ಹೊತ್ತುಕೊಂಡು ಹೋಗಲೂ ಸರ್ಕಾರೀ ಕಾರುಗಳನ್ನೇ ಕಳುಹಿಸುವ ವಾಡಿಕೆ ಇದೆ. ಇದರ ಬಗ್ಗೆ ಸರ್ಕಾರ ಕಡಿವಾಣ ಹಾಕಬೇಕೂಂತ ನಾನು ಒತ್ತಾಯಿಸುತ್ತೇನೆ. ಈವತ್ತು ಲಾಗ್‌ಪುಸ್ತಕ ಪದ್ಧತಿ ಇದೆ, ಬರೀ ಸುಳ್ಳು ಲೆಕ್ಕ ಬರೀತಾರೆ. ಕೆಲವರಿದ್ದಾರೆ ಪ್ರಾಮಾಣಿಕರು, ಇಲ್ಲ ಎಂದು ನಾನು ಹೇಳುವುದಿಲ್ಲ. ಸರ್ಕಾರಿ ಕಾರನ್ನು ಮನೆಗೆ ಹೋಗಿ ಬಿಟ್ಟರೆ ಸ್ವಂತ ಕಾರ್ ಉಪಯೋಗಿಸುತ್ತಾರೆಯೇ ಹೊರತು ಸರ್ಕಾರದ ಕಾರ್ ಉಪಯೋಗಿಸುವುದಿಲ್ಲ. ಅಂತಹ ಪ್ರಮಾಣಿಕ ಅಧಿಕಾರಿಗಳೂ ಇದ್ದಾರೆ. ಆದರೆ ಹೆಚ್ಚಿನ ರೀತಿಯಲ್ಲಿ ಇಂತಹ ಪುಣ್ಯಾತ್ಮರೇ ಇದ್ದರೆ, ಇವರಿಂದ ಪ್ರಾಮಾಣಿಕರಿಗೂ ಕೆಟ್ಟ ಹೆಸರು ಬರುತ್ತದೆ, ಸರ್ಕಾರ ಇದರ ಬಗ್ಗೆ ಕಡಿವಾಣ ಹಾಕಬೇಕು. ಎಸ್.ಟಿ.ಡಿ ಮತ್ತು ಐ.ಎಸ್.ಪಿ. ಕರೆಗಳನ್ನು ಎಲ್ಲರೂ ಯಥೇಚ್ಚವಾಗಿ ಮಾಡುತ್ತಾರೆ. ಇದರ ಬಗ್ಗೆ ಕಡಿವಾಣ ಹಾಕಬೇಕೆಂದು ಒತ್ತಾಯ ಮಾಡುತ್ತೇನೆ. ಇವತ್ತು ಸರ್ಕಾರದಲ್ಲಿ ನೀವು ಕೊಡುತ್ತಿರತಕ್ಕಂಥ ಸಂಬಳ ಏನಿದೆ, ಇದನ್ನು ಸಾಧ್ಯವಾದರೆ ಪರಿಶೀಲನೆ ಮಾಡಬೇಕು. ಕೆಲವು ಡಿಪಾರ್ಟ್‌ಮೆಂಟ್‌ಗಳಿಗೆ ನೀವು ಸಂಬಳವನ್ನು ನಿಲ್ಲಿಸಿಬಿಡಬಹುದು. ಏಕೆಂದರೆ ಇದು ಗಿಂಬಳದ ಕಾಲ, ಸಂಬಳ ಬೇಕಾಗಿಲ್ಲ. ನಿಮ್ಮ ಸಂಬಳ ಎರಡು ದನಕ್ಕೆ ಸಾಲುವುದಿಲ್ಲ ಇವರ ಮಜಾಕ್ಕೆ. ಮಲ್ಲಾರಿಗೌಡರ ಡಿಪಾರ್ಟ್‌ಮೆಂಟ್, ಖರ್ಗೆಯವರ ಡಿಪಾರ್ಟ್‌ಮೆಂಟ್, ಹಾಗೂ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುವವರಿಗೆ ದುಡ್ಡಿನ ಲೆಕ್ಕವೇ ಇಲ್ಲ. ಇವತ್ತು ನಾನು ಒಂದು ಮಾತು ಹೇಳುತ್ತೇನೆ. ನಾನು ಮತ್ತು ಮಾನ್ಯ ಅಜೀಜ್‌ಸೇಠ್‌ರವರು ಯಾವುದೋ ಒಂದು ಸಭೆಗೆ ಹೋಗಿದ್ದೆವು. ಆ ಸಭೆಯಲ್ಲಿ ಒಂದು ವಿಷಯ ಪ್ರಸ್ತಾಪವಾಯಿತು. ಅಲ್ಲಿ ಸುಮಾರು ನಾಲ್ಕಾರು ಸಾವಿರ ಜನ ಕಂಡಕ್ಟರುಗಳು ಡ್ರೈವರ್‌ಗಳು ಸೇರಿದ್ದರು. ಅಲ್ಲಿ ಅಜೀಜ್‌ಸೇಠ್‌ರವರು ಭಾಷಣ ಮಾಡುತ್ತಾ ಹೇಳಿದರು, ಏನೆಂದರೆ, ಹಿಂದೆ ಯಾರೋ ಒಬ್ಬ ಎಂ.ಎಲ್.ಎ. ಬಂದು ಹೇಳಿದರು, ನಮ್ಮ ಊರಿನಲ್ಲಿ ಒಬ್ಬ ಕಂಡಕ್ಟರ್ ಎರಡು ಮನೆ ಕಟ್ಟಿದ್ದಾನೆ, ನನಗೆ ಎಂ.ಎಲ್.ಎ. ಗಿರಿ ಬೇಡ, ನನಗೆ ನಿಮ್ಮ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಒಂದು ಕಂಡಕ್ಟರ್ ಗಿರಿ ಕೊಟ್ಟುಬಿಡಿ ಎಂದು ಕೇಳಿದರು ಎಂದು, ಅಂದರೆ ನಮ್ಮ ಕಂಡಕ್ಟರ್ ಇಷ್ಟೊಂದು ದುಡ್ಡು ಹೊಡೆಯುತ್ತಾರಲ್ಲಾ ಎನ್ನತಕ್ಕಂಥ ಮಾತನ್ನು ಹೇಳಿದರು. ನಾನು ಅವರಿಗೆ ನನ್ನ ಭಾಷಣದಲ್ಲಿ ಹೇಳಿದೆ ನೀವು ಕಂಡಕ್ಟರನ್ನು ಏತಕ್ಕೆ ಗುರುತುಮಾಡಿ ತೋರಿಸುತ್ತೀರಿ ಅಜೀಜ್‌ಸೇಠ್ ಸಾಹೇಬರೇ, ನಾನು ಬೆಂಗಳೂರಿನಲ್ಲಿ ಒಂದು ಮನೆಯಲ್ಲಿ ವಾಸ ಇದ್ದೇನೆ. ಅದು ಬಾಡಿಗೆ ಮನೆ. ಆ ಮನೆ ಎಷ್ಟು ಬೆಲೆ ಬಾಳುತ್ತದೆ ಎನ್ನತಕ್ಕಂಥ ಪ್ರಶ್ನೆ ಬೇಡ. ಆ ಮನೆ ಮಾಲೀಕ ಯಾರಪ್ಪ ಎಂದರೆ ಒಬ್ಬ ವಿಲೇಜ್ ಅಕೌಂಟೆಂಟ್. ಈ ಊರಿನಲ್ಲಿ ವಿಲೇಜ್ ಅಕೌಂಟೆಂಟ್ ಯಾವ ಮಂತ್ರಿಗಳಿಗೂ ಕಡಿಮೆ ಇಲ್ಲ. ಈ ಊರಿನಲ್ಲಿ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ಯಾವ ಮಂತ್ರಿಗೂ ಕಡಿಮೆ ಇಲ್ಲ. ಈ ಊರಿನಲ್ಲಿ, ಈ ರಾಜ್ಯದಲ್ಲಿರತಕ್ಕಂಥ ಸಬ್‌ರಿಜಿಸ್ಟ್ರಾರ್‌ಗಳು ಬಹಳ ಚೆನ್ನಾಗಿದ್ದಾರೆ. ಇವರಿಗೆಲ್ಲಾ ಹೋಲಿಕೆ ಮಾಡಿಕೊಂಡು ನೀವು ಕಡಿವಾಣವನ್ನು ಹಾಕದೇ ಹೋದರೆ ಹೀಗೆ ಆಗುತ್ತದೆ

ಎನ್ನುವುದರ ಬಗ್ಗೆ ಚಿಂತನೆಯನ್ನು ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುತ್ತೇನೆ. ಈ ಕಾರುಗಳ ಮೇಲೆ ಗೂಟವನ್ನು ಹಾಕುತ್ತಾರೆ. ಬಾವುಟ ಹಾರಿಸುವುದಿಲ್ಲ, ಗೂಟವನ್ನು ಹಾಕುತ್ತಾರೆ. ಈಗ ಅದರ ಪಾವಿತ್ರತೆ ಹೊರಟು ಹೋಗಿದೆ. ಇವತ್ತು ಈ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಕೂಡ ಬಾವುಟಹಾಕಿಕೊಂಡು ಓಡಾಡುವ ಹಾಗೆ ಇಲ್ಲ. ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಮಾತ್ರ ಇವತ್ತು ಈ ರಾಜ್ಯದಲ್ಲಿ ಬಾವುಟ ಹಾಕಿಕೊಂಡು ಓಡಾಡತಕ್ಕಂಥದ್ದು ಇರುವುದು. ಇವತ್ತು ಮರ್ಯಾದೆ ಏನು ಬೇಡವೇ ಸರ್ಕಾರಕ್ಕೆ ? ಒಂದು ಸ್ಯಾಂಟಿಟಿ ಬೇಡವೇ ಇದಕ್ಕೆ ? ನೀವು ಗೂಟದ ಕಾರುಗಳನ್ನು ಸರ್ಕಾರದ ಅಧಿಕಾರಿಗಳಿಗೆ ಏತಕ್ಕೆ ಕೊಡುತ್ತೀರಿ? ಇಲ್ಲ ನೀವು ಅವರಿಗೆ ಒಂದು ಬಾವುಟ ಹಾಕಿಕೊಂಡು ಓಡಿಸಿ ಎಂದು ಪರ್ಮಿಷನ್ ಕೊಡಿ. ಇಲ್ಲದಿದ್ದರೆ ಎಲ್ಲರೂ ಗೂಟ ಹಾಕಿಕೊಂಡು ಕನ್‌ಫ್ಯೂಸ್ ಕ್ರಿಯೇಟ್ ಮಾಡುತ್ತಾರೆ. ಮಿನಿಸ್ಟರ್ ಬರುತ್ತಾರಾ, ಅಧಿಕಾರಿಗಳು ಬರುತ್ತಾರಾ, ಎಂಬುದು ಇದರಿಂದ ಗೊತ್ತಾಗುತ್ತಿಲ್ಲ.

ಛೇರ್ಮನ್: ನೀವು ತಪ್ಪು ತಿಳಿದುಕೊಂಡಿದ್ದೀರಿ. ಗೂಟದ ಕಾರು ಮಿನಿಸ್ಟರ್ ಬೇಡ ಎಂದು ಬಿಟ್ಟಿರುತ್ತಾರಲ್ಲಾ, ಆ ಕಾರು ಅವರಿಗೆ ಅಲಾಟ್ ಆಗಿರುತ್ತದೆ. ಹಾಗೆ ಕೊಡುವಾಗ ಗೂಟ ಕಿತ್ತು ಕೊಡಬೇಕಾಗುತ್ತದೆ.

ಶ್ರೀ ಎಲ್.ಆರ್.ಶಿವರಾಮೇಗೌಡ: ಒಂದು ಕೆಲಸ ಮಾಡಿ , ಆ ಗೂಟವನ್ನು ಬಿಚ್ಚಿಕೊಂಡು ಕೊಡಿ ಎಂದು ಹೇಳಿ.

ಛೇರ್ಮನ್: ಅದೇ ನಾನು ಹೇಳಿದ್ದು.

ಶ್ರೀ ಎಲ್.ಆರ್.ಶಿವರಾಮೇಗೌಡ: ಆ ಗೂಟದ ಮರ್ಯಾದೆಯನ್ನು ಕಳೆಯಬೇಡಿ ಅಷ್ಟೆ, ಇವತ್ತು 50 ಕೋಟಿ ರೂಪಾಯಿಗಳಿಂದ ನೂರು ಕೋಟಿ ರೂಪಾಯಿಗಳನ್ನು ಉಳಿಸಬಹುದು. ಇದನ್ನು ಕಡಿವಾಣ ಹಾಕಿದ್ದರೆ ಎನ್ನತಕ್ಕಂಥ ಮಾತನ್ನು ಒಂದು ಪುಸ್ತಕದಲ್ಲಿ ಅನಾಲಿಸಸ್ ಮಾಡಿ ಹೇಳಿದ್ದಾರೆ. ಒಂದು ತಾಲ್ಲೂಕಿನಲ್ಲಿ ಎಷ್ಟು ವೆಹಿಕಲ್‌ಗಳಿವೆ. ಎಂದು ಹೇಳಿದರೆ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥ ವರ್ಕ್‌ಲೋಡ್ ಜಾಸ್ತಿ ಇರತಕ್ಕಂಥ ಅಧಿಕಾರಿಗಳಿಗೆ ವಾಹನಗಳು ಬೇಕು. ಒಂದು ತಾಲ್ಲೂಕಿನಲ್ಲಿ ನಾನು ಕಂಡ ಹಾಗೆ ಹಿಂದೆ ಮೂರು ನಾಲ್ಕು ಜೀಪುಗಳು ಇರುತ್ತಿದ್ದವು. ಇವತ್ತು ಇಪ್ಪತ್ತು ಜೀಪುಗಳು ಇದ್ದಾವೆ. ಇಪ್ಪತ್ತು ವಾಹನಗಳು ಇವತ್ತು ತಾಲ್ಲೂಕು ಕೇಂದ್ರದಲ್ಲಿದ್ದಾವೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಇವತ್ತು ನೀವು ಬರತಕ್ಕಂಥ ಆದಾಯದಲ್ಲಿ ಮೂರು ಸಾವಿರ ಕೊಟಿ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟರೆ ಈ ರಾಜ್ಯದ ಅಭಿವೃದ್ಧಿ ಕಾರ್ಯಕ್ಕೆ ಹಣ ಉಳಿಯುವುದಿಲ್ಲ. ಆದ್ದರಿಂದ ತಾಲ್ಲೂಕು ಲೆವೆಲ್‌ನಲ್ಲಿರುವ ಅಧಿಕಾರಿಗಳು ತಾಲ್ಲೂಕಿನ ಕ್ಷೇತ್ರದಲ್ಲಿ ಪ್ರವಾಸ ಮಾಡಿ ಆಗಿರುವ ಕೆಲಸವನ್ನು ನೋಡಬೇಕಾದರೆ ಅವರಿಗೆ ಮೋಟಾರ್ ಸೈಕಲ್ ಸಾಕು. ಎಲ್ಲಾ ಅಧಿಕಾರಿಗಳಿಗೆ ತಾವು ತಾಲ್ಲೂಕು ಮಟ್ಟದಲ್ಲಿ ಕೆಲವು ತಹಶೀಲ್ದಾರ್ ಮತ್ತು ಸರ್ಕಲ್ ಇನ್ಸಪೆಕ್ಟರ್ ಇಂಥ ಹುದ್ದೆಗಳನ್ನು ಬಿಟ್ಟು ಎಲ್ಲ ಉಳಿಕೆ ಅಧಿಕಾರಿಗಳಿಗೆ ತಾವು ಮೋಟಾರ್ ಸೈಕಲ್ ಟ್ರೈನಿಂಗ್ ಕೊಟ್ಟು ಮೋಟಾರ್ ಸೈಕಲ್ ಕೊಡಿ. ಆಗ ಹಣ ಖರ್ಚಾಗತಕ್ಕಂಥದ್ದು ಉಳಿಯುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಶ್ರೀ ಜಿ.ಎಸ್.ಶಿವನಂಜಪ್ಪ: ನಾನು ಸಣ್ಣ ಹುಡುಗನಿದ್ದಾಗ ತಹಶೀಲ್ದಾರ್‌ರವರಿಗೆ ಕುದುರೆಯನ್ನು ಕೊಡುತ್ತಿದ್ದರು. ಈಗ ಕುದುರೆಯನ್ನು ಕೊಟ್ಟರೆ ಹೇಗೆ ?

ಶ್ರೀ ಎಲ್.ಆರ್.ಶಿವರಾಮೇಗೌಡ: ನನಗೆ ಕುದುರೆ ಕಥೆ ಗೊತ್ತಿಲ್ಲ. ಮೋಟಾರ್ ಸೈಕಲ್ಲನ್ನು ಇವತ್ತು ಕೊಡಿ ಎಂದು ಹೇಳುತ್ತೇನೆ. ಕಾರಿನ ವ್ಯವಸ್ಥೆ ಹೇಗಿದೆ ಎಂದು ಹೇಳಿದರೆ

ಬೆಂಗಳೂರು ನಗರದಲ್ಲಿ ಇವತ್ತು ಹೊಸ ತಂತ್ರಜ್ಞಾನದಲ್ಲಿ ಮಾರುತಿ ವ್ಯಾನ್ 16 ಕಿ.ಮೀ.ಕೊಡುತ್ತದೆ. ಒಬ್ಬ ಅಧಿಕಾರಿ ತನ್ನ ಮನೆಯಿಂದ ಇಲ್ಲಿಗೆ ಬರಬೇಕಾದರೆ ಮಾರುತಿ ಕಾರ್‌ನಲ್ಲಿ ಬಂದರೆ 5 ರೂಪಾಯಿ ಬಿದ್ದರೆ ಅಂಬಾಸಿಡರ್ ಕಾರ್‌ನಲ್ಲಿ ಬಂದರೆ 15 ರೂಪಾಯಿ ಬೀಳುತ್ತದೆ. ಇದು ಸರ್ಕಾರದ ಬಡ ಬೋರೇಗೌಡನ ರೆವಿನ್ಯೂ ಇದು. ಇನ್ನಾರದೂ ಅಲ್ಲ. ಅದಕ್ಕೆ ಸರ್ಕಾರ ಇದರ ಬಗ್ಗೆ ಹೊಸ ಚಿಂತನೆಯನ್ನು ಮಾಡಬೇಕು. ಇವತ್ತು ಈ ಟೌನ್‌ನಲ್ಲಿ ಓಡಾಡತಕ್ಕಂಥ ಕಾರುಗಳ ಪಟ್ಟಿಯನ್ನು ಮಾಡಿ ಇವೆಲ್ಲವನ್ನೂ ಸಹಿತ ಹರಾಜು ಹಾಕಿ, ಇವತ್ತು ಪೆಟ್ರೋಲ್ ಬೆಲೆ ಲೀಟರ್‌ಗೆ 20 ರೂಪಾಯಿ ಆಗುತ್ತಿದೆ. ಎಷ್ಟು ರೂಪಾಯಿಗಳೆಂದು ಕೊಡುವುದಕ್ಕಾಗುತ್ತದೆ. ಇವರ ಕಾರುಗಳು ಹೇಗೆ ಮೈಲೇಜ್ ಕೊಡುತ್ತವೆ. ಎಂದರೆ ಇವರುಗಳ ಡ್ರೈವರ್‌ಗಳು ಓಡಿಸುವ ರೀತಿಯಲ್ಲಿ ಆರು ಕಿಲೋಮೀಟರ್ ಬರುತ್ತದೆ. ಇದಕ್ಕೆ ನೀವು ಮಾರುತಿ ವ್ಯಾನ್‌ಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದರೆ ಸ್ವಲ್ಪ ಹಣ ಉಳಿತಾಯವಾಗುತ್ತದೆ. ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇವತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಕಾಂಟೆಸ್ಸಾ ಕಾರನ್ನು ಕೊಟ್ಟಿದ್ದಾರೆ. ಮಾರುತಿ-1000 ಕೊಟ್ಟಿದ್ದಾರೆ ಎಷ್ಟೋ ಕಡೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಬೇಕಾಗಿರುವುದು ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಅಥವಾ ಮತ್ತೊಂದು ಯಾವುದಾದರೂ ಫಾರೆಸ್ಟ್‌ಗೆ ಹೋಗಬೇಕು ಎಂದರೆ ಮಹೇಂದ್ರ ಜೀಪುಗಳು ಬೇಕು. ಅದನ್ನು ಕೊಡುವುದಿಲ್ಲ ಇವರು. ಅಧಿಕಾರಿಗಳೆಲ್ಲಾ ಒಂದೇ. ಅವರಿಗೆ ಯಾವುದು ಬೇಕೋ ಅವುಗಳನ್ನೇ ಸೆಟ್ ಮಾಡಿ ಕೊಳ್ಳುತ್ತಾರೆ. ಯಾರು ಬೇಕೋ ಅವರನ್ನು ಹಾಕುತ್ತಾರೆ. ಕಾಂಟೆಸ್ಸಾ ಕಾರು ಈ ಡಿಪಾರ್ಟ್‌ಮೆಂಟ್‌ಗೆ ಬೇಕಾಗಿಲ್ಲ. ಅಧಿಕಾರಿಗಳಿಗೆ ಡೀಸಲ್ ಕಾರುಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಮಾಡುತ್ತೇನೆ. ಈ ರಾಜ್ಯದ ಅಧಿಕಾರಿಗಳಿಗೆ ಎಷ್ಟು ಕಾರುಗಳು ಅವಶ್ಯಕತೆ ಇದೆ ಎಂಬುದನ್ನು ಈ ಸದನಕ್ಕೆ ತಿಳಿಸಬೇಕು. ವೆಹಿಕಲ್‌ಗಳ ಕೊರತೆ ಇದೆಯೇ ಅಥವಾ ಜಾಸ್ತಿ ಇದೆಯೇ ಎನ್ನತಕ್ಕದ್ದನ್ನು ಸಹ ಸರ್ಕಾರ ನಮಗೆ ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ. ಅನ್‌ನೆಸ್ಸರಿ ಮೀಟಿಂಗ್‌ಗಳನ್ನು ಕಡಿಮೆ ಮಾಡಬೇಕು. ಬೆಂಗಳೂರಿನಲ್ಲಿ ಒಂದು ಮೀಟಿಂಗ್ ನಡೆಯುತ್ತದೆ ಎಂದರೆ ಬೀದರ್‌ನಿಂದ, ಬಿಜಾಪುರದಿಂದ, ಗುಲ್ಬರ್ಗದಿಂದ ಎರಡೆರಡು ಮೂರು ಮೂರು ಕಾರುಗಳಲ್ಲಿ ಅಧಿಕಾರಿಗಳು ಬರುತ್ತಾರೆ. ಜೊತೆಗೆ ಅವರ ಸಂಸಾರಸ್ಥರು ಅವರ ಸ್ಟೆನೋಗಳು ಬರುತ್ತಾರೆ. ಅಲ್ಲಿಂದಲೇ 3-3 ಕಾರುಗಳಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಸಿದ್ಧಮಾಡಿಕೊಂಡು ಬರುತ್ತಾರೆ. ಅದಕ್ಕಾಗಿ ಈ ಅನ್‌ನೆಸ್ಸರಿ ಮೀಟಿಂಗ್‌ಗಳನ್ನು ಕಡಿಮೆ ಮಾಡಬೇಕೆಂದು ತಾವು ಸರ್ಕಾರದಿಂದ ಒಂದು ಸುತ್ತೋಲೆಯನ್ನು ಹೊರಡಿಸಬೇಕು.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ: ತಾವು ಪೋಲೀಸ್ ಇಲಾಖೆಯ ಬಗ್ಗೆ ಮಾತನಾಡುತ್ತಾ ವೀರಪ್ಪನ್ ಹತ್ತಿರ ಇರುವಂತಹ ಆಯುಧಗಳು ನಮ್ಮಲ್ಲಿ ಇಲ್ಲ ಅಂತ ಹೇಳಿದ್ದೀರಿ. ಅದೇ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಜೋರಾಗಿ ಹೋಗುವುದಕ್ಕೆಂದು ಕಾಂಟೆಸ್ಸಾ ಕಾರುಗಳನ್ನು ಅರಣ್ಯ ಇಲಾಖೆಯವರಿಗೆ ಕೊಟ್ಟಿದ್ದಾರೆನ್ನುವುದು ನನ್ನ ಭಾವನೆಯಾಗಿದೆ. ಅದರೆ ತಾವು ಡೀಸಲ್ ಕಾರುಗಳನ್ನು ಕೊಡಿ ಅಂತ ಹೇಳುತ್ತಿದ್ದೀರಿ. ಡೀಸಲ್ ಕಾರಿನಲ್ಲಿ ವೀರಪ್ಪನನ್ನು ಹಿಡಿಯುವುದಕ್ಕೆ ಆಗುತ್ತದಾ ?

ಶ್ರೀ ಎಲ್.ಆರ್.ಶಿವರಾಮೇಗೌಡ: ಒಳ್ಳೆಯ ಇಂಪೋರ್ಟೆಡ್ ಕಾರುಗಳನ್ನು ಇಟ್ಟಿದ್ದಾರೆ. ಆದ್ದರಿಂದ ಕಾಂಟೆಸ್ಸಾ ಕಾರಿಗಿಂತ ಫಸ್ಟ್‌ಕ್ಲಾಸ್ ಮಾರುತಿ ಕಾರನ್ನು ಕೊಟ್ಟಿದ್ದರೆ ಅದರ ನಾಲ್ಕರಷ್ಟು ಚೆನ್ನಾಗಿ ಓಡುತ್ತದೆ. ಕಾಂಟೆಸ್ಸಾ ಕಾರು ಬೇಕಾಗಿಲ್ಲ.

ಶ್ರೀ ಆರ್.ಎನ್.ನಾಯಕ್: ಡೀಸಲ್ ಕಾರು ಕೊಡಿ ಅಂತ ಈಗ ತಾನೆ ಹೇಳಿದಿರಿ.

ಶ್ರೀ ಎಲ್.ಆರ್.ಶಿವರಾಮೇಗೌಡ: ಎಲ್ಲಿ ಅಗತ್ಯ ಇದೆಯೋ ಅಲ್ಲಿ ಕಾಂಟೆಸ್ಸಾ ಕಾರನ್ನೇ ಕೊಡಿ. ಅಗತ್ಯ ಇಲ್ಲದೇ ಇರತಕ್ಕ ಕಡೆ ಏತಕ್ಕೆ ಕೊಡುತ್ತೀರಿ ? ಇವತ್ತು ಎಷ್ಟು ಪೆಟ್ರೋಲ್ ಹಾಳಾಗುತ್ತಿದೆ ಎನ್ನುವುದರ ಬಗ್ಗೆ ಚಿಂತನೆ ಮಾಡಿ. ಇವತ್ತು ಅನ್‌ನೆಸಸರಿ ಮೀಟಿಂಗ್‌ಗಳನ್ನು ಕಡಿಮೆ ಮಾಡಿ. ಇವರು ಮೀಟಿಂಗ್ ಮಾಡಿ ಏನೇನು ಸಾಧನೆ ಮಾಡಿದ್ದಾರೆ ಎಂಬುದನ್ನು ನಾನು ಕಳೆದ 40 ವರ್ಷಗಳಿಂದ ನೋಡಿದ್ದೇನೆ. ಇದರ ಬಗ್ಗೆ ತಾವು ಕಡಿವಾಣವನ್ನು ಹಾಕಬೇಕೆಂದು ನಾನು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತೇನೆ. ಇಂದು ಸರ್ಕಾರಿ ನೌಕರರುಗಳಲ್ಲಿ ಸೋಮಾರಿತನ ತುಂಬಿ ತುಳುಕಾಡುತ್ತಿದೆ. ಪ್ರಾಮಾಣಿಕವಾಗಿ ಕೆಲವರು ಇದ್ದಾರೆ. ನಾನು ಇಲ್ಲ ಅಂತ ಹೇಳುವುದಿಲ್ಲ. ಅದೇರೀತಿ ಬಹಳ ಕಠಿಣರೂ ಇದ್ದಾರೆ. ಅವರ ಬಗ್ಗೆ ನಿಗಾವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ದೂರದಿಂದ ಬೆಂಗಳೂರಿಗೆ ಬರತಕ್ಕ ಅಧಿಕಾರಿಗಳಿಗೆ ಬಸ್ಸಿನಲ್ಲಿ ಬರುವಂತೆ ತಾವು ಕಿವಿ ಮಾತನ್ನು ಹೇಳಬೇಕು. ಕೇವಲ ಸುತ್ತೋಲೆಯನ್ನು ಹೊರಡಿಸಿದರೆ ಅವರು ಕೇಳುವುದಿಲ್ಲ. ಆದ್ದರಿಂದ ಚುಚ್ಚಿ ಹೇಳಬೇಕು ಅಥವಾ ಕಡಿವಾಣ ಹಾಕತಕ್ಕ ಮಟ್ಟದಲ್ಲಿ ಹೇಳಬೇಕು ಅನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ನಿಮಗೆ ಹೇಳಬೇಕಾಗುತ್ತದೆ. ವಿಧಾನ ಸೌಧದಲ್ಲಿರತಕ್ಕಂಥ ಕ್ಯಾಂಟೀನ್ ಅನ್ನು ಮೊದಲು ಮುಚ್ಚಬೇಕು. ಏಕೆಂದರೆ ಅಲ್ಲಿಗೆ ಬರುವವರು ಮಂತ್ರಿಗಳಿಗೆ ಎಂ.ಎಲ್.ಎ.ಗಳಿಗೆ ಮಂತ್ರಿಗಳಿಗೆ ಡಿಕ್ಕಿ ಹೊಡೆಯುತ್ತಾರೆ. ಅವರು ಯಾರೂ ಲೆಕ್ಕಕ್ಕಿಲ್ಲ. ಅವರಿಗೆ ಆಫೀಸಿನಲ್ಲಿ ಕುಳಿತು ಕೊಳ್ಳತಕ್ಕ ಯೋಚನನೇ ಇಲ್ಲ.

ಛೇರ್ಮನ್: ನೀವು ಇಲ್ಲಿರುವ ಕ್ಯಾಂಟೀನ್ ಮುಚ್ಚಿದರೆ ಅವರು ಬೇರೆ ಬೇರೆ ಕಡೆ ಹೋಗಿ ಬರುವುದಕ್ಕೆ ಟೈಂ ವೇಸ್ಟ್ ಆಗುತ್ತದೆ.

ಶ್ರೀ ಎಲ್.ಆರ್.ಶಿವರಾಮೇಗೌಡ: ನಾನು ಅದಕ್ಕೆ ಸಲಹೆಯನ್ನು ಕೊಡುತ್ತೇನೆ. ಕೇಂದ್ರ ಸರ್ಕಾರದ ಉದ್ಯೋಗಭವನದಲ್ಲಿ, ವಿಜ್ಞಾನ ಭವನದಲ್ಲಿ, ರೈಲು ಭವನದಲ್ಲಿ ಅಧಿಕಾರಿಗಳು 10 ಗಂಟೆಗೆ ಬ್ಯಾಡ್ಜ್ ಹಾಕಿಕೊಂಡು ಬಂದರೆ ಅವರು ಹೊರಗಡೆ ಹೋಗುವ ಹಾಗಿಲ್ಲ. ಸಾಯಂಕಾಲ 5 ಗಂಟೆಯ ತನಕ ಅವರು ಕೆಲಸದ ಮೇಲೆ ಇರುತ್ತಾರೆ. ಆ ವ್ಯವಸ್ಥೆಯೇ ಇಲ್ಲಿ ಜಾರಿಗೆ ಬರಬೇಕು. ಹೋಟೆಲ್‌ಗಳಿಗೆ ಹೋಗಿ ಅವರು ಆಟವಾಡುವುದು ಬೇಡ. ಕೆಲವರು ಹೋಗಿ ಟೈಪಿಸ್ಟ್ ಹತ್ತಿರ ಮಾತನಾಡಿಕೊಂಡು ಕುಳಿತರೆ ವಾಪಸ್ಸ್ ಬರುವುದಿಲ್ಲ. ಅದಕ್ಕೆ ನಾನು ಒತ್ತಾಯ ಮಾಡುವುದೇನೆಂದರೆ ಇವರು ಖುರ್ಚಿ ಬಿಟ್ಟು ಏಳದ ಹಾಗೆ ನೀವು ಇವರಿಗೆ ಕಾಫಿಯನ್ನು ಸಹ ಅಲ್ಲೇ ಒದಗಿಸುವ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು. ನೀವು ದೆಹಲಿಯಲ್ಲಿರುವಂತೆ ಟ್ರಾಲಿಯಲ್ಲಿ ಹೊತ್ತುಕೊಂಡು ಹೋಗಿ ಒಳ್ಳೆಯ ಕಾಫಿ ಬೋರ್ಡಿನ ಕಾಫಿಯನ್ನು ನಮ್ಮ ಅಧಿಕಾರಿಗಳಗೆ ಕುಡಿಸಿ, ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಆರ್.ಎನ್.ನಾಯಕ್: ನೀವು ಕಾಫಿ ಅಲ್ಲೇ ಕೊಡಿ ಅಂತ ಹೇಳುತ್ತೀರಿ. ಅವರು 10ಗಂಟೆಗೆ ಬರುತ್ತಾರೆ. ಒಂದು ಒಂದೂವರೆಗೆ ಬಿಡುತ್ತಾರೆ. ಕಾಫಿ ಕುಡಿಯದೆ ಇದ್ದರೆ ತೊಂದರೆಯಾಗುತ್ತದಾ ? ಕಾಫಿಯನ್ನು ಮನೆಯಲ್ಲೇ ಕುಡಿದುಬಿಟ್ಟು ಬರಬೇಕು. ಸರ್ಕಾರಿ ನೌಕರರಿಗೆ ನೀವು ಕಾಫಿ ಕೊಡಬೇಕೆಂದು ಹೇಳುತ್ತೀರಲ್ಲಾ, 3 ಗಂಟೆಯೊಳಗೆ ಕಾಫಿಯನ್ನು ಕುಡಿಯದೆ ಇದ್ದರೆ ಏನಾಗುತ್ತದೆ.

ಶ್ರೀ ಎಲ್.ಆರ್.ಶಿವರಾಮೇಗೌಡ: ಪ್ರಾಮಾಣಿಕವಾಗಿ ಕಾಫಿ ಕುಡಿದು ಬರತಕ್ಕ ಅಧಿಕಾರಿಗಳ ಸಂಖ್ಯೆ ಕಡಿಮೆಯಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದಲ್ಲಿರುವ ರೀತಿಯಲ್ಲಿ ಅವರು ಕೆಲಸ

ಮಾಡುವ ಜಾಗಕ್ಕೆ ಮಧ್ಯಾಹ್ನದ ಹೊತ್ತು 3 ಗಂಟೆಗೆ ಅಥವಾ 4 ಗಂಟೆಗೆ ಕಾಫಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಿ ಎಂದು ನಾನು ವಿನಂತಿಮಾಡುತ್ತಿದ್ದೇನೆ. ಇವತ್ತು ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳ ಮುಖಕ್ಕೆ ಖದೀಮ ಅಧಿಕಾರಿಗಳು ಮಸಿ ಬಳಿಯುತ್ತಿದ್ದಾರೆ. ಅಂತಹವರ ಬಗ್ಗೆ ನಿಗಾವಹಿಸಬೇಕೆನ್ನತಕ್ಕದ್ದು ನನ್ನ ವಾದವಾಗಿದೆ.

ಛೇರ್ಮನ್: ಅಧಿಕಾರಿಗಳ ಜಾತಿ ಒಂದೇ ತಾನೆ.

ಶ್ರೀ ಎಲ್.ಆರ್.ಶಿವರಾಮೇಗೌಡ: ಅವರನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲವೆಂದು ತಾವು ತೀರ್ಮಾನಕ್ಕೆ ಬಂದಿದ್ದೀರಾ ?

ಶ್ರೀ ಆರ್.ಎನ್.ನಾಯಕ್: ತಾಲ್ಲೂಕ್ ಕಛೇರಿಗಳಲ್ಲಿ ಯಾವುದೇ ಆಫೀಸ್‌ನಲ್ಲಿ ಮೂಮೆಂಟ್ ರಿಜಿಸ್ಟರ್ ಅಂತ ಇರುತ್ತದೆ. ಕಾಫಿಗೆ ಹೋಗಬೇಕಾದರೆ 10-55 ನಿಮಿಷಕ್ಕೆ ನಾನು ಕಾಫಿಗೆ ಹೋಗಿ 12-05 ನಿಮಿಷಕ್ಕೆ ವಾಪಸ್ ಬಂದೆ ಅಂತ ಮೂಮೆಂಟ್ ರಿಜಿಸ್ಟರ್‌ಲ್ಲಿ ಬರೆಯಬೇಡವೇ?

ಶ್ರೀ ಎಲ್.ಆರ್.ಶಿವರಾಮೇಗೌಡ: ಈಗ ನಾನು ನನ್ನ ಸಲಹೆ ಕೊಡುತ್ತಿದ್ದೇನೆ.

ಶ್ರೀ ಆರ್.ಎನ್.ನಾಯಕ್: ಈಗ ಈ ರೀತಿ ಇದೆ. ಕಾರಕೂನರು, ಸೆಕ್ಷನ್ ಆಫೀಸರ್ ಅವರಿಂದ ಹಿಡಿದು ಚೀಫ್ ಸೆಕ್ರೆಟರಿಯವರೆಗೆ ಈ ವ್ಯವಸ್ಥೆ ಇದೆ. ಹೀಗಿದ್ದಾಗ ಕೊನೆಯ ಪಕ್ಷ ಅವರು ಸರ್ಕಾರಿ ಕಛೇರಿಗಳಲ್ಲಿ ಮೂವ್‌ಮೆಂಟ್ ರಿಜಿಸ್ಟರ್‌ನಲ್ಲಿ ಬರೆಯುತ್ತಾರೆಯೇ ಹೇಗೆ ಎನ್ನುವುದನ್ನು ನೋಡಬೇಡವೇ ?

ಒಬ್ಬ ಮಾನ್ಯ ಸದಸ್ಯರು: ಅವರು ಹೇಳಿದ ಹಾಗೆ ಎಲ್ಲರಿಗೂ ಮಿಲಿಟರಿ ಡ್ರೆಸ್ ಹಾಕಬೇಕು.

ಶ್ರೀ ಆರ್.ಎನ್.ನಾಯಕ್: ಈಗ ಮೂವ್‌ಮೆಂಟ್ ರಿಜಿಸ್ಟರ್‌ನಲ್ಲಿ ಬರೆಯದೇ ನಾಪತ್ತೆಯಾಗುವುದು ಕಂಡುಬರುತ್ತಿದೆ.

ಶ್ರೀ ಎಲ್.ಆರ್.ಶಿವರಾಮೇಗೌಡ: ಈಗ ಶಾಸಕರು ಯಾರಾದರು ಅಧಿಕಾರಿಗಳಿಗೆ ಫೋನ್ ಮಾಡಿದರೆ, ಆ ಅಧಿಕಾರಿಗಳ ಪಿ.ಎ.ಗಳು ಎಷ್ಟು ಧಿಮಾಕಿನಿಂದ ಉತ್ತರ ಕೊಡುತ್ತಾರೆಂದರೆ ಅಷ್ಟಿಷ್ಟಲ್ಲ. ಒಂದು ಸಲ ಕೇಳಿದರೆ ಮೇಲಕ್ಕೆ ಹೋಗಿದ್ದಾರೆಂದು, ಇನ್ನೊಂದು ಸಲ ಕೇಳಿದರೆ ಕೆಳಗಡೆ ಹೋಗಿದ್ದಾರೆಂದು, ಮತ್ತೊಂದು ಸಲ ಕೇಳಿದರೆ ಮೀಟಿಂಗ್‌ಗೆ ಹೋಗಿದ್ದಾರೆಂದು ಹೇಳುತ್ತಾರೆ. ಯಾವ ಅಧಿಕಾರಿಗಳೂ ಕೂಡ ಮಾತನಾಡುವುದಕ್ಕೆ ಸಿಗುವುದಿಲ್ಲ. ಅದರಲ್ಲಿ ಕೆಲವು ಉತ್ತಮ ಹಾಗೂ ಪ್ರಾಮಾಣಿಕ ಅಧಿಕಾರಿಗಳು ಸಿಗುತ್ತಾರೆ.

ಶ್ರೀ ಆರ್.ಎನ್.ನಾಯಕ್: ಮಾನ್ಯ ಅಧ್ಯಕ್ಷರೇ ನಾನು ಕಳೆದ ಅಧಿವೇಶನದಲ್ಲಿ ಆರೋಗ್ಯ ಇಲಾಖೆಯಲ್ಲಿರುವ ಕೇಡರ್ ಸ್ಟ್ರೆಂಗ್ ಬಗ್ಗೆ ಒಂದು ಕಾಗದಕ್ಕೆ ಶ್ರೀ ಜಿ.ಪುಟ್ಟಸ್ವಾಮಿಗೌಡರವರ ಹತ್ತಿರ ಒಂದು ಮಿನಿಟ್ ಹಾಕಿಸಿದೆ. ಹಾಗೆಯೇ ಅದಕ್ಕೆ ಸಂಬಂಧಪಟ್ಟಂಥ ಕಾಗದ ಪತ್ರಗಳನ್ನು ಪುಟ್ಟಸ್ವಾಮಿಗೌಡರಿಗೆ ತೋರಿಸಿದೆ, ಅವರು ಅದನ್ನೆಲ್ಲಾ ನೋಡಿದ ನಂತರ ಇದು ಮಾಡಬೇಕಾದ ಕೆಲಸವೆಂದು ಅವರಿಗೆ ಮನವರಿಕೆಯಾಯಿತು. ಅವರು ಮೂರು ದಿವಸಗಳಲ್ಲಿ ಈ ಕೆಲಸದ ಬಗ್ಗೆ ವರದಿ ಮಾಡಿ ಎಂದರು. ನಾನು ಅದರ ಬಗ್ಗೆ ಮುವತ್ತು ದೂರವಾಣಿ ಕರೆಗಳನ್ನು ಮಾಡಿದ್ದೆ, ಆ ಕಾಗದ ಸಚಿವಾಲಯದ ಕಛೇರಿಯಿಂದ ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರಿಗೆ ಹೋಯಿತು. ನಿನ್ನೆಯೂ ಸಹ ಫೋನ್ ಮಾಡಿದೆ. ಏನೂ ಉತ್ತರ ಬರಲಿಲ್ಲ. ಅದು ಕಾನೂನು ಬದ್ಧವಾಗಿಲ್ಲದಿದ್ದರೆ, ಅವರು ಮಂತ್ರಿಗಳಿಗೆ ಸ್ವಾಮಿ, ಇದು ಕಾನೂನು ಬದ್ಧವಾಗಿಲ್ಲವೆಂದು

ತಿಳಿಸಬೇಕು. ಕಾನೂನು ಬದ್ಧವಾಗಿರತಕ್ಕಂಥ ಕೆಲಸಕ್ಕೆ ಮೂವತ್ತು ಸಲ ಫೋನ್ ಮಾಡಿ ನಾಲ್ಕಾರು ಸಲ ನಾನೇ ಕಚೇರಿಗೆ ಅಡ್ಡಾಡಿದೆ. ಅಲ್ಲಿ ಕಾಗದ ಪತ್ರಗಳನ್ನು ಹುಡುಕಿಸಿದೆ, ಕೊನೆಗೂ ಸಿಕ್ಕಿತು. ಆ ಕಛೇರಿಯಲ್ಲಿ ಕಾಗದ ಪತ್ರಗಳು ಸಿಗುವುದಿಲ್ಲ, ಅಂತಹ ಪ್ರಾರಬ್ಧ. ಕಳೆದ ವರ್ಷದ 9ನೇ ತಿಂಗಳಿನಲ್ಲಿ ಪತ್ರ ಹಾಕಿದ್ದು, ಇದುವರೆವಿಗೂ ಕೆಲಸ ಆಗಿಲ್ಲ. ಇದರ ಬಗ್ಗೆ ತಾವು ಸ್ವಲ್ಪ ವಿಚಾರ ಮಾಡಬೇಕು. ಆರೋಗ್ಯ ಇಲಾಖೆಯಲ್ಲಿ ಮತ್ತೊಬ್ಬರು ಆಚಾರ್ ಎನ್ನುವವರಿದ್ದಾರೆ. ಅವರಿಗೆ ನಾನು ಫೋನ್ ಮಾಡಿದ್ದು. ನಾನು ಈ ವಿಷಯವನ್ನು ಏತಕ್ಕೆ ಹೇಳಿದೆ ಎಂದರೆ, ನಮ್ಮ ವಿಷಯ ಬಿಡಿ, ಆದರೆ, ಮಂತ್ರಿಗಳು ಬರೆದುದಕ್ಕೆ ಅವರ ಖಾತೆಗೆ ಸಂಬಂಧಪಟ್ಟಿರತಕ್ಕಂಥವರು ಎಷ್ಟು ಬೆಲೆ ಕೊಡುತ್ತಾರೆ. ಎನ್ನುವುದಕ್ಕೆ ಇದಕ್ಕಿಂತ ಉದಾಹರಣೆ ಬೇಕೇ. ನಾನು ಆ ಚೀಟಿಯನ್ನು ನನ್ನ ಕಿಸೆಯಲ್ಲೇ ಇಟ್ಟುಕೊಂಡಿದ್ದೇನೆ. ಇನ್ನೇನು ಮಾಡುವುದು? ನಾನು ಮಂತ್ರಿಗಳಿಂದಲೇ ಫೋನ್ ಮಾಡಿಸೋಣವೆಂದು ಇನ್ನು ಕಿಸೆಯಲ್ಲೇ ಚೀಟಿಯನ್ನು ಇಟ್ಟುಕೊಂಡಿದ್ದೇನೆ. ಏಕೆಂದರೆ, ಒಂದು ವೇಳೆ ಅದು ಕಾನೂನು ಬದ್ಧವಾಗಿಲ್ಲದೆ ಇದ್ದರೆ ಅದರ ಗತಿ ಏನಾಗುತ್ತಿತ್ತು ಎಂಬುದರ ಬಗ್ಗೆ ನೋಡಿ. ಈಗ ಈ ವಿಷಯ ನೆನಪಾದುದರಿಂದ ಹೇಳಿದೆ. ಆ ಅಧಿಕಾರಿಗಳು ಶಾಸಕರಿಗೆ, ಮಂತ್ರಿಗಳಿಗೆ ಎಷ್ಟು ಗೌರವ ಕೊಡುತ್ತಾರೆ ಎನ್ನುವುದನ್ನು ಸ್ವಲ್ಪ ಇದರಿಂದಲೇ ತಿಳಿದು ನೋಡಿ.

ಶ್ರೀ ಎಲ್.ಆರ್.ಶಿವರಾಮೇಗೌಡ: ಮಾನ್ಯ ಅಧ್ಯಕ್ಷರೇ, ಈಗ ನಾವು ಅಧಿಕಾರಿಗಳಿಗೆ ಫೋನ್ ಮಾಡುವುದು ನಮ್ಮ ಸ್ವಂತ ಕೆಲಸಕ್ಕಲ್ಲ. ನಾವು ಫೋನ್ ಮಾಡತಕ್ಕಂಥಾದ್ದು ಸಾರ್ವಜನಿಕರ ಕೆಲಸಕ್ಕಾಗಿ.

ಶ್ರೀ ಎನ್.ಜಿ.ನಾಯಕ್: ಈಗ ಆಫೀಸರುಗಳಿಗೆ ಕಾರು ಬೇಡವೆಂದು ಮಾನ್ಯ ಶಿವರಾಮೇಗೌಡರು ಹೇಳುತ್ತಿದ್ದಾರೆ. ಆಗ ಅದರಿಂದ ಬೇಕಾದಷ್ಟು ಉಳಿತಾಯವಾಗುತ್ತದೆ. ಅದರ ಬದಲು ನಾನು ಹೇಳುತ್ತಿದ್ದೇನೆ. ನಮ್ಮ ಶಾಸಕರಿಗೆ ಹೇಗೆ ಸಾಲ ಕೊಟ್ಟು ಕಾರನ್ನು ತೆಗೆದುಕೊಳ್ಳಿ ಎಂದು ಹೇಳುತ್ತಾರೋ, ಹಾಗೆಯೇ ಸಾಲಕೊಟ್ಟು ಕಾರನ್ನು ತೆಗೆದುಕೊಳ್ಳಿ ಎಂದು ಅವರಿಗೂ ಹೇಳಿರಿ. ಅನಂತರ, ಪೆಟ್ರೋಲ್‌ಗೆ ಇಂತಿಷ್ಟು ಎಂದು ನಿಗದಿ ಮಾಡಿ, ಆಗ ಅಧಿಕಾರಿಗಳಿಗೂ ಏನೆಂದು ಗೊತ್ತಾಗುತ್ತದೆ. ಅದರಲ್ಲೂ ಬೆಂಗಳೂರಿನಲ್ಲಿರತಕ್ಕಂಥ ಅಧಿಕಾರಿಗಳಿಗೆ ಇದನ್ನು ಕಡ್ಡಾಯವಾಗಿ ಮಾಡಿದರೆ ಬಹಳಷ್ಟು ಉಳಿತಾಯವಾಗುತ್ತದೆಂಬ ಸಲಹೆಯನ್ನು ನಾನು ಕೊಡುತ್ತಿದ್ದೇನೆ.

ಶ್ರೀ ಎಲ್.ಆರ್.ಶಿವರಾಮೇಗೌಡ: ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಒಬ್ಬ ಹಿರಿಯ ಅಧಿಕಾರಿಗೆ ಫೋನ್ ಮಾಡಿದೆ. ಮೂರು ಸಲ ಫೋನ್ ಮಾಡಿದೆ. ಒಂದು ಸಲ ಫೋನ್ ಮಾಡಿದಾಗ, ಅವರು ಚರ್ಚೆಯಲ್ಲಿದ್ದಾರೆಂದು ಹೇಳಿದರು. ಇನ್ನೊಂದು ಸಲ ಕೇಳಿದಾಗ, ಅವರು ಆಂಟಿ ಚೇಂಬರ್‌ನಲ್ಲಿದ್ದಾರೆಂದು ಹೇಳಿದರು. ಮತ್ತೊಂದು ಸಲ ಫೋನ್ ಮಾಡಿ ಕೇಳಿದಾಗ, ಯಾರ ಜೊತೆಯಲ್ಲಿಯೋ ಹೊರಗಡೆ ಹೋಗಿದ್ದಾರೆಂದು ಹೇಳಿದರು. ಅವರು ಈ ರೀತಿ ಉತ್ತರಗಳನ್ನು ಕೊಟ್ಟರೆ, ಅಧಿಕಾರಿಗಳಿಗೆ ಯಾವ ರೀತಿ ಛೀಮಾರಿ ಹಾಕಬೇಕೆಂಬುದೇ ನನಗೆ ಗೊತ್ತಿಲ್ಲ. ನಾವೆಲ್ಲರೂ ಬಹಳ ಕಷ್ಟಪಟ್ಟು , ಇವೊತ್ತು ಸಾರ್ವಜನಿಕರ ಸೇವೆ ಮಾಡಬೇಕೆಂದು ಬಂದಿರತಕ್ಕಂಥವರು. ಶೋಕಿಗೆ ನಾವು ಫೋನ್ ಮಾಡುವುದಿಲ್ಲ. ಯಾವ ಅಧಿಕಾರಿಗಳೂ ಸಹ ಯಾರ ಜೊತೆಗೂ ಡಿಸ್‌ಕಸ್ ಮಾಡುವುದಿಲ್ಲ. ಅವರೇ ನನಗೆ ಕೇಳುವ ಹಾಗೆ ಎಲ್ಲೋ ಹೋಗಿದ್ದಾರೆ. ಎಂದು ಹೇಳಿ ಎಂದು ತಮ್ಮ ಪಿ.ಎ.ಗಳಿಗೆ ನಿರ್ದೇಶನ ಕೊಡುತ್ತಾರೆ. ಆ ಪಿ.ಎ.ಗಳಿಗೆ ದೇವರು ಅದೇನು ಬುದ್ಧಿ ಕೊಟ್ಟಿದ್ದಾನೋ ? ಅವರನ್ನು ನಾವು ಹೆಚ್ಚಿಗೆ ಕೇಳುವ ಹಾಗಿಲ್ಲ, ಎಲ್ಲಾ ಮಾತುಗಳನ್ನು ಟೇಪ್

ಮಾಡಿ ಹೇಳಿದಂತೆ ಹೇಳುತ್ತಾರೆ. ಆದುದರಿಂದ, ನಾನು ಅಧಿಕಾರಿ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಏನೆಂದರೆ ನಾವು ಫೋನ್ ಮಾಡತಕ್ಕಂಥಾದ್ದು ನಮ್ಮ ಸ್ವಂತ ಕೆಲಸಕ್ಕಲ್ಲದೆ, ಸಾರ್ವಜನಿಕರ ಕೆಲಸಕ್ಕಾಗಿ ಎಂದು, ನೀವು ಈ ತರಹ ದುರಹಂಕಾರ ಪಡುವುದನ್ನು ಬಿಟ್ಟು, ರಾಜ್ಯದ ಜನರ ರೆವಿನ್ಯೂನಿಂದ ನೀವು ಇವೊತ್ತು ಗೌರ್ನ್‌ಮೆಂಟ್ ಸರ್ವೆಂಟ್‌ಗಳಾಗಿದ್ದಿರಿ. ನೀವು ಸರ್ಕಾರಿ ಜನರಾಗಿದ್ದು, ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಇಷ್ಟು ಉದಾಸೀನ ಮನೋಭಾವನೆ ತಾಳಬಾರದು ಎನ್ನತಕ್ಕಂಥಾದ್ದರ ಬಗ್ಗೆ ಸರ್ಕಾರದ ನಿರ್ದೇಶನ ಸಹ ಇದೆ. ಅಧಿಕಾರಿಗಳ ಹತ್ತಿರ ಸಾಮಾನ್ಯ ಮನುಷ್ಯರು ಯಾರಾದರೂ ಹೋದಾಗ ಅವನಿಗೆ ಮರ್ಯಾದೆಯನ್ನು ಕೊಡದಿದ್ದ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕ ಮಾತನ್ನು ನಮ್ಮ ಮುಖ್ಯಮಂತ್ರಿಗಳು ಹೇಳಿದರು. ಸನ್ಮಾನ್ಯ ದಿವಂಗತ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಅವರು 285ನೇ ನಿಯಮದ ಪ್ರಕಾರ ಸರಿಯಾಗಿ ಕೆಲಸ ಮಾಡದ ಅಧಿಕಾರಿಗಳನ್ನು ಮನೆಗೆ ಕಳುಹಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅದನ್ನು ನಾವು ನೋಡಿಲ್ಲ. ಅದರಿಂದಾಗಿ ಇವತ್ತು ಅಧಿಕಾರಿಗಳು ಕೊಟ್ಟಿರತಕ್ಕದ್ದನ್ನು ನಾವು ನೋಡುತ್ತಿದ್ದೇವೆ. ಇಂತಹ ಕೆಲವು ಅಧಿಕಾರಿಗಳಿಂದಾಗಿ ಉತ್ತಮ ಅಧಿಕಾರಿಗಳ ಹೆಸರಿಗೆ ಮಸಿಯನ್ನು ಬಳಿದಂತಾಗುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ಇವತ್ತು ಅಧಿಕಾರಿಗಳು ಬ್ಯಾಡ್ಜ್‌ಗಳನ್ನು ಹಾಕಬೇಕು. ನಾನು ಬಹಳಷ್ಟು ಐ.ಎ.ಎಸ್. ಅಧಿಕಾರಿಗಳನ್ನು ನೋಡುತ್ತಿದ್ದೇನೆ. ಕೆಲವರು ಬ್ಯಾಡ್ಜನ್ನು ಹಾಕಿಕೊಂಡು ಬರುತ್ತಾರೆ, ಮತ್ತೆ ಕೆಲವರು ಹಾಕಿಕೊಂಡು ಬರುವುದಿಲ್ಲ. ಸರ್ಕಾರ ಅದನ್ನು ಬಿಗಿ ಮಾಡಬೇಕು. ಅವರಲ್ಲಿ ಉದಾಸೀನ ಎಷ್ಟರ ಮಟ್ಟಿಗಿದೆ ಎಂದರೆ ಕೆಲವು ಹಿರಿಯ ಐ.ಎ.ಎಸ್.ಅಧಿಕಾರಿಗಳು ಬ್ಯಾಡ್ಜನ್ನು ಹಾಕುತ್ತಾರೆ, ಆದರೆ ಕೆಲವು ಕಿರಿಯ ಐ.ಎ.ಎಸ್.ಅಧಿಕಾರಿಗಳು ಬ್ಯಾಡ್ಜನ್ನು ಹಾಕುವುದಿಲ್ಲ. ಇದಕ್ಕೆ ಸರ್ಕಾರ ಕಡಿವಾಣ ಹಾಕಬೇಕು. ಎಲ್ಲಾ ಇಲಾಖೆಯವರು ಸಹ ಬ್ಯಾಡ್ಜನ್ನು ಹಾಕಬೇಕು. ಅರಣ್ಯ ಇಲಾಖೆಯವರಿಗೆ ಹಸಿರು ಬಣ್ಣದ್ದು, ಎಕ್ಸೈಸ್ ಇಲಾಖೆಯವರಿಗೆ ಕೆಂಪು ಬಣ್ಣದ್ದು, ಹಣಕಾಸು ಇಲಾಖೆಯವರಿಗೆ ಬಿಳೀ ಬಣ್ಣದ್ದು ಮತ್ತೆ ವಿದ್ಯಾ ಇಲಾಖೆಯವರಿಗೆ ನೀಲಿ ಬಣ್ಣದ ಬ್ಯಾಡ್ಜ್‌ಗಳನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಪೋಲೀಸ್ ಇಲಾಖೆಯವರಿಗೆ ಕಾಕಿ ಬಣ್ಣ ಇದ್ದೇ ಇದೆ. ಅವರಿಗೆ ಅದೇ ಬಣ್ಣದ ಬ್ಯಾಡ್ಜ್‌ಗಳನ್ನು ಕೊಟ್ಟರೆ ಅವರು ಎಲ್ಲಿ ತಿರುಗಾಡಿದರೂ ಸುತ್ತಾಡಿದರೂ ಗೊತ್ತಾಗುತ್ತದೆ. ಆದುದರಿಂದ ತಾವು ಕೇಂದ್ರ ಸರ್ಕಾರದಲ್ಲಿರುವ ಪದ್ಧತಿಯಂತೆ ಇಲ್ಲೂ ಕೂಡ ಎಲ್ಲರೂ ಬ್ಯಾಡ್ಜ್ ಹಾಕಿಕೊಳ್ಳುವ ಪದ್ಧತಿಯನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ.

ಇನ್ನು ಇವತ್ತು ವಿಧಾನ ಸೌಧದ ಪ್ರತಿ ಅಂಡರ್ ಸೆಕ್ರೆಟರಿಯ ಹತ್ತಿರ ಸಾವಿರಾರು ಕಡತಗಳು ಬಿದ್ದಿವೆ. ಇದು ರಾಜ್ಯದ ಪ್ರಾಪರ್ಟಿ, ಈ ರಾಜ್ಯ ಸರ್ಕಾರದ ಪ್ರತಿ ಇಲಾಖೆಯಲ್ಲಿ ಸಾರ್ವಜನಿಕರ ಹಕ್ಕುಗಳು, ಆ ಫೈಲ್‌ಗಳಲ್ಲಿದೆ, ಬಹಳ ಜನ ಅಧಿಕಾರಿಗಳು ಕಡತಗಳನ್ನು ಚೆನ್ನಾಗಿಟ್ಟುಕೊಂಡಿರುತ್ತಾರೆ. ಆದರೆ ಅನೇಕ ಕಡೆಗಳಲ್ಲಿ ಈ ಫೈಲುಗಳು ಕಸದ ರಾಶಿಯಲ್ಲಿ ಬಿದ್ದಹಾಗೆ ಬಿದ್ದಿವೆ. ಬಡವರ, ಜನಸಾಮಾನ್ಯರ ಹಕ್ಕುಗಳನ್ನು ಫೈಲ್‌ಗಳಲ್ಲಿ ಟ್ಯಾಗ್ ಹಾಕಿ ಗೌರವಯುತವಾಗಿ ಇಡಬೇಕೆಂಬುದರ ಬಗ್ಗೆ ಒಂದು ಕಡಿವಾಣವನ್ನು ಹಾಕಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನು ನಾನು ನಮ್ಮ ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ.

ಚೇರ್ಮನ್: ನೀವು ಬೇಗ ಮುಗಿಸಬೇಕು, ಬೇರೆಯವರ ಸಮಯವನ್ನು ತಾವು ತೆಗೆದುಕೊಳ್ಳುವುದು ಸರಿಯಲ್ಲ.

ಶ್ರೀ ಎಲ್.ಆರ್.ಶಿವರಾಮೇಗೌಡ: ನಾನು ಯಾವ ಬೇಡಿಕೆಗಳ ಮೇಲೂ ಮಾತನಾಡುವುದಿಲ್ಲ. ಇವತ್ತು ಒಬ್ಬ ಅಧಿಕಾರಿ ಚೆಕ್ ಪೋಸ್ಟ್‌ನಲ್ಲಿ ಒಂದು ಸಾವಿರ ರೂಪಾಯಿ ಲಂಚವನ್ನು ಕೇಳಿದಾಗ ಅವನನ್ನು ಹಿಡಿದು ಮನೆಗೆ ಕಳುಹಿಸಿರತಕ್ಕ ನಿದರ್ಶನ ಈ ಸರ್ಕಾರದಲ್ಲಿದೆ. ಆದರೆ ಲೋಕಾಯುಕ್ತದವರು ಕೆಲವು ಅಧಿಕಾರಿಗಳ ಮನೆಯಿಂದ 50 ಲಕ್ಷದಿಂದ 60ಲಕ್ಷದವರೆಗೆ ಹಣವನ್ನೂ ಮತ್ತು 4ರಿಂದ 9 ಕೆ.ಜಿ.ವರೆಗೆ ಬೆಳ್ಳಿಯ ಸಾಮಾನುಗಳನ್ನು ವಶಪಡಿಸಿಕೊಂಡರಲ್ಲ, ಅಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅವರು ಈಗ ಏನಾಗಿದ್ದಾರೆ ? ಅವರಿಗೆ ಬಡ್ತಿಯನ್ನು ಕೊಟ್ಟು ಮೇಲಕ್ಕೆ ತೆಗೆದುಕೊಂಡು ಹೋಗಿ ಕೂರಿಸಿದ್ದೀರಿ. ಇವತ್ತು ರಾಜ್ಯದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಒಳ್ಳೆಯ ಸ್ಥಾನಮಾನವನ್ನು ಕೊಟ್ಟಿಲ್ಲ. ಇದರ ಬಗ್ಗೆ ಸಹ ಸರ್ಕಾರ ಚಿಂತನೆ ಮಾಡಬೇಕು. ಅದರಲ್ಲಿಯೂ ಸಹ ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ಇಂಥ ಅಧಿಕಾರಿಗಳ ಮೇಲೆ ಬಹಳ ನಿಗಾ ಇಟ್ಟಿದ್ದಾರೆ. ಆದರೂ ಏಕೆ ಈ ರೀತಿಯಾಗುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ತಾವು ನಿಗಾ ವಹಿಸಬೇಕು. ಜನಸಾಮಾನ್ಯರಿಗಾಗಿ ಕೆಲಸ ಮಾಡತಕ್ಕವರಿಗೆ ಈ ರಾಜ್ಯದ ಅಭಿವೃದ್ಧಿಗೋಸ್ಕರ ಪ್ರಯತ್ನ ಪಡತಕ್ಕವರಿಗೆ ಒಳ್ಳೆಯ ಅವಕಾಶವನ್ನು ಕೊಡಿ, ಅವರಿಗೆ ಒಳ್ಳೆಯ ಜಾಗವನ್ನು ಕೊಡಿ, ಆದರೆ ಇಂದು ಅಂಥ ಅಧಿಕಾರಿಗಳಿಗೆ ಒಳ್ಳೆಯ ಜಾಗ ಸಿಗುತ್ತಿಲ್ಲ, ಅಂಥವರನ್ನು ಬೀದರ್, ಗುಲ್ಬರ್ಗಾ ಮುಂತಾದ ಕಡೆಗಳಿಗೆ ಹಾಕಿ ಅವರ ಮನಸ್ಸನ್ನು ನೋಯಿಸುತ್ತಿದ್ದೀರಿ. ಇವತ್ತು ಒಳ್ಳೊಳ್ಳೆಯ ಅಧಿಕಾರಿಗಳಿಗೆ ಈ ರೀತಿಯಾಗುತ್ತಿದೆ. ಇವತ್ತು ತಪ್ಪಿತಸ್ಥ ಅಧಿಕಾರಿಗಳೆಂದು ನಾವು ಯಾರಿಗೆ ಕರೆಯುತ್ತಿದ್ದೇವೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರೆ, ಇವತ್ತು ಸರ್ಕಾರಿ ಅಧಿಕಾರಿಗಳಿಗೆ ಮೆಡಿಕಲ್ ಫೀಸನ್ನು ಕೊಡುತ್ತಿದ್ದೇವೆ. ಅಂದರೆ ಇವತ್ತು ಇವರೆಲ್ಲರೂ ಕೂಡ ಮಡಿನೋವಾಗೆ ಹೋಗಿ ಆ ಬಿಲ್ಲನ್ನು ತಂದುಕೊಡತಕ್ಕದ್ದು ಇದೆ. ಇವತ್ತು ಮಲ್ಯ ಅಪೋಲೋ ಆಸ್ಪತ್ರೆಗೆ ಕೆಲವರು ಹೋಗಿ ಬಿಲ್ಲನ್ನು ತರುತ್ತಾರೆ. ನಮ್ಮ ಅಧಿಕಾರಿಗಳ ಆರೋಗ್ಯ ಚೆನ್ನಾಗಿರಬೇಕೆಂಬ ವಾದ ಸರಿಯಾದುದು. ಆದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮ ಅಧಿಕಾರಿಗಳು ಸರ್ಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿಂದಲೇ ಬಿಲ್ಲನ್ನು ತರಬೇಕೆಂಬ ವ್ಯವಸ್ಥೆ ಜಾರಿಗೆ ಬರುವಂತೆ ಆದೇಶವನ್ನು ಹೊರಡಿಸಬೇಕು. ಈಗಿನ 5 ಲಕ್ಷ ಜನ ಅಧಿಕಾರಿಗಳನ್ನು ಸಾಕುವುದಕ್ಕೆ 4 ಕೋಟಿ 95 ಲಕ್ಷ ಜನರು ರೆವಿನ್ಯೂವನ್ನು ಕೊಡುತ್ತಿದ್ದಾರೆ. ಇವತ್ತು 4 ಕೋಟಿ 95 ಲಕ್ಷ ಜನರು ರೆವಿನ್ಯೂವನ್ನು ಕೊಡಬೇಕಾದರೆ ಅವರು ಎಷ್ಟರಮಟ್ಟಿಗೆ ಕೆಲಸವನ್ನು ಮಾಡಬೇಕು, ಅಧಿಕಾರಿಗಳು ಎಷ್ಟರಮಟ್ಟಿಗೆ ಜನರಿಗೆ ಸ್ಪಂದಿಸಬೇಕು ಎನ್ನುವುದರ ಬಗ್ಗೆ ಅವರಿಗೆ ಸರಿಯಾದ ತಿಳುವಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ. ಈ ಹಿಂದೆ ಆಂಧ್ರ ಪ್ರದೇಶದಲ್ಲಿ ಇಡೀ ರಾಜ್ಯ ಸರ್ಕಾರೀ ನೌಕರರು ಧರಣಿ ಮಾಡಿದ್ದಕ್ಕೆ ಶ್ರೀಮಾನ್ ಎನ್.ಟಿ.ರಾಮರಾವ್‌ರವರು ಕೇರ್ ಮಾಡಲಿಲ್ಲ, ಅಂಥ ಒಂದು ಬಲವಾಗಿರತಕ್ಕ ಶಕ್ತಿ ಈಗಿನ ಸರ್ಕಾರಕ್ಕೆ ಬರದಿದ್ದರೆ ನೀವು ಅಧಿಕಾರಿಗಳ ಕೈಗೊಂಬೆಗಳಾಗುತ್ತೀರಿ, ಇದರ ಬಗ್ಗೆ ತಾವು ಎಚ್ಚರಿಕೆ ವಹಿಸಬೇಕು. ಕೊನೆಯದಾಗಿ, ಈಗಿನ ಲಾಟರಿ ವ್ಯವಸ್ಥೆಯನ್ನು ರದ್ದು ಮಾಡಬೇಕೆಂದು ಸರ್ಕಾರಕ್ಕೆ ನಾನು ಸಲಹೆ ಮಾಡುತ್ತೇನೆ. ನಾನು ಮೊನ್ನೆ ಈ ಬಗ್ಗೆ ಹೇಳಿದಾಗ ರದ್ದು ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಮಾನ್ಯ ಮಂಜುನಾಥ್‌ರವರು ಹೇಳಿದರು. ಇವತ್ತು ಹೊರರಾಜ್ಯದಲ್ಲಿ ನಮ್ಮ ಲಾಟರಿ ಟಿಕೆಟ್‌ಗಳನ್ನು ಮಾರುತ್ತಾರೆ. ನಾನು ವಿನಂತಿ

ಮಾಡುತ್ತೇನೆ. ಇಂದು ಯಾವ ಸರ್ಕಲ್‌ನಲ್ಲೂ ನಾವು ಹೋಗುವುದಕ್ಕೆ ಆಗುವುದಿಲ್ಲ. ಇವತ್ತು ಎಲ್ಲಾ ಸರ್ಕಲ್‌ಗಳಲ್ಲೂ ಸಹಿತ ಹೊರರಾಜ್ಯದ ಭೂತಾನ್ ಲಾಟರಿ ಅಂತ ಬರುತ್ತದೆ ಅದನ್ನು ಮಾರುತ್ತಿದ್ದಾರೆ. ಒಂದು ಟಿಕೇಟಿಗೆ 20 ರೂಪಾಯಿಯಂತೆ ಅದನ್ನು ಮಾರುತ್ತಿದಾರೆ. ಅದು ಯಾರಿಗೂ ಹೊಡೆಯಲಿಲ್ಲ. ಬಡ ಬೋರೇಗೌಡನಿಗೆ ಲಾಟರಿ ಹೊಡೆಯಲಿಲ್ಲ. ಕುದುರೆ ಜೂಜು ಆಡುವಂತಹವರಿಗೇ ಅದು ಹೊಡೆಯುತ್ತದೆ. ಇದರ ಬಗ್ಗೆ ತನಿಖೆಯಾಗಬೇಕು. ಈ ಲಾಟರಿಯನ್ನು ನಿಲ್ಲಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಛೇರ್ಮನ್: ದಯವಿಟ್ಟು ನೀವು ಕೋ-ಆಪರೇಷನ್ ಮಾಡಬೇಕು ಶಿವರಾಮೇಗೌಡರೇ,

ಶ್ರೀ ಎ.ನಾಗರಾಜು(ಮಾಲೂರು) :-ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ದಿವಸ ಈ ಸದನದ ಮುಂದೆ ಏನು ಬೇಡಿಕೆಗಳಿವೆ, ಅವುಗಳನ್ನೆಲ್ಲಾ ಸ್ವಾಗತಿಸುತ್ತಾ ನನ್ನ ಅನಿಸಿಕೆಗಳನ್ನು ಈ ಸಭೆಯ ಮುಖೇನ ಈ ರಾಜ್ಯದ ಜನತೆಗೆ ತಿಳಿಸಲು ಇಷ್ಟಪಡುತ್ತೇನೆ. ಈಗಿನ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ನಮ್ಮ ಭಾರತ ದೇಶದ ಆರ್ಥಿಕ ಪರಿಸ್ಥಿತಿಯೇ ಸಂದಿಗ್ಧವಾಗಿದೆ. ಹಿಂದೆ ಪ್ಲೇಟೋ ಅವರು ವಾಸ್ತವಾಂಶಗಳಿಂದ ದೂರ ಸರಿದು ಒಂದು ರಾಜಕೀಯ ವಿಚಾರ ಧಾರೆ ಕೊಟ್ಟರು. ಆ ಒಂದು ರಾಜಕೀಯ ವಿಚಾರ ಧಾರೆ ವಾಸ್ತವಾಂಶಗಳಿಂದ ದೂರವಿದ್ದರೂ ಸುಮಾರು 200-300 ವರ್ಷಗಳ ಕಾಲ ಅದು ಪ್ರಜ್ವಲಿತವಾಗಿತ್ತು. ಹಾಗೆಯೇ ಅವರ ಸಮಕಾಲೀನರಾದ ಕೌಟಿಲ್ಯ ಅವರೂ ಸಹ ಒಂದು ಆರ್ಥಿಕವಾಗಿ ಒಂದು ಭದ್ರ ಬುನಾದಿಯನ್ನು ಈ ದೇಶಕ್ಕೆ ಹಾಕಬೇಕು ಎನ್ನುವ ಹಿನ್ನೆಲೆಯಲ್ಲಿ ಅವರದೇ ಆದಂತಹ ಒಂದು ವಿಚಾರ ಧಾರೆಯನ್ನು ಈ ರಾಷ್ಟ್ರಕ್ಕೆ ಕೊಟ್ಟರು. ಅದು ವಾಸ್ತವಾಂಶದಿಂದ ಬಹಳ ದೂರವಾಗಿದ್ದರೂ ಬಹಳಷ್ಟು ಕಾಲ ಪ್ರಜ್ವಲಿತವಾಗಿತ್ತು. ಆ ಒಂದು ರಾಜಕೀಯ ವಿಚಾರ ಧಾರೆ ಮುಂದಿನ ಪೀಳಿಗೆ ವರೆಗೂ ಬೆಳೆದುಕೊಂಡು ಬರುವಂತಾಯಿತು. ಆದರೆ ಈಗಿನ ಪರಿಸ್ಥಿತಿ ಹಾಗೆ ಇಲ್ಲ. ಏಕೆಂದರೆ ಸನ್ಮಾನ್ಯ ಅಧ್ಯಕ್ಷಿಣಿಯವರೇ, ತಮಗೆ ಗೊತ್ತಿರಬಹುದು, ರಷ್ಯಾ ದೇಶದಲ್ಲಿ ಸುಮಾರು 75 ವರ್ಷಗಳ ಕಾಲ ಲೆನಿನ್ ಮತ್ತು ಮಾರ್ಕ್ಸ್‌ಸಿಸ್ಟ್ ವಿಚಾರಧಾರೆ ಇತ್ತು. ಆ ರಾಷ್ಟ್ರವನ್ನು ಗೊಡ್ಡದಾಗಿ ಕಟ್ಟಬೇಕು, ಆರ್ಥಿಕವಾದಂತಹ ಒಂದು ಭದ್ರವಾದ ಬುನಾದಿ ಹಾಕಿ ಅಲ್ಲಿನ ಜೀವನ ಮಟ್ಟವನ್ನು ಸುಧಾರಿಸಬೇಕೆಂಬುದು ಅವರ ವಿಚಾರ ಧಾರೆಯಾಗಿತ್ತು. ಆದರೆ 75 ವರ್ಷಗಳ ಮೇಲೆ ಅವರ ರಾಜಕೀಯ ವಿಚಾರ ಧಾರೆ ಮುರಿದು ಬಿತ್ತು. ಇದಕ್ಕೆ ಕಾರಣ ಅವರ ಪ್ರತಿಷ್ಠೆ ಹೆಸರಿನಲ್ಲಿ ಆರ್ಥಿಕವಾದಂತಹ ಒಂದು ಸಮತೋಲನವನ್ನು ಬದಿಗೆ ಒತ್ತಿ ವಿಜ್ಞಾನಕ್ಕೆ ಬಹಳಷ್ಟು ಖರ್ಚು ಮಾಡಿದರು. ವಿಜ್ಞಾನಕ್ಕೆ ಯಾವಾಗ ಅವರ ಒಂದು ಉತ್ಪಾದನೆ ಮತ್ತು ಆರ್ಥಿಕವಾದಂತಹ ಒಂದು ರಿಸೋರ್ಸ್‌ನ್ನು ಬ್ಯಾಲೆನ್ಸ್ ಮಾಡದೆ ಪ್ರತಿಷ್ಠೆಗೋಸ್ಕರ ವಿಜ್ಞಾನವನ್ನು ಬೆಳೆಸುವುದಕ್ಕೆ ಹೋದಾಗ ಆರ್ಥಿಕವಾಗಿ ಏರುಪೇರು ಆಯಿತು, ಆಗ ಅವರ ವಿಚಾರ ಧಾರೆ ಅಲ್ಲಿ ಪತನವಾಯಿತು. ಅದೇ ಒಂದು ಮಾರ್ಗದರ್ಶನದ ಮೇಲೆ ನಾವು ಇಲ್ಲಿ ಕರ್ನಾಟಕ ರಾಜ್ಯದಲ್ಲಿ ತೆಗೆದುಕೊಂಡರೆ ಏನು ಹಿಂದಿನ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಇಲ್ಲಿ ಡಿಸೆಂಟ್ರಲೈಸೇಷನ್ ಹೆಸರಿನಲ್ಲಿ ರಾಮರಾಜ್ಯ ಕಟ್ಟಬೇಕೆಂದು ಒಳ್ಳೆಯ ಒಂದು ಸದ್ಭಾವನೆಯಿಂದ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳ ಒಂದು ಕಾಯಿದೆಯನ್ನು ತಂದು 5 ವರ್ಷಗಳ ಕಾಲ ಅದರ ಆಡಳಿತವನ್ನು ಈ ರಾಜ್ಯಕ್ಕೆ ಕೊಟ್ಟರು. ಅದನ್ನು ಕೊಟ್ಟಮೇಲೆ ಯೋಜನೇತರ ವೆಚ್ಚ ಯಾವಾಗ ಜಾಸ್ತಿಯಾಯಿತು ಆಗ ಅದೂ ಕೂಡ ಇಲ್ಲಿ ಮುರಿದು ಬಿದ್ದು ಇಲ್ಲಿ ಸುಮಾರು 130-140 ಇದ್ದಂಥ ಅವರ ಪಕ್ಷದ ಶಾಸಕರ ಸಂಖ್ಯೆ ಕೇವಲ 24 ಕ್ಕೆ ಇಳಿಯಿತು. ಜನರ ನಿರೀಕ್ಷಣೆ ಏನಿತ್ತು ಎಂದರೆ ಅಭಿವೃದ್ಧಿ

ಆಗಬೇಕು, ಅಭಿವೃದ್ಧಿ ಮತ್ತು ಅಧಿಕಾರ ವಿಕೇಂದ್ರೀಕರಣವಾಗಿ ಬಡತನ ತೊಲಗಬೇಕೆಂಬುದು. ಆದರೆ ಅದು ಆಗಲಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಆಯವ್ಯಯ ಪಟ್ಟಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಖಾಂತರ ರಾಜ್ಯದ ಜನತೆಗೆ ಏನು ಕೊಟ್ಟಿದ್ದಾರೆ ಇದರಲ್ಲಿ ಹಲವಾರು ವಿಚಾರಗಳನ್ನು ನಾವು ಸೂಕ್ಷ್ಮವಾಗಿ ಗ್ರಹಿಸುವಾಗ ಇಲ್ಲಿ ಬೆಲೆ ಏರಿಕೆ ಆಗಿದೆಯೇ, ಪಾಪ್ಯುಲೇಷನ್ ಕಂಟ್ರೋಲ್ ಆಗಿದೆಯೇ ಎಂಬುದನ್ನು ನೋಡಬೇಕು. ಅಲ್ಲದೆ ಮಾನ್ಯ ಪ್ರಧಾನಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ ನಮ್ಮ ಆಡಳಿತ ವೆಚ್ಚದಲ್ಲಿ 10-20 ಪರ್ಸೆಂಟ್ ಖರ್ಚನ್ನು ಕಡಿಮೆ ಮಾಡಬೇಕು ಎಂದು, ಇದೆಲ್ಲಾ ಸಮತೋಲನವಾಗಿ ಪ್ರಗತಿ ಪಥದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು ನಮ್ಮನ್ನು ಕೊಂಡೊಯ್ಯುತ್ತಿದ್ದಾರೆಯೇ ಎನ್ನತಕ್ಕ ಮೂಲಭೂತ ಪ್ರಶ್ನೆ ನಮ್ಮ ಮುಂದಿದೆ. ನಮ್ಮ ಸಮೀಕ್ಷೆಯ ಪ್ರಕಾರ ಇಲ್ಲಿ ಬೆಲೆ ಏರಿಕೆಯಾಗಿದೆಯೆಂದು ಮಾನ್ಯ ವಿರೋಧಪಕ್ಷದವರು ಪತ್ರಿಕೆಗಳ ಮುಖಾಂತರ ಹೇಳಿದ್ದಾರೆ. ಮತ್ತು ಮಾನ್ಯ ಯಡಿಯೂರಪ್ಪನವರು ರಾತ್ರಿ ಹಗಲು ಇದೇ ಕೆಲಸ ಮಾಡಿಕೊಂಡು, ಬೆಲೆ ಏರಿಕೆ, ರೈತರ ಸಾಲ ಮನ್ನಾ ಆಗಲೇ ಬೇಕೆಂಬ ವಿಚಾರಧಾರೆಯನ್ನು ಮುಂದಿಟ್ಟುಕೊಂಡು ಅವರು ಏನೋ ಒಂದ ರೀತಿಯ ಕನಸನ್ನು ಕಾಣುತ್ತಾ ರಾಜ್ಯದಾದ್ಯಂತ ಓಡಾಡುತ್ತಿದ್ದಾರೆ. ತಾವು ಒಂದು ಅಂಶವನ್ನು ಇಲ್ಲಿ ಗಮನಿಸಬೇಕು. ಇನ್‌ಫ್ಲೇಷನ್ 1991 ರಲ್ಲಿ 16.7 ಪರ್ಸೆಂಟ್ ಇದ್ದರೆ 1992ರ ಫೆಬ್ರವರಿಯಲ್ಲಿ 11.8 ಪರ್ಸೆಂಟ್ ಇಳಿದಿದೆ. ಇದು ಆಲ್ ಇಂಡಿಯಾ ಆವರೇಜ್‌ಗೆ ಕಡಿಮೆಯಾಗಿದೆ. ಇದನ್ನು ಗಮನಿಸಿ ಈ ಬೆಲೆ ಏರಿಕೆಯನ್ನು ರಾಷ್ಟ್ರ ಮಟ್ಟದ ಬೆಲೆ ಏರಿಕೆಗೆ ಹೋಲಿಸಿದಾಗ ಅಷ್ಟೇನೂ ಹೆಚ್ಚಾಗಿಲ್ಲ. ಇಲ್ಲಿ ಸಮಂಜಸವಾಗಿ ಪಾಪ್ಯುಲೇಷನ್ ಕಂಟ್ರೋಲ್ ಆಗಿದೆಯೇ ಎಂಬುದು ಮೂಲಭೂತ ವಿಚಾರ. ತಮಗೆ ಗೊತ್ತಿರುವಂತೆ ನಾವು ಅನೇಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬಹುದು. ಅನೇಕ ನೀರಾವರಿ ಕಾಮಗಾರಿಗಳನ್ನು ತೀವ್ರವಾಗಿ ಪೂರ್ಣಗೊಳಿಸಬಹುದೆಂದು ಯೋಚನೆ ಮಾಡಬಹುದು, ಆದರೆ ಇನ್ನೊಂದು ಮುಖ ಎಂದರೆ ಪಾಪ್ಯುಲೇಷನ್ ಕಂಟ್ರೋಲ್ ಆಗದಿದ್ದರೆ ಈ ಯೋಜನೆಗಳೆಲ್ಲಾ ನೀರುಪಾಲಾಗುತ್ತವೆ. ಈ ದಿಸೆಯಲ್ಲಿ ಪಾಪ್ಯುಲೇಷನ್ ಕಂಟ್ರೋಲ್ ಆಗಿದೆ ಎಂಬುದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. 1981 ರಲ್ಲಿ ಜನಸಂಖ್ಯಾಬೆಳವಣಿಗೆ ರೇಟ್ 26.75 ಇದ್ದರೆ 1991ರಲ್ಲಿ20.91 ಆಗಿದೆ. ಇದರಲ್ಲೂ ಕೂಡ ಸರ್ಕಾರ ಕಡಿವಾಣವನ್ನು ಹಾಕಿದೆ. ಇದೇರೀತಿ ಇನ್‌ಫ್ಲೇಷನ್ ವಿಚಾರದಲ್ಲೂ ಹಿಡಿತವನ್ನು ಇಟ್ಟುಕೊಂಡಿದೆ. ಇಲ್ಲಿ ಏನು ಆಯವ್ಯಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದ್ದಾರೆ ಇದು ಆರ್ಥಿಕ ಪ್ರಗತಿಯ ದಾರಿಯಲ್ಲಿ ಹೋಗುತ್ತಿದೆ. ಆದ್ದರಿಂದ ಇದು ಸಮಂಜಸವಾಗಿದೆ ಎಂಬುದನ್ನು ಹೇಳಬಯಸುತ್ತೇನೆ. ಆರ್ಥಿಕವಾಗಿ ಸಮತೋಲನ ಬರಬೇಕಾದರೆ ನಮ್ಮ ಸ್ವಾವಲಂಬನೆ ಬಹಳ ಮುಖ್ಯ. ಭಾರತ ಸರ್ಕಾರದಿಂದ ನಮಗೆ ಏನು ಪಾಲು ಬರಬೇಕೋ ಅದನ್ನು ನಾವು ಗಳಿಸಿಕೊಂಡಿದ್ದೇವೆಯೇ? ಈ ರೀತಿ ಗಳಿಸುವುದರಲ್ಲಿ ಯಾರ್ಯಾರಮೇಲೆ ಎಷ್ಟೆಷ್ಟು ಕರ್ತವ್ಯ ಇದೆ ಎಂಬುದು ಇಲ್ಲಿರುವ ಮೂಲಭೂತವಾದ ಪ್ರಶ್ನೆ. ತಮಗೆ ಗೊತ್ತಿರುವಂತೆ ಗಾಡ್ಗಿಲ್ ಸೂತ್ರವನ್ನು ಕೇಂದ್ರದಲ್ಲಿ ಅಳವಡಿಸುತ್ತಿದ್ದಾರೆ. ಕೇಂದ್ರದ ಸಂಪನ್ಮೂಲಗಳನ್ನು ಯಾವ ಯಾವ ರಾಜ್ಯಕ್ಕೆ ಎಷ್ಟೆಷ್ಟು ಕೊಡಬೇಕೆಂಬ ಬಗ್ಗೆ ಅವರು ಒಂದು ಸೂತ್ರವನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ಸೂತ್ರಗಳ ಪ್ರಕಾರ ಕರ್ನಾಟಕ ರಾಜ್ಯಕ್ಕೆ ಬಹಳಷ್ಟು ಅನ್ಯಾಯವಾಗಿದೆ.ಇಲ್ಲಿ ಕೇಂದ್ರದಿಂದ ಬರತಕ್ಕಂಥ ಯೋಜನೇತರ ಒಂದು ಅನುದಾನ ಎಷ್ಟು ಇದೆ, ಅಷ್ಟು ನಮಗೆ ಜನಸಂಖ್ಯೆಯ ಆಧಾರದ ಮೇಲೆ ಅವಲಂಬಿಸಿದಾಗ ನಮಗಿಂತ ಹೆಚ್ಚಾಗಿ ತಮಿಳುನಾಡಿಗೆ ಬರುತ್ತಿದೆ. ಅದಕ್ಕಿಂತ ಹೆಚ್ಚಾಗಿ ಮಹಾರಾಷ್ಟ್ರಕ್ಕೆ

ಬರುತ್ತಿದೆ ಮತ್ತು ಕೇರಳಾಕ್ಕೂ ಸಹ 17.5 ಪರ್ಸೆಂಟ್ ಬರುತ್ತಿದೆ. ಆದರೆ ನಮಗೆ ಇಲ್ಲಿ ನಮ್ಮ ಪಾಲು ಬರಬೇಕು ಆ ಪಾಲು ಕೇಂದ್ರ ಸರ್ಕಾರದಿಂದ ನಮಗೆ ಬರುತ್ತಿರುವ ಯೋಜನೇತರ ವೆಚ್ಚದಲ್ಲಿ ಮತ್ತು ನೀರಾವರಿ ಕಾಮಗಾರಿಗಳು ಏನಿದೆ ಅದನ್ನು ತಮಿಳುನಾಡು ಮತ್ತು ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಅದೂ ಸಹ ನಮಗೆ ಬರುತ್ತಿಲ್ಲ. ಮತ್ತೆ ನಮ್ಮರಾಜ್ಯದವರೇ ಆದ ಮಾನ್ಯ ಜಾಫರ್ ಷರೀಫ್ ರವರು ರೈಲ್ವೆ ಖಾತೆಯನ್ನು ವಹಿಸಿಕೊಂಡಮೇಲೆ ಸ್ವಲ್ಪ ಇಲ್ಲಿ ರೈಲ್ವೆ ಮೊಬೈಲ್ಸ್ ಆಗಿದೆ. ಅದಕ್ಕೆ ಮೊದಲು ಬೆಂಗಳೂರು-ಮೈಸೂರು ಮಾರ್ಗ ಬ್ರಾಡ್‌ಗೇಜ್ ಆಗಿ ಕನ್‌ವರ್ಟ್ ಆಗಬೇಕಾದರೆ10 ವರ್ಷಗಳಿಂದಲೂ ಕೆಲಸ ಸರಿಯಾಗಿ ಆಗಿರಲಿಲ್ಲ. ಮತ್ತೆ ಇಲ್ಲಿ ರಾಷ್ಟ್ರೀಯ ಹೆದ್ದಾರಿ ಏನಿದೆ, ಅದು ಎಲ್ಲಿಯಾದರೂ ಒಂದು ಕಿಲೋಮೀಟರ್ ಹೆಚ್ಚಾಗಿ ಮಾಡಿದ್ದರೆ ನಮ್ಮ ಕರ್ನಾಟಕರಾಜ್ಯದಲ್ಲಿ ಹೊಸದಾಗಿ ಎಲ್ಲಿಯೂ ಮಾಡಿಲ್ಲ. ಇದೆಲ್ಲಾ ಅನ್ಯಾಯವಾಗುತ್ತಿರುವುದು ಎಲ್ಲಿಂದ ಎಂದರೆ ಈ ಒಂದು ಗಾಡ್ಗಿಲ್ ಸೂತ್ರದಪ್ರಕಾರ ನಮಗೆ ಸರಿಯಾದಂಥ ಪಾಲು ಕೇಂದ್ರದಿಂದ ಬರುತ್ತಿಲ್ಲ. ಈ ಪಾಲನ್ನು ಪಡೆದುಕೊಳ್ಳುವುದರಲ್ಲಿ ಯಾರ ಕರ್ತವ್ಯವಿದೆ. ಬರೇ ಮುಖ್ಯಮಂತ್ರಿಗಳದ್ದೇನಾ, ಅಥವಾ ಎಲ್ಲಾ ಸಂಸದೀಯ ಸದಸ್ಯರು ಏನು ಕೆಲಸ ಮಾಡುತ್ತಿದ್ದಾರೆ ಅವರದ್ದು ಮತ್ತು ಶಾಸಕರದ್ದು ಸಹ ಇದೆ ಎಂಬುದನ್ನು ಮೂಲಭೂತವಾಗಿ ನಾವು ಯೋಚನೆ ಮಾಡಬೇಕು. ಇದು ಬಹಳ ಇಕ್ಕಟ್ಟಿನ ಪರಿಸ್ಥಿತಿ ಇರುವುದರಿಂದ ನಾವೆಲ್ಲರೂ ಸೇರಿ ಈ ರಾಜ್ಯ ಸರ್ಕಾರ ಮತ್ತು ಶಾಸಕರು, ಮತ್ತು ಸಂಸತ್ ಸದಸ್ಯರು ಸರಿಯಾಗಿ ಒತ್ತಡವನ್ನು ತಂದು ಕೇಂದ್ರದಿಂದ ನಮ್ಮ ಪಾಲನ್ನು ನಾವು ಪಡೆದುಕೊಳ್ಳದಿದ್ದರೆ ನಿಜವಾಗಿಯೂ ನಮ್ಮಲ್ಲಿ ನಾಲ್ಕೂವರೆ ಕೋಟಿಯಿಂದ ಐದುಕೋಟಿವರೆಗೆ ಜನತೆ ಏನಿದ್ದಾರೆ ಅವರಿಗೆ ಅನ್ಯಾಯಮಾಡಿದಂತಾಗುತ್ತದೆ. ಈ ಒಂದು ದಿಸೆಯಲ್ಲಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಭಿನ್ನವಿಸಿಕೊಳ್ಳುತ್ತೇನೆ. ಏನೆಂದರೆ ದಯವಿಟ್ಟು ತಾವು ಸರಿಯಾದಂಥ ಒಂದು ಪ್ರೆಷರ್ ಅನ್ನು ಕೇಂದ್ರ ಸರ್ಕಾರದ ಮೇಲೆ ತರಬೇಕು. ಈಗ ಆರ್ಥಿಕವಾದಂಥ ಒಂದು ಅಸಮತೋಲನ ಒಂದು ಕಡೆಯಾದರೆ ಇನ್ನೊಂದು ಕಡೆ ಮೂಲಭೂತವಾಗಿ ಪ್ರಜಾಪ್ರಭುತ್ವಕ್ಕೆ ಪೆಟ್ಟು ಬರುವಂಥ ಯೋಜನೆಗಳು, ನಾವು ಬೆಳಿಗ್ಗೆಯಿಂದ ಇಲ್ಲಿ ಭಾಷಣವನ್ನು ಕೇಳುತ್ತಿದ್ದೇವೆ. ಅದೇನೆಂದರೆ ಶಾಸಕರು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಾರೆ ಎಂದು ಹೇಳುವುದು,. ಮತ್ತೆ ನಮ್ಮ ಬೆನ್ನುಹಿಂದೆ ಇನ್ನೊಬ್ಬರು, ಶಾಸಕರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳುವುದು. ಸಮಾಜದಲ್ಲಿ ಇದು ಈ ದೇಶಕ್ಕೆ , ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ನಡೆದುಕೊಂಡು ಬರುತ್ತಿದೆ. ಇಂತಹ ಒಂದು ಚಿಂತನೆಗಳು ಎಲ್ಲಿಯವರೆಗೆ ಎಡೆ ಮಾಡಿ ಕೊಟ್ಟಿದೆ ಎಂದರೆ ಭದ್ರವಾದ ಬುನಾದಿ ನಮ್ಮ ರಾಷ್ಟ್ರದ ಪ್ರಜಾಪ್ರಭುತ್ವಕ್ಕೆ ಏನಿದೆ, ಅದೇ ಅಲುಗಾಡುವಂಥ ಪರಿಸ್ಥಿತಿಗೆ ಬರುತ್ತಿದೆ. ಅದಕ್ಕೆ ಯಾರು ಕಾರಣಕರ್ತರು, ಇದನ್ನು ಸರಿಮಾಡುವಂಥ ಪ್ರವೃತ್ತಿ ಯಾರದ್ದು ಎನ್ನುವ ಮೂಲಭೂತವಾದ ಪ್ರಶ್ನೆ ನಮ್ಮ ಮುಂದಿರುವಂಥದ್ದು. ಬಹುಶ: ಈ ಮಧ್ಯೆ ಬರತಕ್ಕಂಥ ಚಲನ ಚಿತ್ರಗಳು ಏನಿವೆ, ಅವು ಕನ್ನಡದಲ್ಲಾಗಲಿ, ತೆಲುಗಿನಲ್ಲಿಯಾಗಲಿ, ಯಾವುದೇ ಭಾಷೆಯ ಚಿತ್ರಗಳಾಗಲಿ, ಎಲ್ಲಾ ಚಿತ್ರಗಳಿಗಿಂತ ದುಡ್ಡು ಮಾಡುತ್ತಿರುವುದು ಯಾವ ಚಿತ್ರಗಳೆಂದರೆ ರಾಜಕಾರಣಿಯನ್ನು ಬೈಯ್ಯುವ ಚಿತ್ರಗಳು ಇವತ್ತು ಬಾಕ್ಸ್ ಆಫೀಸಿನಲ್ಲಿ ಹಿಟ್ಟಾಗುತ್ತಿದೆ. ಇದನ್ನು ಸ್ವಲ್ಪ ಯೋಚನೆ ಮಾಡಬೇಕು. ಈ ರೀತಿ ಆದರೆ ರಾಜಕೀಯವಾಗಿ ಆಡಳಿತವನ್ನು ನಡೆಸತಕ್ಕಂಥ ರಾಜಕಾರಣಿ, ಅವನ ಒಂದು ನೈತಿಕವಾದಂಥ ಮನೋಭೂಮಿಕೆ ಅಲುಗಾಡಿ ಅವನು ಸಮಂಜಸವಾಗಿ ಮತ್ತು ಎಫೆಕ್ಟೀವ್ ಆಗಿ ಕೆಲಸ ಮಾಡಿ ಈ ದೇಶಕ್ಕೆ ಮತ್ತು ಈ ರಾಜ್ಯಕ್ಕೆ ಅವನು ಒಂದು ಉಡುಗೊರೆ ಕೊಡುವುದಕ್ಕೆ ಸಾಧ್ಯವೆ ಎನ್ನುವುದನ್ನು

ನಾವು ಯೋಚನೆ ಮಾಡಬೇಕಾಗುತ್ತದೆ. ಯಾವುದೋ ಒಬ್ಬ ಮುಖ್ಯಮಂತ್ರಿ, ಆ ಚಿತ್ರದಲ್ಲಿ ಮುಖ್ಯಮಂತ್ರಿಗಳ ಸ್ಥಾನವನ್ನು ಚಿತ್ರಿಸುತ್ತಾನೆ,ಶಾಸಕರ ಸ್ಥಾನವನ್ನು ಚಿತ್ರಿಸುತ್ತಾನೆ, ಅದನ್ನು ಎಷ್ಟು ಅಧೋಗತಿಗೆ ಎಳೆದುಕೊಂಡು ಹೋಗುತ್ತಾನೆಂದರೆ ಸಮಾಜದಲ್ಲಿ ಇವತ್ತು 90 ರಿಂದ 95 ಪರ್ಸೆಂಟ್ ಜನ ಕೇಕೆ ಹಾಕಿ ನಗುತ್ತಿದ್ದಾರೆ. ನಾನು ಇಂಡಿವಿಜಿಯಲ್ ಆಗಿ ಯಾರನ್ನು ಇಲ್ಲಿ ಬ್ಲೇಮ್ ಮಾಡುತ್ತಿಲ್ಲ. ಇದು ಕೊನೆಗೆ ಪ್ರಜಾಪ್ರಭುತ್ವಕ್ಕೆ ಧಕ್ಕೆತರುವಂತಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಭದ್ರವಾದ ಪಕ್ಷಾತೀತವಾದ ಪಕ್ಷ ನಮ್ಮ ರಾಷ್ಟ್ರದಲ್ಲಿ ಏನಿದೆ ಅದಕ್ಕೆ ಮಾರಕವಾಗುತ್ತದೆಂದು ನನಗನ್ನಿಸುತ್ತದೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಅಂಥ ಚಿತ್ರಗಳಿಗೆ ಕೇಂದ್ರ ಸರ್ಕಾರದ ಕಡೆಯಿಂದಾಗಲಿ, ರಾಜ್ಯ ಸರ್ಕಾರದ ಕಡೆಯಿಂದಾಗಲಿ ಕಡಿವಾಣವನ್ನು ಹಾಕಬೇಕಾಗುತ್ತದೆ. ವೈಯಕ್ತಿಕವಾಗಿ ರಾಜಕಾರಣಿಗಳು ತಪ್ಪು ಮಾಡಿದರೆ ಅವರ ಮೇಲೆ ಪಿಕ್ಚರ್ ತೆಗೆಯಲಿ. ನಾನು ತಪ್ಪು ಮಾಡಿದರೆ ನನ್ನ ಮೇಲೆ ಪಿಕ್ಚರ್ ತೆಗೆದು ಪ್ರದರ್ಶನ ಮಾಡಲಿ. ಆದರೆ ಇವತ್ತು ಪೋಸ್ಟ್ ಅಸಾಸಿನೇಷನ್ ಆಗುತ್ತಿದೆ. ಮುಖ್ಯಮಂತ್ರಿಗಳ,ಮಂತ್ರಿಗಳ, ಶಾಸಕರ ಹುದ್ದೆ ಏನಿದೆ ಇದು ಜನರಲ್ ಆಗಿ ಅಸಾಸಿನೇಷನ್ ಆದಾಗ ಯಾವ ಗುಣವಂತ, ಶೀಲವಂತ ಆ ಹುದ್ದೆಗೆ ಬಂದರೂ ನೈತಿಕತೆಯನ್ನು ಕಳೆದುಕೊಳ್ಳುತ್ತಾನೆ. ಇಂಥ ವ್ಯವಸ್ಥೆ ಈ ಸಮಾಜದಲ್ಲಿ ಬೆಳೆದು ಬರುತ್ತಿದೆ. ಈ ಬಗ್ಗೆ ಆಮೂಲಾಗ್ರವಾಗಿ ಚಿಂತನೆ ನಡೆಸಬೇಕು. ಅಂಥ ಪಿಕ್ಚರ್‌ಗಳಿಗೆ ಕಡಿವಾಣ ಹಾಕಿದರೆ ಮಾತ್ರ ಪ್ರಜಾಪ್ರಭುತ್ವ ಉಳಿಯುತ್ತದೆ. ಒಂದು ವಿಷಯವನ್ನು ಮಾತನಾಡಬೇಕೊ, ಮಾತನಾಡಬಾರದೋ ಗೊತ್ತಿಲ್ಲ. ಆದರೆ ನನ್ನ ಅನಿಸಿಕೆಯನ್ನು ವ್ಯಕ್ತಪಡಿಸಬೇಕೆಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಇವತ್ತು ಏನೂ ನ್ಯಾಯಾಂಗಗಳು, ನ್ಯಾಯಾಧೀಶರು ಇದ್ದಾರೆ ಅವರನ್ನು ನಾವು ಇಂಡಿವಿಜುಯಲ್ ಆಗಿ ತೆಗೆದುಕೊಳ್ಳೋಣ. ಇವೆಲ್ಲಾ ಸಮಾಜಕ್ಕೆ ಎಷ್ಟು ಮಾರಕ ವಾಗುತ್ತವೆಂದು ನಾವು ಯೋಚಿಸಬೇಕು. ಇವತ್ತು ವಾಸ್ತವಾಂಶಕ್ಕೆ ದೂರವಾಗಿ ಜಡ್ಜ್‌ಮೆಂಟ್‌ಗಳು ಬರುತ್ತಿವೆ. ಇದಕ್ಕೆ ಒಂದೇ ಒಂದು ಉದಾಹರಣೆ ಕೊಡುವುದಾದರೆ, ಕಾವೇರಿ ನೀರಿನ ವಿಚಾರದಲ್ಲಿ 200 ಟಿ.ಎಂ.ಸಿ. ನೀರನ್ನು ತಮಿಳ್ನಾಡಿಗೆ ಕೊಡಬೇಕೆಂದು ತೀರ್ಪು ಬಂದಿದೆ. ವಾಸ್ತವಾಂಶಕ್ಕೂ ಜಡ್ಜ್‌ಮೆಂಟ್‌ಗೂ ಎಷ್ಟು ಅಂತರ ಇದೆ ? ವಾಸ್ತವಾಂಶಕ್ಕೆ ವಿರುದ್ಧವಾಗಿ ಜಡ್ಜ್‌ಮೆಂಟ್ ಬಂದಾಗ ಜನ ದಂಗೆ ಏಳುತ್ತಾರೆ. ಇದರಿಂದ ಮೂಲಭೂತವಾಗಿ ಪ್ರಜಾಪ್ರಭುತ್ವದ ಸಿಸ್ಟಂಮ್‌ಗೆ ಪೆಟ್ಟಾಗುತ್ತದೆ. ಇಂಥ ಇನ್ನೂ ಅನೇಕ ಉದಾಹರಣೆಗಳಿವೆ. ಬೆಳಿಗ್ಗೆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳ ಬಗ್ಗೆ ಚಿಂತನೆ ಮಾಡಿದ್ದೆವು. ಬಹುಶ: ಈಗ ಜಿಲ್ಲಾ ಪರಿಷತ್ತುಗಳಿಗೆ ಮತ್ತು ಮಂಡಲ ಪಂಚಾಯಿತಿಗಳಿಗೆ ಆಡಳಿತಾಧಿಕಾರವನ್ನು ಹಾಕಿ ಅವರು ಚಾರ್ಜ್ ತೆಗೆದುಕೊಂಡು ಆಡಳಿತ ನಡೆಸುತ್ತಿದ್ದಾರೆ. ಇದು ಕಾನೂನು ಚೌಕಟ್ಟಿನಲ್ಲಿ ಬರಬಹುದು. I am not particularly quoting any case, I am generalising the issue. ನಾನು ಯಾವ ಒಬ್ಬ ನ್ಯಾಯಾಧೀಶರನ್ನು ದ್ವೇಷಿಸುತ್ತಿಲ್ಲ. ಜನರಲ್ ಆಗಿ ಏನು ಇವತ್ತು ತೀರ್ಪುಗಳು ಬರುತ್ತಿವೆ. ಅವೆಲ್ಲಾ ವಾಸ್ತವಾಂಶಕ್ಕೆ ದೂರ ಇವೆ. ಯಾವಾಗ ದೂರವಾಗುತ್ತವೋ ಆಗ ಈ ಸಿಸ್ಟಂ ಬದಲಾವಣೆಯಾಗಿ ಬೇರೆ ಫೋರ್ಸ್ ಆಡಳಿತ ಮಾಡಬೇಕೆಂಬ ಪರಿಸ್ಥಿತಿ ಉದ್ಭವಿಸುತ್ತದೆ. ಈ ದಿಸೆಯಲ್ಲಿ ಯಾವ ಒಂದು ನ್ಯಾಯಾಲಯಗಳಿಂದ ತೀರ್ಪುಗಳು ಬರುತ್ತಿವೆ ಮತ್ತು ರಾಜಕಾರಣಿಗಳ ಮೇಲೆ ಚಿತ್ರಗಳು ಬರುತ್ತಿವೆ, ಇವೆಲ್ಲಕ್ಕೂ ಕಡಿವಾಣ ಹಾಕದಿದ್ದರೆ ರಷ್ಯಾದಂತೆ ಹಿಂಸಾಚಾರಗಳಿಗೆ ಸಹ ಈ ದೇಶ ಹೋಗುತ್ತದೆಂದು ನನ್ನ ಅನಿಸಿಕೆ. ಈಗ ಹಲವಾರು ಕಾರ್ಯಕ್ರಮಗಳನ್ನು ಮತ್ತು ಹಲವಾರು ಯೋಜನೆಗಳನ್ನು ಈ ಆಯವ್ಯಯದಲ್ಲಿ ಜನತೆಗೆ ಕೊಟ್ಟಿದ್ದಾರೆ. ಈ ದಿಸೆಯಲ್ಲಿ ನನ್ನ

ಪ್ರಾಮಾಣಿಕ ಅನಿಸಿಕೆ ಏನೆಂದರೆ, ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್ ಆಗಿದೆ, ಮತ್ತು ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಸಹ ಆಗಿದೆ. ಆದರೆ ನಾವು ಏನು ಡ್ರೈ ಏರಿಯಾದಲ್ಲಿ ವಾಸ ಮಾಡುತ್ತಿದ್ದೇವೆ, ನಾವೆಲ್ಲಾ ಮುಂದುವರೆದಿದ್ದೇವೆಂದು ಬೇರೆಯವರಿಗೆ ಹೇಗೆ ಅನ್ನಿಸಿದೆಯೋ ಗೊತ್ತಿಲ್ಲ. ಈಗ ಡ್ರೈ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಇಲ್ಲ. ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಏನು ಮಾಡಿದ್ದಾರೆ ಅದನ್ನು ತೆಗೆದು ಡ್ರೈ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಮಾಡಿದರೆ ತುಮಕೂರು, ಬೆಂಗಳೂರು ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ. ಬಳ್ಳಾರಿಯನ್ನು ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡಿಗೆ ಸೇರಿಸಿಕೊಳ್ಳಿ. ಮಂಡ್ಯ, ಮೈಸೂರು ಜಿಲ್ಲೆಗಳಿಗೆ ಕಾವೇರಿಯಿಂದ ಅನುಕೂಲವಾಗಿದೆ. ಆದ್ದರಿಂದ ಕೂಡಲೇ ಡ್ರೈ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ರಚನೆ ಮಾಡಬೇಕು.

Dr.N.B.Nanjappa:- It is a good suggestion but, you say rain shadow area; That is better:

ಶ್ರೀ ಎಂ.ನಾಗರಾಜು:- ಎಲ್ಲೆಲ್ಲಿ ಮಳೆ 40 ಇಂಚಿಗಿಂತ ಕಡಿಮೆಯಾಗುತ್ತದೆ ದಯವಿಟ್ಟು ಅದನ್ನೆಲ್ಲಾ ಸೇರಿಸಿ ಒಂದು ಡ್ರೈ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಮಾಡಿ. ಡ್ರೈ ಲ್ಯಾಂಡ್ ಅಲ್ಲ, ಡ್ರೈ ಏರಿಯಾ ಡೆವಲಪ್‌ಮೆಂಟ್ ಮಾಡಿ ಎಂದು ನಾನು ಸರ್ಕಾರದ ಮೇಲೆ ಒತ್ತಡವನ್ನು ತರುತ್ತಿದ್ದೇನೆ. ಮತ್ತೆ ಅನೇಕ ಆರ್ಥಿಕ ಮಿತವ್ಯಯ ದೃಷ್ಟಿಯಲ್ಲಿ ಅನೇಕ ಹುದ್ದೆಗಳನ್ನು ಇವತ್ತು ರದ್ದುಮಾಡಲಾಗುವುದೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಬಹಳ ಒಳ್ಳೆಯ ನಿರ್ಣಯವನ್ನು ಆಡಳಿತಾತ್ಮಕ ದೃಷ್ಟಿಯಿಂದ ಸರ್ಕಾರದವರು ತೆಗೆದುಕೊಂಡಿದ್ದಾರೆ. ಈ ದಿಸೆಯಲ್ಲಿ ಯೋಚನೆ ಮಾಡಿದರೆ ಡೆವಲೆಪ್‌ಮೆಂಟ್ ಕಮಿಷನರ್ ಪೋಸ್ಟ್ ರದ್ದಾಗಲಿ. ಅಸಿಸ್ಟೆಂಟ್ ಕಮಿಷನರ್ ಪೋಸ್ಟ್ ಏನಿದೆ ಇದು ರದ್ದಾದರೆ ಆಡಳಿತಾತ್ಮಕವಾಗಿ ಬಹಳ ತೊಂದರೆಯಾಗುತ್ತದೆ. ಏಕೆಂದರೆ ಒಬ್ಬ ಜಿಲ್ಲಾಧಿಕಾರಿ ಸುಮಾರು 10 ರಿಂದ 12 ತಾಲ್ಲೂಕುಗಳ ಆಡಳಿತ ನೋಡಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಮತ್ತೆ ಜಿಲ್ಲಾಧಿಕಾರಿ ಯಾವಾಗಲೂ ಸುಮಾರು ತಿಂಗಳಲ್ಲಿ 10 ರಿಂದ 15 ದಿನಗಳು ಪ್ರವಾಸ ಹೋಗುವಾಗ ಜನತೆ ಜಿಲ್ಲಾಧಿಕಾರಿಗಳನ್ನು ಅಷ್ಟೊಂದು ಸುಲಭವಾಗಿ ಸಂದರ್ಶನ ಮಾಡುವುದಕ್ಕಾಗುವುದಿಲ್ಲ. ಆ ದಿಸೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಪೋಸ್ಟ್ ಏನಿದೆ ಅದನ್ನು ಉಳಿಸಿಕೊಂಡು ರದ್ದು ಮಾಡುವಂಥ ಪೋಸ್ಟ್‌ಗಳು ಬೇಕಾದಷ್ಟಿವೆ, ಅದನ್ನು ರದ್ದು ಮಾಡಿ. ಮುನಿಸಿಪಲ್ ಡೈರೆಕ್ಟರೇಟ್ ರದ್ದುಮಾಡಿ. ಅದು ಬೇಕಾಗಿಲ್ಲ. ಅದು ಹಿಂದಿನ ಸರ್ಕಾರದ ಒಂದು ಪ್ರಸಾದ. ಅದನ್ನು ಪೂರ್ತಿ ರದ್ದು ಮಾಡಿ. ಮತ್ತೆ ಜಿಲ್ಲಾ ಪರಿಷತ್ತು ಏನಿದೆ, ಅದು ಸರ್ಕಾರ ಮತ್ತು ತಾಲ್ಲೂಕು ಪಂಚಾಯಿತಿ ಸಮಿತಿ ಮಧ್ಯೆ ಬೇಕಾಗಿಲ್ಲ. ಆದ್ದರಿಂದ ಕಂಪ್ಲೀಟ್ ಆಗಿ ಜಿಲ್ಲಾ ಪರಿಷತ್ತನ್ನು ತೆಗೆದು ಹಾಕಿ. ಮಿತವ್ಯಯ ದೃಷ್ಟಿಯಿಂದ ತೆಗೆದು ಹಾಕಿ. ಇಲ್ಲಿ ರಾಜ್ಯ ಸರ್ಕಾರ ಏನು ಮಾಡುತ್ತದೋ ಅದನ್ನೇ ಪೋಸ್ಟ್ ಆಫೀಸ್‌ಗಿಂತ ಕಡೆಯಾಗಿ ಇದೇ ದುಡ್ಡನ್ನು ಅವರು ಮಂಡಲ ಪಂಚಾಯಿತಿಗೆ ಕಳುಹಿಸುತ್ತಾರೆ. ಜಿಲ್ಲಾ ಪರಿಷತ್ತು ಏತಕ್ಕೆ ಬೇಕು ? ಮುನಿಸಿಪಲ್ ಡೈರೆಕ್ಟರೇಟ್, ಜಿಲ್ಲಾ ಪರಿಷತ್ತು ಇನ್ನೂ ಅನೇಕ ಬೇಡವಾದ ಹುದ್ದೆಗಳನ್ನು ತೆಗೆದುಹಾಕಬೇಕು. ಅಸಿಸ್ಟೆಂಟ್ ಕಮಿಷನರ್ ಪೋಸ್ಟ್ ಜನತೆಯ ಹಿತದೃಷ್ಟಿಯಿಂದ ಉಳಿಸಬೇಕು ಎಂದು ನನ್ನ ಅನಿಸಿಕೆ. ಈ ದಿಸೆಯಲ್ಲಿ ಯೋಚನೆ ಮಾಡಬೇಕೆಂದು ಹೇಳುತ್ತಾ ಈ ಒಂದು ಆಯವ್ಯಯ ಮತ್ತು ಬೇಡಿಕೆಗಳನ್ನು ತಾತ್ವಿಕವಾಗಿ ನಾನು ಸ್ವಾಗತಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

+ ಶ್ರೀಮತಿ ರೇಣುಕಾ ರಾಜೇಂದ್ರನ್ (ಚಿಕ್ಕಬಳ್ಳಾಪುರ) :-ಸನ್ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಬೇಡಿಕೆಗಳು ಈ ಸದನದ ಮುಂದೆ ಏನಿವೆ ಅವುಗಳ ಬಗ್ಗೆ ನನ್ನ ಬೆಂಬಲ ಸೂಚಿಸಿ ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಆಗ ಆಡಳಿತ ಸುಧಾರಣೆ ಬಗ್ಗೆ ಸಾಕಷ್ಟು ಸೂತ್ರಗಳನ್ನು ನಿಯಮಗಳನ್ನು ಹಾಕಿದ್ದಾರೆ. ಸಂಪುಟ ವ್ಯವಹಾರಗಳ ಇಲಾಖೆ ಈ ಸೂತ್ರಗಳನ್ನು ಹಾಕಿದೆ. ಈ ಸೂತ್ರಗಳನ್ನು ಜಾರಿಗೆ ತರುವಲ್ಲಿ ಆಡಳಿತ ಸುಧಾರಣೆ ವ್ಯವಸ್ಥೆಯನ್ನು ಜಾರಿಗೆ ತರುವ ಇಲಾಖೆ ಕೂಡ ಅದೇ ಆಗಿರುವುದರಿಂದ ಯಾವುದೇ ಒಂದು ಸರ್ಕಾರದ ಅಳಿವು ಉಳಿವು ಮತ್ತು ಅದರ ಖ್ಯಾತಿ ಅದೇ ಇಲಾಖೆ ಮೇಲೆ ಅವಲಂಬಿತವಾಗಿದೆ ಎಂಬ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಸರ್ಕಾರ ಎಷ್ಟೇ ಕಾರ್ಯಕ್ರಮಗಳನ್ನು, ಎಷ್ಟೇ ಕಾನೂನುಗಳನ್ನು, ಎಷ್ಟೇ ನಿಯಮಗಳನ್ನು ಹಾಕಿದರೂ ಕೂಡಾ ಇಂಪ್ಲಿಮೆಂಟ್ ಮಾಡತಕ್ಕ ಏಜೆನ್ಸಿ ಅದೇ ಆಗಿರುವುದರಿಂದ ಕಾಲಕಾಲಕ್ಕೆ ಆ ಒಂದು ಸಂಪುಟ ವ್ಯವಹಾರಗಳ ಇಲಾಖೆ ವತಿಯಿಂದ ಇಂಪ್ಲಿಮೆಂಟೇಷನ್ ಪಾಯಿಂಟ್ ಪ್ರೋಗ್ರಾಮ್‌ಗಳನ್ನು ಕಾಲಕಾಲಕ್ಕೆ ಅನುಸರಿಸಿ ಮಾಡಿದರೆ ಆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೇ ವಿನಃ ಬರೀ ಸೂತ್ರಗಳನ್ನು ಹಾಕುವುದು, ನಿಯಮಾವಳಿಗಳನ್ನು ಈ ಸದನದಲ್ಲಿ ಓದುವುದು ಇಷ್ಟೇ ಆದರೆ ಪರಿಣಾಮಕಾರಿಯಾದ ಒಂದು ಫಲಿತಾಂಶ ನಮಗೆ ಸಿಗುವುದಿಲ್ಲ ಎನ್ನುವ ಮಾತನ್ನು ನಾನು ಒತ್ತಾಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಈ ಸಚಿವ ಸಂಪುಟ ಇಲಾಖೆಗಳಿಗೆ ಸಂಬಂಧಪಟ್ಟಹಾಗೆ ಪರಿಶಿಷ್ಟ ಜಾತಿ ಹಾಗೂ ವರ್ಗದವರಿಗೆ ಆಗಿರತಕ್ಕ ಹಿಂದಿನ ಒಂದು ನ್ಯಾಯ, ಅನ್ಯಾಯದ ಬಗ್ಗೆ ಒಂದು ರೆವ್ಯೂ ಎಂದು ಏನು ಹೇಳುತ್ತಿದ್ದೇವೆಯೋ ಅದನ್ನು ಆ ಇಲಾಖೆ ಮಾಡಬೇಕಾಗುತ್ತದೆ. ಮತ್ತು 1989ನೇ ಇಸವಿಯಲ್ಲಿ ಕೇಂದ್ರದಲ್ಲಿ ಆಗಿನ ದಿವಂಗತ ರಾಜೀವ ಗಾಂಧಿಯವರು ವಿಶೇಷ ನೇಮಕಾತಿಗಳನ್ನು ಅನೇಕ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಸಂಬಂಧಪಟ್ಟ ಹಾಗೆ ಮಾಡಬೇಕು, ಈ ಜನಕ್ಕೆ ಅನ್ಯಾಯವಾಗಿದೆ ಆದ್ದರಿಂದ ಅದಕ್ಕೆ ಬ್ಯಾಕ್‌ಲಾಗ್ ತುಂಬಬೇಕಾದರೆ ಅದನ್ನು ನಾವು ಮಾಡಬೇಕೆಂದು ಹೇಳಿ ಜಾರಿಗೆ ತಂದರು. ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಅನೇಕ ಕಾರ್ಖಾನೆಗಳಲ್ಲಿ ಮತ್ತು ಇಲಾಖೆಗಳಲ್ಲಿ ಅದನ್ನು ಕಾರ್ಯಗತ ಮಾಡಿದರು. ಆದರೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಅದನ್ನು ಎಷ್ಟರ ಮಟ್ಟಿಗೆ ಇಂಪ್ಲಿಮೆಂಟ್ ಮಾಡಿದ್ದಾರೆ ಎನ್ನುವ ಬಗ್ಗೆ ಅವಲೋಕನವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದು ಎರಡೂವರೆ ವರ್ಷಗಳು ಆದವು. ಯಾವುದೇ ಇಲಾಖೆಯಲ್ಲಿ ವಿಶೇಷ ನೇಮಕಾತಿಯನ್ನು ಪರಿಶಿಷ್ಟ ಜಾತಿಯವರಿಗೆ ಮಾಡಿದ್ದು ನಾನು ನೋಡಿಲ್ಲ. ಅದೂ ಅಲ್ಲದೆ ಅವರಿಗೆ ಕೊಡಬೇಕಾದ ಸೇವಾ ಹಿರಿತನವಾಗಲಿ ಅಥವಾ ಬಡ್ತಿಯಾಗಲಿ :ಕ್ಲಾಸ್-1, ಕ್ಲಾಸ್-2 ಮತ್ತು ಕ್ಲಾಸ್-3 ಪೋಸ್ಟ್‌ಗಳಲ್ಲಿ ಅವರಿಗೆ ದಕ್ಕಬೇಕಾದ ಸೌಕರ್ಯ ಏನು ಇದೆ ಅದು ಸಿಕ್ಕಿಲ್ಲ ಎನ್ನತಕ್ಕ ಖೇದ ನಮ್ಮ ಜನಾಂಗದ ನೌಕರರಲ್ಲಿ ಬಂದು ನಮ್ಮನ್ನು ಭೇಟಿ ಆದಾಗ ಹೇಳುವುದನ್ನು ಕೇಳಿದಾಗ ನಮಗೆ ಜವಾಬು ಕೊಡುವುದಕ್ಕೆ ಬಾಯಿ ಬರುವುದಿಲ್ಲ. ಅಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಟ್ಟು ಈ ಸಂದರ್ಭದಲ್ಲಿ ನಾನು ಹೇಳಿದ ಅಂಶಗಳ ಬಗ್ಗೆ ಅವಲೋಕನ ಮಾಡಿ ಅದರ ಸುಧಾರಣೆಗೆ ಕ್ರಮ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕೂಡಾ ಇದೇ ವಿಚಾರದಲ್ಲಿ ಕರಿಯಣ್ಣನವರು ಹಾಗೂ ಮೋಟಮ್ಮನವರು

ಹಾಕಿದ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಸಂಪುಟದ ಅನುಮತಿ ರಚನೆ ಮಾಡಿದ್ದೇವೆ, ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಸಿಗಬೇಕಾದ ಹುದ್ದೆಗಳ ಬಗ್ಗೆ ಆ ಸಮಿತಿ ಮುಖಾಂತರ ರೆವ್ಯೂ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಆ ಸಮಿತಿ ಎಷ್ಟು ಬಾರಿ ಮೀಟಿಂಗ್ ಸೇರಿದೆ ಎಂಬ ಪ್ರಶ್ನೆಗೆ, ಈವರೆಗೆ ಮೀಟಿಂಗ್ ಮಾಡಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಇದು ಏನನ್ನು ತೋರಿಸುತ್ತದೆ ಎಂದರೆ ಎಷ್ಟರಮಟ್ಟಿಗೆ ಈ ಸರ್ಕಾರಕ್ಕೆ ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಬಗ್ಗೆ ಕಾಳಜಿ ಇದೆ ಎಂಬುದನ್ನು ತೋರಿಸುತ್ತದೆ. ಇನ್ನೂ ಮುಂದೆಯಾದರೂ ಅದಕ್ಕೆ ಎಡೆಮಾಡಿಕೊಡದ ಹಾಗೆ ಈ ಕೆಲಸವನ್ನು ಅತಿಶೀಘ್ರವಾಗಿ ಮಾಡುತ್ತಾರೆಂಬ ನಂಬಿಕೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮತ್ತು ವಿವಿಧ ಇಲಾಖೆಗಳಲ್ಲಿ ಏನು ಕ್ಲಾಸ್-1, ಕ್ಲಾಸ್-2, ಕ್ಲಾಸ್-3 ಹುದ್ದೆಗಳಲ್ಲಿ ಬ್ಯಾಕ್‌ಲಾಗ್ ಇದೆ. ಅದನ್ನು ಶೀಘ್ರವಾಗಿ ತ್ವರಿತವಾಗಿ ತುಂಬುವುದಕ್ಕೆ ಕ್ರಮ ಕೈಗೊಳ್ಳುತ್ತೀರೆನ್ನುವ ನಂಬಿಕೆಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಹಿಂದಿನ ವರ್ಷ ತಮಗೆ ಗೊತ್ತಿರುವ ಹಾಗೆ ಡಾ. ಅಂಬೇಡ್ಕರ್ ಅವರ ಜನ್ಮಶತಾಬ್ಧಿ ವರ್ಷವನ್ನು ಮಾಡಿದಾಗ ಅದರ ಅಂಗವಾಗಿ ಗ್ರಾಮಾಂತರ ಪ್ರದೇಶದಲ್ಲಿ ಇರುವ ಜನಸಾಮಾನ್ಯರಿಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವವರಿಗೆ ಸೈಟುಗಳನ್ನು ಕೊಟ್ಟಿದ್ದೇವೆ, ಮನೆಗಳನ್ನು ಕೊಟ್ಟಿದ್ದೇವೆ. ಇವತ್ತು ಅವರಿಗೆ ಅಷ್ಟು ಕೊಟ್ಟರೆ ಸಾಲದು. ಈ ಒಂದು ಜನಾಂಗದಲ್ಲಿ ಹುಟ್ಟಿ ಬೆಳೆದು ಬಂದು ವಿದ್ಯಾವಂತರಾಗಿ ಬಂದು ನೌಕರರಾಗಿ ಸೇವೆ ಸಲ್ಲಿಸಲು ಬಂದಾಗಲೂ ಸಹಾ ಇತರ ಜನಾಂಗದವರು ಏನು ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಒಂದು ರೀತಿಯಲ್ಲಿ ಅನ್‌ಟಚಬಲಿಟಿಯಾದರೆ ಈ ನೌಕರ ವೃಂದದಲ್ಲಿ ಕೂಡಾ ಒಂದು ರೀತಿಯ ಅನ್‌ಟಚಬಲಿಟಿ ಇದೆ ಎಂದು ನಾನು ಹೇಳಬಲ್ಲೆ. ಇದಕ್ಕೆ ಉದಾಹರಣೆಯನ್ನು ಕೊಡುವುದಾದರೆ, ಸಾಮಾನ್ಯವಾಗಿ ಅವರಿಗೆ ಪ್ರಮೋಷನ್ ಕೊಡತಕ್ಕ ಸಂದರ್ಭದಲ್ಲಿ ಸರ್ವೀಸ್ ರೆಕಾರ್ಡ್ಸ್‌ನ್ನು ಸ್ಪಾಯಿಲ್ ಮಾಡುವುದು ಅಥವಾ ಸರ್ವೀಸ್ ರಿಜಿಸ್ಟರನ್ನು ಕಳುಹಿಸುವುದನ್ನು ಡಿಲೇ ಮಾಡುವುದು ಉಂಟು. ಜೊತೆಗೆ ಇಲ್ಲದ ಕಾರಣಗಳನ್ನು ಕಂಡುಹಿಡಿಯುವುದುಂಟು. ಇಂತಹ ಅನೇಕ ಪ್ರಕರಣಗಳನ್ನು ನಾವು ಎಲ್ಲಾ ಇಲಾಖೆಗಳಲ್ಲಿ ಕಾಬಹುದು. ಆದರೆ ಒಂದು ಪ್ರಶ್ನೆಯನ್ನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳುತ್ತೇನೆ, ಸರ್ಕಾರದ ಒಂದು ಕಾರ್ಯಕ್ರಮವನ್ನು ಜಾರಿಗೆ ತರುವಲ್ಲಿ ಯಾವುದೇ ಅಧಿಕಾರಿ ನಿರ್ಲಕ್ಷ್ಯ ತೋರಿಸಿದ್ದೇ ಆದರೆ ಮತ್ತು ಸರ್ಕಾರ ಜಾರಿಗೆ ಕೊಡುವ ನೀತಿ ನಿಯಮಗಳನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲಿ ಶಿಕ್ಷೆಯನ್ನು ಕೊಡುತ್ತಾರೆ. ನಾನು ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅಧಿಕಾರಿಗಳು ಮತ್ತು ನೌಕರರು ಯಾರಿದ್ದಾರೆ ಅವರುಗಳ ಮೇಲೆ ಆಗಿರತಕ್ಕ ಅನ್ಯಾಯದ ಬಗ್ಗೆ ಮೇಲಧಿಕಾರಿಗಳಿಗೆ ಅಂದರೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಏನಿದ್ದಾರೆ ಆ ಮಟ್ಟದ ಅಧಿಕಾರಿಗಳಿಗೆ ಎಷ್ಟರಮಟ್ಟಿಗೆ ಶಿಕ್ಷೆಯನ್ನು ಕೊಟ್ಟಿದ್ದಾರೆ ಎನ್ನತಕ್ಕ ಅಂಕಿಅಂಶಗಳು ಏನಾದರೂ ಇದ್ದ ಪಕ್ಷದಲ್ಲಿ ಅವರು ಉತ್ತರ ಕೊಡುವ ಸಂದರ್ಭದಲ್ಲಿ ಅದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ನಿಟ್ಟಿನಲ್ಲಿ ವೈಯಕ್ತಿಕವಾಗಿ ಅದನ್ನು ಗಮನಕ್ಕೆ ತರುವುದಕ್ಕೆ ಆಗದಿದ್ದರೆ ಒಂದು ಹೈ ಪವರ್ ಕಮಿಟಿ ಕಾನ್ಸಿಟ್ಯೂಟ್ ಮಾಡಿ ತ್ರೈಮಾಸಿಕವಾಗಿ ಅದು ಮೀಟ್ ಮಾಡುವ ಮೂಲಕ ಇದಕ್ಕೊಂದು ಪರಿಹಾರ ಕಂಡುಹಿಡಿಯಬೇಕೆಂದು ನಾನು ಮನವಿ ಮಾಡಬಯಸುತ್ತೇನೆ.

ಇನ್ನು ಲೋಕಸೇವಾ ಆಯೋಗದ ಬಗ್ಗೆ ಒಂದು ಮಾತು ಹೇಳಬಯಸುತ್ತೇನೆ. ಸುಮಾರು ನಾಲ್ಕು ವರ್ಷಗಳ ಕಾಲ ಅದರ ಮೂಲಕ ಸರ್ಕಾರ ನೇಮಕಾತಿಯನ್ನು ಮಾಡಲಿಲ್ಲ. ಕ್ಲಾಸ್-1 ಮತ್ತು ಕ್ಲಾಸ್-2 ಹುದ್ದೆಗಳಿಗೆ ಆಯ್ಕೆ ಯನ್ನು ಮಾಡಲಿಲ್ಲವೆನ್ನುವ ಕೊರಗು ಯುವಕರಲ್ಲಿ ಮತ್ತು

ವಿದ್ಯಾವಂತರಲ್ಲಿ ಇದೆ. ಏತಕ್ಕೆ ಮಾಡಲಿಲ್ಲವೆನ್ನುವುದು ಗೊತ್ತಿಲ್ಲ. ಸರ್ಕಾರ ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದೆಯೋ ಗೊತ್ತಿಲ್ಲ. ಹಿಂದೆ ರಿಟನ್ ಟೆಸ್ಟ್ ಆಗಿದೆ. ಮೌಖಿಕ ಪರೀಕ್ಷೆ ಕೂಡ ಆಗಿದೆ. ಲಿಸ್ಟ್ ಕೂಡ ತಯಾರಾಗಿದೆ ಎಂದು ಹೇಳುತ್ತಾರೆ. ಅದರಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಲಿಸ್ಟ್ ತಯಾರಾಗಿದೆ. ಲಿಸ್ಟ್ ಅನೌನ್ಸ್ ಮಾಡಲಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಆದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಕರ್ನಾಟಕ ಲೋಕಸೇವಾ ಆಯೋಗದಲ್ಲಿ "ಡಿ" ಗ್ರೂಪ್ ನೌಕರರು ಏನಿದ್ದಾರೆ ಅವರು ಸುಮಾರು 7-8 ವರ್ಷಗಳಿಂದ ಇವತ್ತಿನವರೆಗೂ ಕೂಡ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನೌಕರಿಯನ್ನು ಖಾಯಂ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಅದು ಅಟಾನಮಸ್ ಬಾಡಿ ಇರಬಹುದು. ಆದರೂ ಸರ್ಕಾರದಿಂದ ಅದಕ್ಕೆ ಏನು ಆದೇಶ ಕೊಡಲಿಕ್ಕೆ ಸಾಧ್ಯವಿದೆ ಅದನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ಸ್ಟೈಫಂಡರಿ ಗ್ರಾಜುಯೇಟ್ಸ್ ಏನು ವರ್ಕ್ ಮಾಡುತ್ತಿದ್ದಾರೆ ಅವರಲ್ಲಿ ಸುಪ್ರೀಂ ಕೋರ್ಟ್ ಆದೇಶದ ಮೇಲೆ ಸುಮಾರು 64 ಸಾವಿರ ಹಂಗಾಮಿ ನೌಕರರನ್ನು ಕಾಯಂಗೊಳಿಸಿದ್ದೇವೆಂದು ಮುಖ್ಯಮಂತ್ರಿಗಳು ಮತ್ತು ಸರ್ಕಾರ ಹೇಳಿದೆ. ಆದರೆ ಇದರಲ್ಲಿ ರೋಸ್ಟರ್ ಪ್ರಕಾರ ಶೇಕಡಾವಾರು ನೋಡುವುದಾದರೆ 2400 ಸಂಖ್ಯೆಯ ಮಟ್ಟಿಗೆ ಮಾತ್ರ ಷೆಡ್ಯೂಲ್ಡ್ ಕಾಸ್ಟ್‌ನವರನ್ನು ಕಾಣಬಹುದು. ಅಲ್ಲಿ ಮಿಕ್ಕಿದವರಿಗೆ ವಂಚನೆಯಾಗಿರುವುದರಿಂದ ಅಲ್ಲಿ ಸಹ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಬೇಕೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಅಧ್ಯಕ್ಷಿಣಿಯವರಾಗಿದ್ದೀರಿ, ನಾನೂ ಸಹ ಮಹಿಳೆಯಾಗಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ ಸಲ ಆಯವ್ಯಯ ಮಂಡನೆ ಮಾಡತಕ್ಕ ಸಂದರ್ಭದಲ್ಲಿ ಶೇಕಡ 30 ರಷ್ಟು ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡಬೇಕೆನ್ನುವ ಒಂದು ಮಾತನ್ನು ಹೇಳಿದ್ದರು. ಆದರೆ ಅದನ್ನು ಇನ್ನೂ ಕಾರ್ಯರೂಪಕ್ಕೆ ತಂದಿಲ್ಲ. ಅವರು ಮುಖ್ಯ ಮಂತ್ರಿಗಳಾಗಿ ಒಂದೂವರೆ ವರ್ಷ ಆಯಿತು. ಇಲ್ಲಿಯ ತನಕ ಶೇಕಡ 30 ಪರ್ಸೆಂಟ್ ಪ್ರಕಾರ ಎಷ್ಟು ಮಹಿಳೆಯರಿಗೆ ಉದ್ಯೋಗವನ್ನು ಕೊಡಲಾಗಿದೆ ಎನ್ನುವ ಒಂದು ಪ್ರಶ್ನೆಯನ್ನು ತಮ್ಮ ಹತ್ತಿರ ಬರತಕ್ಕ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಕೇಳುತ್ತಾರೆ. ಅವರಿಗೆ ಯಾವರೀತಿ ಜವಾಬು ಕೊಡಬೇಕೋ ನನಗೆ ಅರ್ಥವಾಗುವುದಿಲ್ಲ. ಆರ್ಥಿಕ ನಿರ್ಬಂಧವನ್ನು ಕೆಲವೇ ಇಲಾಖೆಗಳಿಗೆ ಅಂದರೆ ಶಿಕ್ಷಣ ಮತ್ತು ಆರೋಗ್ಯ ಇಲಾಖೆಗೆ ಮಾತ್ರ ಅದನ್ನು ಸಡಿಲಗೊಳಿಸಿದೆ. ಇತರೆ ಇಲಾಖೆಗಳಿಗೆ ಇನ್ನೂ ಇರುವ ಆರ್ಥಿಕ ನಿರ್ಬಂಧವನ್ನು ತೆಗೆದುಹಾಕಿ ವಿಶೇಷವಾದ ನೇಮಕಾತಿಗಳನ್ನು ಮಹಿಳೆಯರಿಗೆ ಮತ್ತು ಷೆಡ್ಯೂಲ್ಡ್ ಕಾಸ್ಟ್ ವ್ಯಕ್ತಿಗಳಿಗೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮತ್ತೆ ಈಗಿನ ಆಡಳಿತ ಸುಧಾರಣೆಯನ್ನು ಮಾಡುವುದಕ್ಕಾಗಿ ಪಂಚಸೂತ್ರಗಳನ್ನು ಅಳವಡಿಸಿಕೊಂಡು ಹೋಗಬೇಕು ಎಂದು ಹಿಂದೆ ಕೂಡ ಅವರು ಹೇಳಿದರು. ನನ್ನ ಅನುಭವದಲ್ಲಿ ನಾನು ಹೇಳುವುದಾದರೆ ಇದು ಪಂಚಸೂತ್ರ ಅಲ್ಲ, ದಶಸೂತ್ರ ಹಾಕಿದರೂ ಈ ಆಡಳಿತ ಪದ್ಧತಿಯನ್ನು ಸುಧಾರಣೆ ಮಾಡುವುದಕ್ಕೆ ಆಗುವುದಿಲ್ಲ. ಅದೇನಿದ್ದರೂ ದಶಸೂತ್ರ ಅಲ್ಲ, ದಶಾವತಾರ ತಾಳಿದರೂ ಈಗಿನ ವ್ಯವಸ್ಥೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ ಎಂದು ನನಗೆ ತೋಚುತ್ತದೆ. ಈ ಕಾರಣದಿಂದ ನಾನು ಹೇಳಬಯಸುವುದೇನೆಂದರೆ ಈಗ ದಕ್ಷತೆ, ನಿರ್ಲಕ್ಷ್ಯತನ, ಕರ್ತವ್ಯಚ್ಯುತಿ, ದುಂದುವೆಚ್ಚ ಅವುಗಳನ್ನೆಲ್ಲವನ್ನು ಕಂಡು ಹಿಡಿಯಬೇಕಾದರೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್‌ಮ್ಯಾನೇಜ್‌ಮೆಂಟ್ ಅಂತ ಏನಿದೆ, ಅಲ್ಲಿ ದಕ್ಷತಾ ಪರಿಶೋಧನಾ ಮತ್ತು ಜಾಗೃತ ವಿಭಾಗವನ್ನು

ಏನು ತೆಗೆಯಬೇಕೆಂದು ಮಾಡಿದ್ದಾರೆ, ಇದನ್ನು ಅವರಿಗೆ ವಹಿಸಿಕೊಟ್ಟು ಕನಿಷ್ಟಪಕ್ಷ ಒಂದೆರಡು ಇಲಾಖೆಗಳನ್ನು ಅವರಿಗೆ ಕೊಟ್ಟು ಅಲ್ಲಿ ಯಾವರೀತಿ ನಾವು ದಕ್ಷತೆ ತೋರಿಸಬಹುದು ಮತ್ತು ಯಾವ ರೀತಿ ದುಂದುವೆಚ್ಚ ತಡೆಗಟ್ಟಬಹುದು ಅನ್ನುವ ವ್ಯವಸ್ಥೆಯನ್ನು ಆ ಸಂಸ್ಥೆಯ ವತಿಯಿಂದ ಸಲಹೆ ಸೂಚನೆಗಳನ್ನು ಪಡೆದು ಜಾಗ್ರತೆಯಾಗಿ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಮಂದಗತಿಯಲ್ಲಿ ಹೋಗುತ್ತಾ ಇರತಕ್ಕಂಥ ಇಲಾಖೆಗಳು ಯಾವ್ಯಾವ ಇವೆ. ಅವೆಲ್ಲವನ್ನೂ ಕೂಡ ಸ್ಕ್ರಾಪ್ ಮಾಡಬೇಕೆಂಬ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ 10 ಪರ್ಸೆಂಟ್ ಕಟ್ ಮಾಡಬೇಕು ಮತ್ತು ಆಡಳಿತದ ವಿಚಾರದಲ್ಲಿ ಹೇಗೆ ಇರಬೇಕೆಂದು ನಮ್ಮ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಈ ಒಂದು ದಿಸೆಯಲ್ಲಿ ಹಲವಾರು ಇಲಾಖೆಗಳನ್ನು ಸ್ಕ್ರಾಪ್ ಮಾಡಬೇಕಾಗುತ್ತದೆ. ಉದಾಹರಣೆಗೆ ಮಾನ್ಯ ಅಧ್ಯಕ್ಷಿಣಿಯವರೇ, ತಮ್ಮ ಅನುಭವದಲ್ಲೂ ಇದು ಬಂದಿರಬೇಕು. ತಾಲ್ಲೂಕು ಮಟ್ಟದಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸು ಎಂದು ಒಂದು ಇತ್ತು. ಈಗಲೂ ಕೂಡ ಇದೆ. ಆದರೆ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಮೇಲೆ ಅವರಿಗೆ ಅಷ್ಟಾಗಿ ಕೆಲಸ ಕಾರ್ಯಗಳು ಇಲ್ಲ. ಅವರ ಅಭಿಪ್ರಾಯಗಳನ್ನು ವಿವಿಧ ರೀತಿಯಲ್ಲಿ ನಾವು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಅಂತಹ ಹುದ್ದೆಗಳನ್ನು ಕಂಡು ಹಿಡಿದು ಕಿತ್ತು ಹಾಕುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ದಕ್ಷತೆ ಸಾಧಿಸುವ ದಿಶೆಯಲ್ಲಿ ಈ ಕಡ್ಡಾಯ ನಿವೃತ್ತಿ ಏನು ಕೊಡುತ್ತೇವೆ, ಅದನ್ನು ಸುಮಾರು ವಯಸ್ಸಾದವರಿಗೆ ಕೊಟ್ಟು ಅವರನ್ನು ತೆಗೆದು ಹುದ್ದೆಗಳ ಸಂಖ್ಯೆ ಕಡಿಮೆ ಮಾಡಬೇಕೆಂಬ ಮಾತನ್ನು ಹೇಳಿ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಸಿದ್ದಯ್ಯ (ಸಂತೇಮಾರನಹಳ್ಳಿ):-ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಸದನದ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳ ಬಗ್ಗೆ ನಾನು ಸಹ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಮಾತ್ರ ಕೊಡುವುದಕ್ಕೆ ಬಯಸುತ್ತೇನೆ. ಅದರಲ್ಲಿ ಮುಖ್ಯವಾಗಿ ಸರ್ಕಾರಿ ನೌಕರಿಯಲ್ಲಿ ಒಂದು ವಿಶೇಷ ಸೌಲಭ್ಯವನ್ನು ಒದಗಿಸಿಕೊಟ್ಟಿರತಕ್ಕಂಥದ್ದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕು ಎಂದರೆ, ಮೊಟ್ಟಮೊದಲನೆಯದಾಗಿ ಈ ಹಿಂದುಳಿದ ವರ್ಗಗಳಿಗೆ, ಎಸ್.ಸಿ.ಎಸ್.ಟಿಯವರಿಗೆ ಸರ್ಕಾರಿ ನೌಕರಿಗಳನ್ನು ಕೊಡುವಾಗಿ ಎಫಿಷಿಯನ್ಸಿಯನ್ನೇ ನೋಡಿಕೊಂಡು ಕೊಡಬೇಕೆಂದು ಸ್ಪೆಸಿಫಿಕ್ ಪ್ರಾವಿಷನ್ ಇದೆ. ಬಹುಶ: ಇಂತಹ ಪ್ರಾವಿಷನ್ ಬೇರೆಯವರಿಗೆ ಸಂಬಂಧಪಟ್ಟ ಹಾಗೆ ಇರುವ ಮಟ್ಟಿಗೆ ಕಾಣೆ. ಇದ್ದರೂ ಸಹ ಆರ್ಟಿಕಲ್ 301ರ ಕೆಳಗೆ ಈ ರಿಕ್ರೂಟ್‌ಮೆಂಟ್ ಬಗ್ಗೆ ಒಂದು ಕಾನೂನನ್ನು, ನಿಯಮಾವಳಿಯನ್ನು ಮಾಡಬೇಕೆಂದು ಇದೆ. ಅದು ಇದುವರೆಗೂ ಸಹ ಆಗಿಲ್ಲ. ಆದರೆ ರೂಲ್ಸ್ ಮಾತ್ರ ಆಗಿದೆ. ಏನೇ ಇರಲಿ, ಈ ವಿಚಾರದಲ್ಲಿ ಹಿಂದೆ ಸಹ ಶ್ರೀ ದೇವರಾಜ ಅರಸು ಅವರ ಸರ್ಕಾರದಲ್ಲಿ ಇರತಕ್ಕಂಥ ರೂಲ್ಸ್‌ನಲ್ಲೇ ತೃಪ್ತಿಕರವಾಗಿ ಕೆಲಸ ಆಗುತ್ತಿದೆ, ಆದ್ದರಿಂದ ಈಗ ಸ್ಪೆಷಲ್ ಆಗಿ ಆರ್ಟಿಕಲ್ ಕೆಳಗಡೆ ಕೊಟ್ಟಿರತಕ್ಕಂಥ ಸ್ಪೆಷಲ್ ಆಕ್ಟ್ ಅನಾವಶ್ಯಕವೆಂದು ಹೇಳಿ ಮುಂದುವರೆಸಿಕೊಂಡು ಬಂದಿದ್ದಾರೆ. ಅದು ಏನೇ ಇದ್ದರೂ ಸಹ ರಿಕ್ರೂಟ್‌ಮೆಂಟ್ ವಿಚಾರದಲ್ಲಿ ಈ ಹಿಂದುಳಿದ ವರ್ಗಗಳಿಗೆ, ಹರಿಜನ ಗಿರಿಜನರಿಗೆ ಅನ್ಯಾಯವಾಗಿದೆ ಎಂದು ಕೆಲವರು ಹೇಳಿದ್ದಾರೆ. ಇದರ ಬಗ್ಗೆ ಕಾನೂನು ಇಲ್ಲವೆಂದು ಹೇಳಿರುವುದರಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅವರ ಆಡಳಿತ ಅವಧಿಯಲ್ಲಿ ಒಂದು ಸ್ಪೆಷಲ್ ಆಕ್ಟ್‌ನ್ನು ಮಾಡಿ ಅಪಾಯಿಂಟ್‌ಮೆಂಟ್, ಪ್ರಮೋಷನ್ ವಿಚಾರದಲ್ಲಿ ಕಾನೂನು, ನಿಯಮಾವಳಿಗಳನ್ನು ಮೀರಿದರೆ ಅಂತಹವರು ಶಿಕ್ಷಾರ್ಹರು ಎನ್ನತಕ್ಕಂಥ ಆಕ್ಟ್‌ನ್ನು ತಂದಿದ್ದಾರೆ. ಇದು ಸ್ವಾಗತಾರ್ಹ. ಬಹುಶಃ ಇಂತಹ ಆಕ್ಟ್ ನಮ್ಮ

ರಾಷ್ಟ್ರದಲ್ಲಿ, ನನಗೆ ತಿಳಿದವಮಟ್ಟಿಗೆ ಎಲ್ಲಿಯೂ ಇಲ್ಲ. ಈ ವಿಚಾರದಲ್ಲಿ ಮುಖ್ಯವಾಗಿ, ಮಾನ್ಯ ಮುಖ್ಯಮಂತ್ರಿಗಳಿಗೆ ಅಪಾರವಾದ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಈ ರೆಕ್ರೂಟ್‌ಮೆಂಟ್‌ನಲ್ಲಿ ಸ್ಪೆಷಲ್ ಕೆಟಗರಿ ಒಂದು ಇದೆ. ಸ್ಪೆಷಲ್ ಕೆಟಗರಿ ಪರ್ಸನ್ಸ್‌ಗೆ ರಿಸರ್ವೇಶನ್ ಉಂಟು. ಆದರೆ, ಇದರಲ್ಲಿ ಕೆಲವು ಇನ್‌ಕಮ್ ಗ್ರೂಪ್‌ನವರಿಗೆ ಇಷ್ಟು ಆದಾಯ ಇರತಕ್ಕವರಿಗೆ, ಇಂಥಿಂಥ ಸರ್ಕಾರಿ ನೌಕರಿಗೆ ಇಷ್ಟು ಪರ್ಸೆಂಟೇಜ್ ಕೊಡಬೇಕೆಂದು ಇದೆ. ಬಹುಶಃ ರಾಜ್ಯಾಂಗದಲ್ಲಿ ಆರ್ಟಿಕಲ್ 6 (4)ರ ನಿಯಮಾವಳಿಯಲ್ಲಿ ಇದು ಬರುವುದಿಲ್ಲವೆಂದು ನಾನು ಅನೇಕಸಾರಿ ಹೇಳಿದ್ದೇನೆ. It will not stand the test of judicial scrutiny. ಇದರ ಬಗ್ಗೆ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ತಿಳಿದು, ಈ ಸ್ಪೆಷಲ್ ಕೆಟಗರಿ ಸಿಯೇ ಇಲ್ಲವೇ ಎನ್ನುವುದನ್ನು ಎಕ್ಸಾಮಿನ್ ಮಾಡಬೇಕೆಂದು ನನ್ನ ಮೊದಲನೇ ಸಲಹೆ. ಈ ಕಟಗರಿಯಲ್ಲಿ ಮೊದಲು ಮೂರು ಪರ್ಸೆಂಟ್ ಇತ್ತು, ಆಮೇಲೆ 5 ಪರ್ಸೆಂಟ್ ಮಾಡಿದರು, ಈಗ 15 ಪರ್ಸೆಂಟ್ ಮಾಡಿದ್ದಾರೆಂದು ಕೇಳಿದ್ದೇನೆ. ಇದು ಸರಿಯಾದುದಲ್ಲ. ಈ ಕೆಟಗರಿ ಆರ್ಟಿಕಲ್ (16) 4ರ ಜೂರಿಸ್‌ಡಿಕ್ಷನ್‌ನಲ್ಲಿ ಬರುವುದಿಲ್ಲ. ಏಕೆಂದರೆ, Special category is not a fixed class. It is a fluctuating group. ಇದು ಆದ್ದರಿಂದ ಸರಿಯಾದುದಲ್ಲ. ಇದರ ಬಗ್ಗೆ ನ್ಯಾಯತಜ್ಞರ ಅಭಿಪ್ರಾಯವನ್ನು ಪಡೆದು, ಈ ಕೆಟಗರಿ ವಿಚಾರದಲ್ಲಿ ರೀ ಎಕ್ಸಾಮ್ ಮಾಡಿಸಬೇಕು. ಇದಲ್ಲದೆ, ಕೆಲವು ಕೆಟಗರಿಯಲ್ಲಿ ಎಕ್ಸ್ ಮಿಲಿಟರಿ ಪರ್ಸನ್ಸ್‌ಗೆ ಕೊಡಬೇಕೆಂದು ಇದೆ. ಇದನ್ನು ನಾನು ವಿರೋಧ ಮಾಡುವುದಿಲ್ಲ, ಏತಕ್ಕೆಂದರೆ, ಈ ಜನರು ದೇಶಕ್ಕಾಗಿ ಪ್ರಾಣ ಕೊಟ್ಟು, ಈ ದೇಶವನ್ನು ರಕ್ಷಣೆ ಮಾಡತಕ್ಕ ಜನರು. ಇವರಿಗೆ ಕೊಡಬೇಕು, ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಕೆಟಗರಿಯಲ್ಲಿ ಎಕ್ಸ್ ಮಿಲಿಟರಿ ಪರ್ಸನ್ಸ್‌ಗೆ ಕೊಡತಕ್ಕ ಕೆಟಗರಿಯಲ್ಲಿಯೂ ಸಹ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ರಿಸರ್ವೇಷನ್ಸ್ ಈ ಕೋಟಾದಲ್ಲಿಯೂ ಏಕೆ ಮಾಡಬಾರದು. ಈ ರೀತಿ ಮಾಡುವುದಕ್ಕೆ ಅವಕಾಶ ಇದೆ. ಬಹುಶಃ ಈ ಬಗ್ಗೆ, ವಿಧಾನ ಮಂಡಲ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ವೆಲ್‌ಫೇರ್ ಕಮಿಟಿಯಲ್ಲಿ ಮಿಸ್ಟರ್ ಆರ್ಮುಗಂರವರು ಇದ್ದಾಗ, ಇದರ ಬಗ್ಗೆ ಒಂದು ರಿಪೋರ್ಟ್ ಕೊಟ್ಟು, ಈ ಪಾಯಿಂಟನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆಂದು ಕೇಳಿದ್ದೇವೆ. ಸರ್ಕಾರ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಯಬಯಸುತ್ತೇನೆ. ಎರಡನೆಯದಾಗಿ, ಸರ್ಕಾರದ ಎಫಿಷಿಯೆನ್ಸಿ ರೀಸರ್ಚ್ ಬ್ಯೂರೋ ವಿಚಾರದಲ್ಲಿ ಕೆಲವು ವಿಚಾರಗಳನ್ನು ತಮ್ಮ ಮುಂದಿಡಬೇಕೆಂದು ಇದ್ದೇನೆ. ಇದರಲ್ಲಿ ಪ್ರಾಮುಖ್ಯವಾಗಿ ಸರ್ಕಾರಿ ಆಡಳಿತದಲ್ಲಿರತಕ್ಕ ವ್ಯವಹಾರಗಳಲ್ಲಿ ಉಂಟಾಗತಕ್ಕ ತಡವನ್ನು ತಪ್ಪಿಸಿಬಿಟ್ಟರೆ, ಬಹುಶಃ ದಕ್ಷತೆಯು ಬಹುಬೇಗನೆ ಚೆನ್ನಾಗಿ ಆಗುತ್ತದೆಂದು ನಾನು ನಂಬಿದ್ದೇನೆ. ಎಷ್ಟೋ ಸಂದರ್ಭದಲ್ಲಿ ಸರ್ಕಾರಿ ನೌಕರರ ವ್ಯವಹಾರಗಳಲ್ಲಿ ಕೆಲವು ರೆಕಾರ್ಡ್ಸ್ ಹಿಂದೆ ಮುಂದೆ ಓಡಾಡುತ್ತಿರುತ್ತವೆ. ಕಾರಣ ಏನೆಂದರೆ, ಈ ಬಗ್ಗೆ ಸರ್ಕಾರ ಕಟ್ಟಕಡೆಯ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬೇಕಾದ ಅಂಶಗಳು ಅದರಲ್ಲಿ ಇರುವುದಿಲ್ಲ. ಅಪೂರ್ಣ ವಿವರಗಳಿಗೋಸ್ಕರ, ಎನ್ನುವ ದೆಸೆಯಿಂದ ಮೇಲೆ ಕೆಳಗೆ, ಹೋಗುತ್ತವೆ. Is it a mark of efficiency? ಇದು ಸರ್ಕಾರದ ಆಡಳಿತದಲ್ಲಿರತಕ್ಕ ಅಧಿಕಾರಿವರ್ಗದವರಿಗೆ, ಪ್ರತಿಯೊಬ್ಬರಿಗೂ, ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನವರ ನೋಟೀಸಿಗೂ ಹೋಗುತ್ತದೆ. ಅಧಿಕಾರ ವರ್ಗದವರಿಗೆ ಸ್ಪೆಷಲ್ ಟ್ರೈನಿಂಗ್ ಕೊಡುತ್ತಾರೆ. ಇಷ್ಟು ಇದ್ದೂ, ಅವರ ನೋಟೀಸಿಗೆ ಹೋದರೂ ಸಹ, ಅವರು ಏಕೆ ಬಿಡುತ್ತಾರೆಂದು ನನಗೆ ಗೊತ್ತಿಲ್ಲ. ಬಹುಶಃ ಈ ವಿಚಾರದ ಬಗ್ಗೆ ಎನ್‌ಲೈಟನ್ ಮಾಡಿದರೆ ಬಹಳ ಒಳ್ಳೆಯದು. ಅದರ ವ್ಯಾಪ್ತಿಯಲ್ಲಿಯೇ ಇರುತ್ತದೆ. ಆದರೆ, ಏತಕ್ಕೆ ಈ ಕೆಲಸ

ಮಾಡುತ್ತಾರೆಂದು ಗೊತ್ತು. ರೀಸರ್ಚ್‌ಗೆ ಹೋಗಿದ್ದರೂ ಸಹ, Inspite of efficiency Research Bureau ಸೂಚನೆಗಳು ಮತ್ತು ಗೈಡೆನ್ಸ್ ಇದ್ದರೂ ಇದು ನಡೆಯುತ್ತಿದೆ. ಅವರ ಕಣ್ಮುಂದೆಯೇ ನಡೆಯುತ್ತಿದೆ. ರೀಸರ್ಚ್ ಮಾಡತಕ್ಕಂಥ ಮತ್ತು ಸೂಚನೆ ಕೊಡತಕ್ಕಂಥವರ ದಕ್ಷತೆ ಎಷ್ಟರಮಟ್ಟಿಗೆ ಇದೆ, ಎಷ್ಟು ಡಿಲೇ ಆಗಿದೆ, ಎಷ್ಟು ಅದಕ್ಷತೆಯನ್ನು ತೋರಿಸುತ್ತಿದ್ದಾರೆ, ಎಂಬುದು ಅವರ ವ್ಯವಹರಿಸತಕ್ಕ ಫೈಲುಗಳನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಇದಲ್ಲದೆ ಎಷ್ಟೋ ಸಂದರ್ಭದೊಳಗೆ, ಅದರಲ್ಲೂ ಲ್ಯಾಂಡ್ ಅಕ್ವಿಸಿಷನ್ ಕೇಸ್‌ನಲ್ಲಿ ಹೆಚ್ಚಾಗಿ ಕಾಣುತ್ತೇವೆ. ಒಂದು ಘಟನೆ ಹೇಳುವುದಾದರೆ, ಬೇಕಾದಷ್ಟು ಕೇಸುಗಳು ಹೈಕೋರ್ಟಿನವರೆಗೆ ಹೋಗುತ್ತವೆ. ಅಲ್ಲಿ ಹೋದಾಗ ಏನಾಗುತ್ತದೆ ಎಂಬ ಬಗ್ಗೆ ನಮ್ಮ ಊರಿನಲ್ಲಿ ನಡೆದಂಥ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಕ್ವಿಸಿಷನ್ ಕೇಸ್‌ನಲ್ಲಿ ಹೈಕೋರ್ಟ್ ಜಡ್ಜ್ ಏನು ಮಾಡಿದ್ದಾರೆ, ಇದರಲ್ಲಿ ಪ್ರೊಸೀಜರನ್ನು ಅನುಸರಿಸಬೇಕು, ಆದರೆ ಅದನ್ನು ಅನುಸರಿಸಿಲ್ಲ. ಅವರು ಕೇಳಿರುವಹಾಗೆ ಎದುರುಪಾರ್ಟಿಗೆ ಅಬ್ಜೆಕ್ಷನ್‌ಗೆ ಆಪೋರ್ಚುನಿಟಿ ಕೊಡಲಿಲ್ಲ. ಇದನ್ನು ಅಬ್‌ಸರ್ವ್ ಮಾಡಿಲ್ಲ ಎಂದು ಹೇಳಿದ್ದಾರೆ. ಇದು ಬಹಳ ಸಿಂಪಲ್ಲೆಸ್ಟ್. ಇದನ್ನು ಯಾವ ಅಕ್ವಿಜಿಷನ್ ಆಫೀಸರ್ ಆದರೂ ಅಬ್‌ಸರ್ವ್ ಮಾಡಬೇಕಾದ ವಿಚಾರ. ಅವರ್ ಲಾ ಈಸ್ ಬೌಂಡ್ ಟು ಲುಕ್ ಇನ್‌ಟು ದೀಸ್ ಥಿಂಗ್ಸ್, ಇನ್‌ಸ್ಪೈಟ್ ಆಫ್ ದಟ್ ಅವರು ಮಾಡಿಲ್ಲ. ಏತಕ್ಕೆ ಮಾಡುವುದಿಲ್ಲ ಎಂದರೆ, ಎದುರು ಪಾರ್ಟಿಗೆ ಯಾವನ ಜಮೀನನ್ನು ಅಕ್ವೈರ್ ಮಾಡಬೇಕೆಂದು ಇದ್ದಾರೆ, ಆ ಜಮೀನಿನವನಿಗೆ ಇಂತಹುದು ಮಾಡಿದರೆ ನಿನಗೆ ಅನುಕೂಲವಾಗುತ್ತದೆ, ನೀನು ಹೈಕೋರ್ಟಿಗೆ ಹೋಗು, ಈ ಲ್ಯಾಕುನಾ ಹೇಳು, ನಿನಗೆ ಟೈಂ ಸಿಗುತ್ತದೆ, ಆಗ ಈ ರೀತಿ ಮಾಡಬಹುದೆಂದು ಹೇಳಿರತಕ್ಕಂಥ ಸಂದರ್ಭಗಳೂ ಉಂಟು. ಏತಕ್ಕೆಂದರೆ ಇಂತಹ ಸಣ್ಣ ವಿಚಾರ, ಅಸಿಸ್ಟೆಂಟ್ ಕಮೀಷನರ್, ಡೆಪ್ಯುಟಿ ಕಮೀಷನರ್ ಅಂತಹವರಿಗೆ ಗೊತ್ತಾಗುವುದಿಲ್ಲ ಎಂದು ಹೇಳಿದರೆ ಎಷ್ಟು ಆಶ್ಚರ್ಯ ? ಆದುದರಿಂದ ಇವರ ಎಫಿಷಿಯೆನ್ಸಿ ವಿಚಾರದಲ್ಲಿ ನೋಡಬೇಕಾಗಿದ್ದರೆ ಬೇಕಾದಷ್ಟು ಇಂತಹ ನಿದರ್ಶನಗಳು ಸರಕಾರಕ್ಕೆ ಸಿಗುತ್ತವೆ. ಸ್ಟೇಟ್ ಲೆವೆಲ್ ಎಫಿಷಿಯೆನ್ಸಿ ಬ್ಯೂರೋ ಇದೆ, ಡಿಸ್ಟ್ರಿಕ್ಟ್ ಲೆವೆಲ್ ಎಫಿಷಿಯೆನ್ಸಿ ಬ್ಯೂರೋ ಇದೆ. ಇವರ ಮೂಲಕ ಹೋದರೆ ಇಷ್ಟು. ಇವರ ಕಣ್ಮುಂದೆ, ಅವರ ಎದುರಿಗೇ ನಡೆಯುತ್ತಿದೆ, ಆ ಫೈಲ್ ಇವರ ಕಣ್ಮುಂದೆಯೇ ಪಾಸಾಗಿ ಹೋಗುತ್ತಿದ್ದರೂ ಅವರಿಗೆ ಗೊತ್ತಾಗುವುದಿಲ್ಲ ಎಂದರೆ ಇದರ ಅರ್ಥ ಏನು ? ಆದುದರಿಂದ ಇದರಲ್ಲಿ ಏನು ಕರಪ್‌ಷನ್, ಫೇವರಿಟಿಸಂ ಅಥವಾ ಪ್ರಿಜ್ಯುಡೀಸ್ ಏನೋ ಇದೆ. ಇವು ಮೂರು ಕಾರಣಗಳನ್ನು ಬಿಟ್ಟರೆ ಬಹುಶಃ ಇನ್ನು ಯಾವುದೂ ಇರುವ ಮಟ್ಟಕ್ಕೆ ಕಾಣಲಿಲ್ಲ. ಆದುದರಿಂದ ಎಫಿಷಿಯೆನ್ಸಿ ಬ್ಯೂರೋ ವಿಚಾರದಲ್ಲಿ ಇದನ್ನೂ ಸಹ ನೋಡಿದರೆ ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ. ಜೊತೆಗೆ ಅನೇಕ ಸಂದರ್ಭದಲ್ಲಿ ಸರಕಾರಿ ನೌಕರರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟು ಬಿಡುತ್ತಾರೆ. ಕೊನೇಪಕ್ಷ 6 ತಿಂಗಳು ಇಡಬಹುದೆಂದು ಒಂದು ವೇಳೆ ಎನ್‌ಕ್ವೈರಿ ಆಗಲಿಲ್ಲ ಎಂದರೆ ಇನ್ನೂ ಆರು ತಿಂಗಳು ಇಡಬಹುದೆಂದು ಒಂದು ರೂಲ್ ಇದೆಯಂತೆ. ಇಟ್ಟಮೇಲೆ ಕೋರ್ಟ್‌ನಲ್ಲಿ ಇಲ್ಲವೇ ಆಡಳಿತ ನ್ಯಾಯ ಮಂಡಳಿಯಲ್ಲಿ ತೀರ್ಮಾನವಾಗುವವರೆಗೂ ಸಹ ಆತ ಮನೆಯಲ್ಲೇ ಕುಳಿತಿದ್ದರೂ ಅವನಿಗೆ ಸಂಬಳ ಕೊಡಬೇಕು. ಇದು ಏತಕ್ಕೆ ಈ ಕಷ್ಟ? ಒಂದು ವೇಳೆ ಆತನನ್ನು ಇಟ್ಟು ಡ್ಯೂಟಿಗೆ ತೆಗೆದುಕೊಳ್ಳದೇ ಇರುವುದಕ್ಕೆ ಏನು ಅವಶ್ಯಕತೆ ಇದೆ. ಒಂದು ವೇಳೆ ಅದೇ ಕಡೆ ಅವನನ್ನು ಇಟ್ಟರೆ ಇನ್‌ಫ್ಲೂಯೆನ್ಸ್ ಮಾಡಬಹುದು, ಎವಿಡೆನ್ಸ್ ಸಪ್ರೆಸ್ ಮಾಡಬಹುದು, ಯಾರಿಗಾದರೂ ಹಿಡಿದು ತನ್ನ ಪರವಾಗಿ ವ್ಯವಹಾರ ನಡೆಸ ಬಹುದೆಂಬ ಶಂಕೆ ಇರಬಹುದು, ಈ ರೀತಿ ಶಂಕೆ ಇದ್ದರೆ

ಅವನನ್ನು ದೂರಕ್ಕೆ ಹಾಕಲಿ. ಒಂದು ವೇಳೆ ರಜೆ ಮೇಲೆ ಅವನು ಇದ್ದರೆ ಇಂತಹ ಇನ್‌ಫ್ಲೂ ್ಲಯೆನ್ಸ್ ಮಾಡಲಾರನೇ ? ಮಾಡಬಲ್ಲ, ಆದುದರಿಂದ ಇದರ ಬಗ್ಗೆ ಸರಕಾರಕ್ಕೆ ಬೇಕಾದಷ್ಟು ಹಣ ಖರ್ಚಾಗುತ್ತದೆ. ಇದನ್ನು ತಪ್ಪಿಸಬಹುದು. ಅವನನ್ನು ಡ್ಯೂಟಿ ಮೇಲೆ ತೆಗೆದುಕೊಂಡು ಬೇಗ ಬೇಗ ಎನ್‌ಕ್ವೈರಿ ಮಾಡಿಸುವುದು ಒಳ್ಳೆಯದೆಂದು ನಾನು ಸಲಹೆ ಕೊಡುತ್ತೇನೆ. ಜೊತೆಗೆ ನಾನು ಪ್ಲಾನಿಂಗ್ ಬಗ್ಗೆ ಒಂದೆರಡು ಮಾತಿನಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಪ್ಲಾನಿಂಗ್ ಬಹಳ ಮುಖ್ಯವಾದ ವಿಷಯ. ಏತಕ್ಕೆಂದರೆ ಈ ದೇಶದಲ್ಲಿ ಬಡತನವನ್ನು ನಿರ್ಮೂಲನೆ ಮಾಡಬೇಕೆನ್ನ ತಕ್ಕಂಥಾದ್ದು ಪ್ರತಿ ಸರಕಾರದ ಉದ್ದೇಶವೂ ಹೌದು. ಇದರ ಬಗ್ಗೆ ನಮ್ಮ ರಾಷ್ಟ್ರದ ಹೈಯೆಸ್ಟ್ ಬಾಡಿ ಆದಂಥ ಪ್ಲಾನಿಂಗ್ ಕಮೀಷನ್‌ನವರು ಅನೇಕ ಯೋಜನೆಗಳನ್ನು ತಯಾರು ಮಾಡುತ್ತಾರೆ. ಬಡತನದ ರೇಖೆಯಿಂದ ಕೆಳಗೆ ಬಿದ್ದಿರತಕ್ಕಂಥ ಜನಗಳ ಬಗ್ಗೆ ಹೇಳಬೇಕೆಂದರೆ ಬೇಕಾದಷ್ಟು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಈ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಜೊತೆಗೆ ಈ ಕಾರ್ಯಕ್ರಮಗಳು ನಮಗೆ ಏನು ಕೊಟ್ಟಿದೆ, ಇದರಿಂದ ಯಾವ ಉದ್ದೇಶಗಳನ್ನು ಸಾಧನೆ ಮಾಡಿಕೊಂಡಿದ್ದೇವೆ, ಎಲ್ಲವೂ ಸಾಧನೆ ಆಗಿದೆಯೋ, ಆಗಿಲ್ಲವೋ ಎಂಬುದನ್ನು ನೋಡತಕ್ಕಂಥಾದ್ದು ಬಹಳ ಮುಖ್ಯ. ಬಹುಶಃ ಇದನ್ನು ಯಾರೂ ಮಾಡಲಿಲ್ಲ. ನಾನು ಒಂದು ಸಲ ಮೈಸೂರಿನಲ್ಲಿದ್ದೆ, ತಾವೂ ಸಹ ಬಂದಿದ್ದೀರಿ ಎಂದು ಕಾಣುತ್ತದೆ, ಡಿಸ್ಟ್ರಿಕ್ಟ್ ಲೆವೆಲ್ ಮೀಟಿಂಗ್‌ಗೆ ಪ್ಲಾನಿಂಗ್ ಮಿನಿಸ್ಟರ್‌ರವರೂ ಸಹ ಬಂದಿದ್ದರು. ಕನ್‌ಸರ್ನ್ಡ್ ಸೆಕ್ರೆಟರಿ ಬಂದಿದ್ದರು. ನಾನು ಬಹಳ ಎಂಫಾಟಿಕ್ ಆಗಿ ಇದಕ್ಕೆ ಹೆಚ್ಚು ಗಮನಕೊಡಬೇಕೆಂದು ತಮಗೆ ಹೇಳಿದೆ. ಜಿಲ್ಲಾ ಪರಿಷತ್ ಆಕ್ಟ್ ಮತ್ತು ರೂಲ್ಸ್ ಇವುಗಳಲ್ಲಿ ಸಹ ರಿವ್ಯೂ ಪ್ರೋರ್ಷನ್ ಇದೆ, ನೀವು ಬೇಕಾದರೆ ನೋಡಿ. ನೀವು ಕೊಡತಕ್ಕಂಥ ಹಣ ಜನರನ್ನು ಬಡತನ ರೇಖೆಯಿಂದ ಮೇಲಕ್ಕೆ ಎತ್ತುವುದಕ್ಕೆ ಅನುಕೂಲವಾಗುತ್ತದೆಯೇ ಎಂಬುದನ್ನು ತಾವು ಏತಕ್ಕೆ ನೋಡಬಾರದು ಎಂದು ನಾನು ಎಷ್ಟು ಕೇಳಿಕೊಂಡರೂ ಸಹ ನಿಮ್ಮೆದುರಿಗೇ ಕೇಳಿದರೂ, ಸಂಬಂಧಪಟ್ಟ ಚೀಫ್ ಸೆಕ್ರೆಟರಿ ಸಹ ಅಲ್ಲೇ ಇದ್ದರೂ ಇದನ್ನು ಕೇಳಿ ಎಂದು ಹೇಳಿದರೂ ಏನು ಸಂಕಟವೋ ಗೊತ್ತಾಗಲಿಲ್ಲ, ಆ ವಿಚಾರದಲ್ಲಿ ಅವರು ಏನೂ ಹೇಳಲಿಲ್ಲ. ಅದೇನೇ ಇರಲಿ, ಇದರ ಬಗ್ಗೆ ನೋಡಿ, ನೀವು ಕೊಡತಕ್ಕಂಥ ಹಣ ಜನಗಳಿಗೆ ನಿಜವಾಗಿಯೂ ತಲುಪಿದೆಯೇ, ಅವರು ನಿಜವಾಗಿಯೂ ಬಡತನ ರೇಖೆಯಿಂದ ಮೇಲಕ್ಕೆ ಬಂದಿದ್ದಾರೆಯೇ ಅಥವಾ ಮತ್ತೆ ಅವರು ಬಡತವ ರೇಖೆಯಿಂದ ಕೆಳಗಡೆ ಇಳಿಯುತ್ತಿಲ್ಲವೇ, ಅವರು ಸ್ಟೆಬಿಲಿಟಿ ಮೈಂಟೇನ್ ಮಾಡುತ್ತಾರೆಯೇ ಎಂಬುದನ್ನು ನೋಡಿದರೆ ಸಾಕು. ಈಗ ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಮ್‌ನಲ್ಲಿ ಬಡವರಿಗೆ ಎತ್ತು, ಕರು ಎಲ್ಲಾ ಕೊಡುತ್ತಾರೆ. ನಾನು ಎರಡು ಮೂರು ಸಾರಿ ಪಬ್ಲಿಕ್ ಮೀಟಿಂಗ್‌ಗಳಲ್ಲಿ ಮತ್ತು ಅಸೆಂಬ್ಲಿಯಲ್ಲಿ ಮತ್ತು ಬೇರೆ ಗೌರ್ನಮೆಂಟ್ ಕಮಿಟಿಗಳಲ್ಲಿಯೂ ಸಹ ಇದನ್ನು ಹೇಳಿ ಈಗ ಈ ಬಡವರಿಗೆ ಎತ್ತುಗಳು, ಎಮ್ಮೆಗಳು, ಕುರಿಗಳನ್ನು ಕೊಟ್ಟಿದ್ದೀರಲ್ಲಾ, ಅದರಿಂದ ಏನೂ ಪ್ರಯೋಜನ ಇಲ್ಲವೆಂದ ಮೇಲೂ ಕೆಲವರು ಸಂತೆಗೆ ಹೋಗಿ ಪರ್ಚೇಸ್ ಮಾಡಿಕೊಟ್ಟಿದ್ದಾರೆ. ಏನು ಕೆಲಸ ಇದು ? ಸಾಲ ತೆಗೆದುಕೊಳ್ಳುವುದು ಅವನು. ಪರ್ಚೇಸ್ ಮಾಡಿಕೊಡುವವರು ಇವರು. ಎರಡು ಸಾವಿರ ರೂಪಾಯಿಗಳಿದ್ದರೆ ಒಂದು ಎತ್ತಿಗೆ ಮೂರು ಸಾವಿರ ರೂಪಾಯಿ ಅಂತ ಬರೆದು ಕೊಳ್ಳುವುದು. ಈಗ ಸಧ್ಯಕ್ಕೆ ಅದನ್ನು ಕಿತ್ತು ಹಾಕಿಬಿಟ್ಟರು. ಈಗ ಬರೀ ಎತ್ತುಗಳನ್ನು ಕೊಡುವುದು ನಡೆಯುತ್ತಿದೆ. ಅವನ ಲೆಕ್ಕಕ್ಕೆ ಬ್ಯಾಂಕಿನಲ್ಲಿ ಜಮಾ ಮಾಡಿಬಿಟ್ಟಿರುತ್ತಾರೆ. ವ್ಯವಸಾಯ ಮಾಡಲಿಕ್ಕೆ ಅಂತ ಬರೀ ಎತ್ತು ಕೊಟ್ಟರೆ ಮಳೆಗಾಲದಲ್ಲಿ ವ್ಯವಸಾಯ ಒಂದು ವಾರ ಎರಡು ವಾರದಲ್ಲಿ ಕ್ಲೋಸ್ ಆಗುತ್ತದೆ. ಅಲ್ಲಿಂದ ವ್ಯವಸಾಯ ಇಲ್ಲ.

ಬೇರೆ ಕಡೆ ಕೂಲಿ ಸಿಗುವುದಿಲ್ಲ. ಬರೀ ಎತ್ತುಗಳನ್ನು ಕೊಟ್ಟರೆ ಏನಾಗುತ್ತದೆ ? ಜೊತೆಗೆ ತಾವು ಕೊಟ್ಟದ್ದನ್ನು ಸರಿಯಾಗಿ ಉಪಯೋಗಿಸಿಕೊಂಡಿದ್ದಾನೆಯೇ ಇಲ್ಲವೇ ಅಂತ ನೋಡಬೇಕು ಮತ್ತು ಎತ್ತುಗಳ ಜೊತೆಗೆ ದಯವಿಟ್ಟು ಗಾಡಿಯನ್ನು ಸಹ ಕೊಡಿಸಿಕೊಡಿ. ಈ ಎರಡೂ ಒಂದೇ ಸಾರಿ ಕೊಟ್ಟರೆ ಬಹುಶಃ ಆ ಬಡವನಿಗೆ ಅನುಕೂಲವಾಗುತ್ತದೆ. ಎಷ್ಟೋ ಕೋಟಿ ರೂಪಾಯಿಗಳು ಏನೇನೋ ವ್ಯವಹಾರಗಳಲ್ಲಿ ಖರ್ಚಾಗಿ ಹೋಗುತ್ತದೆ. ಆದ್ದರಿಂದ, ತಾವು ದಯವಿಟ್ಟು ಈ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು. ಅವರು ಬಡತನ ರೇಖೆಗಿಂತ ಮೇಲಿದ್ದಾರೋ ಇಲ್ಲಾ ಕೆಳಗಿದ್ದಾರೋ ಅದು ಬೇರೆ ವಿಷಯ. ಆದರೆ, ಅವರು ಎಂದೆಂದಿಗೂ ಮೇಲೆ ಇರುವುದಿಲ್ಲ. ಮತ್ತೊಂದು ವಿಚಾರವೇನೆಂದರೆ, ಬ್ಯಾಂಕ್ ಕಮಿಟಿಯವರೆಲ್ಲರನ್ನೂ ಒಂದು ಸಾರಿ ನಮ್ಮ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಜಿಲ್ಲಾ ಪರಿಷತ್ತು ಚೀಫ್ ಸೆಕ್ರೆಟರಿ ಕರೆಸಿದ್ದರು. ಆ ಟೈಮ್‌ನಲ್ಲಿ ಅವರು ಏನು ಹೇಳಿದರೆಂದರೆ, ಇಷ್ಟೇನೇ ಇಸವಿಯೊಳಗೆ ಕಡು ಬಡತನ ರೇಖೆಗಿಂತ ಕೆಳಗಿರತಕ್ಕಂಥ ಜನಸಂಖ್ಯೆಯನ್ನು ಕೊನೇಪಕ್ಷ 10 ಪರ್ಸೆಂಟ್‌ಗಾದರೂ ಇಳಿಸಬೇಕೆಂದು. ಆದ್ದರಿಂದ, ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ಈಗ ಬಡವರು ಎಷ್ಟು ಜನರಿದ್ದಾರೆ, ಈ ಟಾರ್ಗೆಟ್‌ನ್ನು ಆ 10 ಪರ್ಸೆಂಟ್ ಮಟ್ಟಕ್ಕೆ ಇಳಿಸಲು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನತಕ್ಕಂಥಾದ್ದನ್ನು ತಿಳಿಸಿದರೆ ಸ್ವಲ್ಪ ನಮ್ಮ ಮನಸ್ಸಿಗೆ ಸಮಾಧಾನವಾಗುತ್ತದೆ. ಈ ವರ್ಷದ ಪ್ಲಾನಿಂಗ್ ರಿಪೋರ್ಟ್‌ನಲ್ಲಿ ಈ ವಿವರಗಳಿಲ್ಲ. ನನಗೆ ಹೇಳತಕ್ಕಂಥ ಇನ್ನೂ ಎಷ್ಟೋ ವಿಷಯಗಳು ಇದ್ದರೂ ಸಹ ತಾವು ಬೆಲ್ ಮಾಡಿದ ಮೇಲೂ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟು ಹೇಳಿ ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಾಬುರಾವ್ ಚವಾಣ್(ಶಹಾಬಾದ್):- ಮಾನ್ಯ ಅಧ್ಯಕ್ಷರೇ, ಇವತ್ತಿನ ಎಲ್ಲಾ ಬೇಡಿಕೆಗಳನ್ನು ನಾನು ಸ್ವಾಗತ ಮಾಡುತ್ತಾ ಕೆಲವು ಇಲಾಖೆಗಳ ಮೇಲೆ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಡಿ.ಪಿ.ಎ.ಆರ್.ಇಲಾಖೆ ಮಾನ್ಯ ಮುಖ್ಯಮಂತ್ರಿಗಳ ಇಲಾಖೆ. ನನ್ನ ಮೊದಲನೇ ಆರೋಪ ಅಧಿಕಾರಿಗಳ ಮೇಲೆ. ಏತಕ್ಕೆಂದರೆ ಶಾಸಕರುಗಳು ಯಾವುದಾದರೊಂದು ಇಲಾಖೆಗೆ ಹೋದರೆ ಸರಿಯಾಗಿ ಮಾತನಾಡಿಸುವುದಿಲ್ಲ. ಬಹುಶಃ ನಮ್ಮ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಅಧಿಕಾರಕ್ಕೆ ಬಂದ ಮೇಲೆ ಸ್ವಲ್ಪ ಸುಧಾರಣೆಯಾಗಿದೆ ಎಂಬುದು ಗೊತ್ತಾಗುತ್ತದೆ. ಆದರೆ, ಇನ್ನೂ ಸ್ವಲ್ಪ ಸುಧಾರಣೆಯಾಗಬೇಕು. ಶಾಸಕರುಗಳು ಯಾವುದಾದರೂ ಕಛೇರಿಗೆ ಹೋದರೆ ಅಧಿಕಾರಿಗಳು ಯಾವ ತರಹ ವರ್ತನೆ ಮಾಡಬೇಕು, ಯಾವ ತರಹ ಮರ್ಯಾದೆ ಕೊಡಬೇಕೆನ್ನುವ ಬಗ್ಗೆ ಒಂದು ಸಿಸ್ಟಂ ಇಲ್ಲ. ಇದು ಶಾಸಕರು ನಡೆಸಿಕೊಂಡು ಹೋಗತಕ್ಕಂಥ ಸರ್ಕಾರ. ನಾವು ಕೊಡುವ ಸಂಬಳ, ಕಛೇರಿಯಲ್ಲಿ ಕೂರಲು ಕೊಡತಕ್ಕಂಥ ಕುರ್ಚಿ, ಸರ್ಕಾರದ ವೆಹಿಕಲ್, ಸರ್ಕಾರದ ಫ್ಯಾನ್ ಅನ್ನು ಉಪಯೋಗ ಮಾಡಿಕೊಂಡ ಅಧಿಕಾರಿದಳ ಪೈಕಿ ಕೆಲವರು ಶಾಸಕರುಗಳಿಗೆ ಅವಮರ್ಯಾದೆ ಮಾಡುತ್ತಾರೆ. ಅಂತಹವರ ಮೇಲೆ ತಾವು ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾವು ಯಾರಾದರೂ ಮೀಟ್ ಮಾಡಲಿಕ್ಕೆ ಹೋದರೆ ಕೆಲವು ಅಧಿಕಾರಿಗಳು ನಾವು ಕೆಲಸದಲ್ಲಿದ್ದೇವೆ, ಸ್ವಲ್ಪ ಸಮಯ ಬಿಟ್ಟು ಬನ್ನಿ ಎಂದು ಹೇಳತಕ್ಕಂಥ ವಾಡಿಕೆ ಇದೆ. ಆದರಲ್ಲೂ ಅಧಿಕಾರಿಗಳ ಮನೆಗೆ ಫೋನ್ ಮಾಡಿ ನಾವು ಯಾವುದಾದರೊಂದು ವಿಷಯವನ್ನು ತಿಳಿದುಕೊಳ್ಳಲು ಇಷ್ಟಪಟ್ಟರೆ ತಮ್ಮ ಕುಟುಂಬದ ಬಳಗದವರಿಗೆ ಮತ್ತು ತಮ್ಮ ಮನೆಯಲ್ಲಿರತಕ್ಕಂಥ ತಮ್ಮ ಧರ್ಮಪತ್ನಿಯವರಿಗೆ ಹೇಳುತ್ತಾರೆ, "ಇಲ್ಲ"ಅಂತ ಹೇಳಿಬಿಡು, ಅವರು ಹೊರಗೆ ಹೋಗಿದ್ದಾರೆ ಅಂತ ಹೇಳಿಬಿಡು ಅಂತ. ನಾನು ಒಪ್ಪಿಕೊಳ್ಳುತ್ತೇನೆ.

ಅವರ ಪ್ರೈವೇಟ್ ಟೈಮ್‌ನಲ್ಲಿ ಅವರ ವೇಳೆಯನ್ನು ನಾವು ತೆಗೆದುಕೊಳ್ಳಬಾರದು ಎಂಬುದನ್ನು, ಆದರೆ, ಅಧಿಕಾರಿಗಳು ತಮ್ಮ ಟೈಮ್ ಪ್ರಕಾರವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿಕೊಂಡು ಹೋಗತಕ್ಕಂಥ ಪ್ರವೃತ್ತಿ ಅವರಲ್ಲಿ ಬೆಳೆದು ಬರಬೇಕು. ಸರ್ಕಾರ ಇವರ ಅನುಕೂಲಕ್ಕಾಗಿ ಇಷ್ಟು ದುಡ್ಡು ಖರ್ಚು ಮಾಡುತ್ತಿದ್ದರೂ ಇವರು ನಿರ್ಲಕ್ಷ್ಯತನದಿಂದ ಮಾಡತಕ್ಕಂಥ ಕೆಲಸಕ್ಕೆ ನಾನು ಖೇದವನ್ನು ವ್ಯಕ್ತಪಡಿಸುತ್ತಾ, ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ. . . . . . .

ಶ್ರೀ ಆರ್.ಎನ್.ನಾಯಕ್: - ಮೆಡಮ್, ಅವರು ಹೊಸದಾಗಿ ಬಂದಿದ್ದಾರೆ. ಅಧಿಕಾರಿಗಳ ಹತ್ತಿರ ಹೋದಾಗ ಸರಿಯಾಗಿ ನೋಡುವುದಿಲ್ಲ, ಮಾತನಾಡಿಸುವುದಿಲ್ಲ ಎನ್ನುವ ಅಭಿಪ್ರಾಯಕ್ಕೆ ಅವರು ಬಂದಿದ್ದಾರೆ. ನಾನು ಸದಸ್ಯನಾಗಿ ಸುಮಾರು 10ನೇ ವರ್ಷಕ್ಕೆ ಕಾಲಿಟ್ಟಿದ್ದೇನೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಚೀಫ್ ಮಿನಿಸ್ಟರ್ ಆಗಿದ್ದ ಕಾಲ ಅದು. ಶಾಸಕರು ಬಂದಾಗ ಅಧಿಕಾರಿಗಳು ಹೇಗೆ ಅವರನ್ನು ನೋಡಿಕೊಳ್ಳಬೇಕು ? ಹೇಗೆ ಮಾತನಾಡಿಸಬೇಕು? ಅನ್ನುವುದರ ಬಗ್ಗೆ ಆಗ ಒಂದು ಕೊಶ್ಚನ್ ಕೇಳಿದ್ದೆ. ಆಗ ಅವರು ಕಾಲಕ್ಕೆ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಹಲವಾರು ಸುತ್ತೋಲೆಗಳನ್ನು ರೆಫರ್ ಮಾಡಿ ಒಂದು ಉತ್ತರ ಕೊಟ್ಟರು. ಶಾಸಕರು ಅಲ್ಲಿ ಬಂದರೆ ಅವರನ್ನು ಗೌರವದಿಂದ ಬರಮಾಡಿಕೊಳ್ಳಬೇಕು. ಬರಮಾಡಿಕೊಂಡು ಕೂತುಕೊಳ್ಳುವುದಕ್ಕೆ ಖುರ್ಚಿಯನ್ನು ಕೊಡಬೇಕೆಂದು ಅದರಲ್ಲಿ ಅವರು ಹೇಳಿದ್ದು, ಆಮೇಲೆ ಕೆಲಸ ಏನು ಎಂದು ಅರ್ಜೆಂಟ್ ವಿಷಯ ಏನು ಎಂದು ಕೇಳಬೇಕು. ಶಾಸಕರು ಏನು ಕೇಳುತ್ತಾರೋ ಅದನ್ನು ಮಾಡುವುದಕ್ಕೆ ಸಾಧ್ಯವಿದ್ದರೆ ಕಾನೂನು ಪ್ರಕಾರ ಹೀಗೆ ಮಾಡುವುದಕ್ಕೆ ಆಗುತ್ತದೆ ಮತ್ತು ನಾನು ಬಹಳ ಶೀಘ್ರವಾಗಿ ಮಾಡುತ್ತೇನೆಂದು ಹೇಳಬೇಕು. ಅದು ಆಗದೇ ಹೋದರೆ ಅದು ಈ ಕಾನೂನು ಪ್ರಕಾರ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಆಮೇಲೆ ಶಾಸಕರು ಎದ್ದ ಮೇಲೆ ತಾವೂ ಎದ್ದು ಬಾಗಿಲವರೆಗೆ ಬಂದು ಅವರನ್ನು ಕಳುಹಿಸಿಕೊಡಬೇಕೆಂದು ರೂಲ್ಸ್‌ನಲ್ಲಿ ಇದೆ.

ಛೇರ್ಮನ್: ಅವರಿಗೆ ಕೊಟ್ಟಿರುವುದು 10 ನಿಮಿಷ. ಡಿಸ್ಟರ್ಬ್ ಮಾಡಬೇಡಿ ದಯವಿಟ್ಟು.

ಶ್ರೀ ಆರ್.ಎನ್.ನಾಯಕ್: ಅವರು ಹೊಸಬರಿದ್ದಾರೆ. ಅವರಿಗೆ ಇನ್ನೂ ಗೊತ್ತಿಲ್ಲ ಅದು ಹೇಳುವುದು ಬಹಳ ಇದೆ. ಆದರೆ ಏನಾಗಿದೆ, ಕೆಲವರು ಬಹಳ ಗೌರವವಾಗಿ ನಾವು ಅಪೇಕ್ಷೆ ಪಡುವುದಕ್ಕಿಂಥಾ ಚೆನ್ನಾಗಿ ನೋಡಿಕೊಳ್ಳುವವರೂ ಇದ್ದಾರೆ. ಆದರೆ, ಕೆಲವರು ಕುರ್ಚಿ ಮೇಲೆ ಸಿಗರೇಟ್ ಹಚ್ಚಿಕೊಂಡು ಕುಳಿತುಕೊಂಡಿರುತ್ತಾರೆ. ಇದು ಒಂದೆರಡು ಸಲ ಇಲ್ಲಿ ಪ್ರಸ್ತಾಪಕ್ಕೆ ಬಂತು. ಮಿನಿಸ್ಟರ್ ಮುಂದೆಯೇ ಸಿಗರೇಟ್ ಹಚ್ಚಿಕೊಳ್ಳುವಂಥ ಆಫೀಸರ್ಸ್ ಇದ್ದಾರೆಂಬ ವಿಷಯ ಇಲ್ಲಿ ಎಷ್ಟೋ ಸಲ ಚರ್ಚೆಗೆ ಬಂದು ಹೋಗಿದೆ. ಸುತ್ತೋಲೆಯಲ್ಲಿ ಎಲ್ಲ ವಿವರಗಳಿದ್ದರೂ ಮಂತ್ರಿಗಳಾದವರು, ಅಥವಾ ಮುಖ್ಯ ಮಂತ್ರಿಗಳಾದವರು ಅದನ್ನು ಯಾವ ರೀತಿ ಚಲಾವಣೆಯಲ್ಲಿ ತರುತ್ತಾರೆ ಅನ್ನುವುದರ ಮೇಲೆ ಹಾಗೂ ಶಾಸಕರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ನಡುವಿನ ಸಂಬಂಧ ಹಾಗೂ ಅವರ ಹಿಡಿತದ ಮೇಲೆ ಇದೆಲ್ಲಾ ಅವಲಂಬಿಸಿದೆ ಅಷ್ಟೇ. ಅದನ್ನು ತಾವು ಸ್ವಲ್ಪ ದಯಮಾಡಿ ತಿಳಿದುಕೊಳ್ಳಿ. ನನಗೆ ಸ್ವಲ್ಪ ಅನುಭವ ಇರುವುದರಿಂದ, ನಾನು ಒಮ್ಮೆ ಪ್ರಶ್ನೆ ಹಾಕಿದ್ದರಿಂದ ನೆನಪು ಇಟ್ಟುಕೊಂಡು ಇವತ್ತು ಹೇಳುತ್ತಿದ್ದೇನೆ.

ಶ್ರೀ ಬಾಬುರಾವ್ ಚವಾಣ್: ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಮಿತ್ರರಾದ

ಆರ್.ಎನ್.ನಾಯಕ್ ಚೆನ್ನಾಗಿ ಹೇಳಿದರು. ನಾನು ಮೊದಲನೇ ಸಲ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದೇನೆ. ನನ್ನ ಮಿತ್ರರು ಬಹುಶಃ 3 ಸಲ ಆಯ್ಕೆಯಾಗಿ ಬಂದಕಾರಣ ಜಾಸ್ತಿ ಅನುಭವ ಅವರಿಗೆ ಇದೆ. ನಾನು ವಿಧಾನ ಸಭೆಗೆ ಬಂದ ನಂತರ, ಮಾನ್ಯ ಮಂತ್ರಿಯವರಿಗೆ ಒಂದು ಕೊಶ್ಚನ್ ಹಾಕಿದ್ದೆ. ಅಧಿಕಾರಿಗಳು ಸರಿಯಾಗಿ ವರ್ತನೆ ಮಾಡುತ್ತಿಲ್ಲ. ಶಾಸಕರು ಕಛೇರಿಗೆ ಹೋದರೆ ಎದ್ದು ನಿಂತು ಮರ್ಯಾದೆ ಕೊಡುವುದಿಲ್ಲ ಎಂದು, ಅದಕ್ಕೆ ಮಾನ್ಯ ಮಂತ್ರಿಗಳು ಒಂದು ಲಿಖಿತ ರೂಪದಲ್ಲಿ ಉತ್ತರ ನೀಡಿದ್ದಾರೆ. ಗೌರ್ನಮೆಂಟ್ ನಿಯಮ ಇದೆ. ಗೌರ್ನಮೆಂಟ್ ಆರ್ಡರ್ಸ್ ಇದೆ. ಎದ್ದು ನಿಂತು ಮರ್ಯಾದೆ ಕೊಡತಕ್ಕಂಥಾದ್ದರ ಬಗ್ಗೆ ಹೇಳಿದ್ದಾರೆ. ಆದರೆ ಈ ಅನುಭವ ತಮಗೂ ಕೂಡಾ ಆಗಿರಬೇಕು. ನನಗೆ ಅನಿಸಿದ ಮಟ್ಟಿಗೆ ಈ ಅಧಿಕಾರಿಗಳು ಎಷ್ಟರಮಟ್ಟಿಗೆ ನಮ್ಮ ಶಾಸಕರಿಗೆ ರೆಸ್ಪೆಕ್ಟ್ ಕೊಡುತ್ತಾರೆನ್ನುವ ವಿಚಾರದಲ್ಲಿ ನಾನು ನಿಮ್ಮ ಮೂಲಕ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ತರದ ಅವ್ಯವಸ್ಥೆ ತೆಗೆದುಹಾಕಬೇಕು. ಶಾಸಕರು ಪಬ್ಲಿಕ್ ರೆಪ್ರೆಸೆಂಟೇಟೀವ್ಸ್. ಏನಪ್ಪಾ ಎಂದರೆ 5 ವರ್ಷ ಇರುತ್ತಾರೆ ಆಮೇಲೆ ಹೋಗುತ್ತಾರೆ ಎನ್ನುವ ಕಾರಣದಿಂದ ಅಧಿಕಾರಿಗಳು ಈ ರೀತಿ ವರ್ತನೆ ಮಾಡಿದರೆ ಇದಕ್ಕೆ ಕಟ್ಟುನಿಟ್ಟಾದ ಕ್ರಮವನ್ನು ಮಾನ್ಯ ಮುಖ್ಯ ಮಂತ್ರಿಗಳು ತೆಗೆದುಕೊಳ್ಳಬೇಕಾಗುತ್ತದೆ. ಇವರಿಗೆ ಎಚ್ಚರಿಕೆ ಕೊಡಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ವಿಚಾರ ನಾನು ಹೇಳುವುದನ್ನು ಮರೆತುಬಿಟ್ಟಿದ್ದೆ. ಆಫೀಸ್‌ನಲ್ಲಿ ಕೆಲವು ಅಧಿಕಾರಿಗಳು ಇದ್ದರೂ ನಾವು ಆಫೀಸಿನಲ್ಲಿ ಫೋನ್ ಮಾಡಿ ಕೇಳಿದರೆ ಟೂರ್ ಹೋಗಿದ್ದಾರೆ, ಅಲ್ಲಿಗೆ ಹೋಗಿದ್ದಾರೆ, ಇಲ್ಲಿಗೆ ಹೋಗಿದ್ದಾರೆಂದು ಸುಳ್ಳು ನೆಪ ಹೇಳುತ್ತಾರೆ. ಮನೆಗೆ ಫೋನ್ ಮಾಡಿದರೆ ತಮ್ಮ ಧರ್ಮ ಪತ್ನಿಗೆ ಹೇಳುತ್ತಾರೆ. ಅವರು ಯಾರಾದರೂ ಫೋನ್ ಮಾಡಿದರೆ ಅವಾಯ್ಡ್ ಮಾಡಿ, ಅವರು "ಇಲ್ಲ" ಎಂದು ಹೇಳಿ ಎನ್ನುವ ಮಾತನ್ನು ಹೇಳಿರುತ್ತಾರೆ. ಅವರಿಗೆ ಪಬ್ಲಿಕ್ ಟೆಲಿಫೋನ್ ಕೊಟ್ಟಿರುವುದು ಶಾಸಕರಿಗೆ, ಪ್ರಜೆಗಳಿಗೆ ಅನುಕೂಲ ಆಗಲಿಕ್ಕೋಸ್ಕರ ಅವರು ಬೀಗರು, ಬಳಗ , ನೆಂಟರಿಗೆ ಫೋನ್ ಮಾಡಲಿಕ್ಕೆ ಸರ್ಕಾರದವರು ದೂರವಾಣಿ ಕೊಟ್ಟಿಲ್ಲ. ಅವರು ಪ್ರಾಮಾಣಿಕವಾಗಿ ಕಛೇರಿಯಲ್ಲಿ ತಮ್ಮ ಅವಧಿ ಪ್ರಕಾರ ಕೆಲಸ ಮಾಡಿದರೆ ನಾವು ಏನೂ ಕೇಳುವುದಿಲ್ಲ. ಕೆಲವು ಆಫೀಸರ್‌ಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಮನೆಗೆ ಹೋದರೂ ಕೂಡಾ ರೆಸ್ಪಾನ್ಸ್ ಕೊಡುವುದಿಲ್ಲ. ಅವರಿಗೆ ಸಂಬಳದ ರೂಪದಲ್ಲಿ ತಿಂಗಳಿಗೆ ಕೋಟಿಗಟ್ಟಲೆ ಕೊಡುತ್ತಿದ್ದೇವೆ. ಆದರೂ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದರೆ ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಮುಖ್ಯವಾದಂಥ ವಿಚಾರವನ್ನು ಹೇಳುತ್ತೇನೆ. ಒಂದು ಫೈಲ್ ರೆವಿನ್ಯೂ ಇಲಾಖೆಯಿಂದ ಲಾ ಡಿಪಾರ್ಟ್‌ಮೆಂಟ್‌ಗೆ ಬರಬೇಕಾಗಿತ್ತು. ನಾನು ಹೊಸದಾಗಿ ಶಾಸಕನಾಗಿ ಬಂದ ನಂತರ, ಆ ಫೈಲ್‌ಗೋಸ್ಕರವಾಗಿ 15 ದಿವಸಗಳ ಕಾಲ ಹುಡುಕಾಡಿದ್ದೇನೆ. ಆ ಫೈಲ್‌ನಲ್ಲಿ ಕಾನೂನು ಇಲಾಖಾ ಪಿ.ಎಸ್.ರವರು ಇನಿಷಿಯಲ್ ಮಾಡಿಕೊಟ್ಟಿದ್ದಾರೆ. ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳಷ್ಟು ವಿಂಗ್‌ಗಳು ಇವೆ. ಎಲ್ಲೆ ಕೇಳಿದರೂ ಸಿಗಲಿಲ್ಲ. ಆಮೇಲೆ ರೆವಿನ್ಯೂದವರಿಗೆ ಕೇಳಿದೆ, ನನ್ನ ಫೈಲ್ ಯಾರಿಗೆ ಕೊಟ್ಟಿದ್ದೀರಿ ಎಂದು ಕೇಳಿದಾಗ ಸ್ವಾಮಿ, ಈ ಫೈಲ್‌ನಲ್ಲಿ ಅಕ್‌ನಾಲೆಡ್ಜ್ ಮಾಡಿದ್ದಾರೆ, ಯಾರೋ ಪಿ ಎಸ್ ರವರು ತೆಗೆದುಕೊಂಡಿದ್ದಾರೆ ಎಂದು ಹೇಳಿದರು. ಆ ಫೈಲು ಹುಡುಕಾಡಲು ಸುಮಾರು 15 ದಿನ ನನಗೆ ಹಿಡಿಯಿತು. ನಂತರ ಆ ಸಿಗ್ನೇಚರ್ ಯಾರದ್ದು ಎಂದು ಹೋಗಿ ಕೇಳಿಕೊಂಡು ಕಷ್ಟಪಟ್ಟು ನೋಡಿದ ಮೇಲೆ ಒಂದು ಇಲಾಖೆಯಲ್ಲಿ ಆ ಫೈಲ್ ಸಿಕ್ಕಿತು. ಆದ್ದರಿಂದ ಈ ಕಷ್ಟ ತಪ್ಪಿಸಲು ಯಾವ ಡಿಪಾರ್ಟ್‌ಮೆಂಟ್‌ಗೆ ನೀವು ಫೈಲ್ ಕಳುಹಿಸುತ್ತೀರಿ. ಆ

ಡಿಪಾರ್ಟ್‌ಮೆಂಟ್‌ನ ಪಿ.ಎಸ್. ಹೆಸರು ಅದು ಎಂತಹ ಡಿಪಾರ್ಟ್‌ಮೆಂಟ್ ಎನ್ನುವ ಮೊಹರನ್ನು ಹಾಕಿಸಿ ಆ ಫೈಲು ತಾವು ರಿಸೀವ್ ಮಾಡಿಕೊಳ್ಳಿ. ಏಕೆಂದರೆ ನಾನು ಶಾಸಕನಾಗಿ ಇಷ್ಟು ಕಷ್ಟಪಟ್ಟರೆ ಜನಸಾಮಾನ್ಯರ ಗತಿ ಏನಾಗಿರಬಹುದು? ಆದ್ದರಿಂದ ತಾವುಗಳು ಒಂದು ಸುತ್ತೋಲೆಯನ್ನು ಕಳುಹಿಸಿ ಯಾವುದೇ ಫೈಲ್ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಹೋಗುತ್ತದೆ ಎಂದರೆ ಯಾರು ರಿಸೀವ್ ಮಾಡಿಕೊಂಡಿದ್ದಾರೆ ಅವರ ಹೆಸರು, ಸೆಕ್ಷನ್ ಸೀಲು ಹಾಕಿ ಕಳುಹಿಸಬೇಕು. ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಸರಿಪಡಿಸಬೇಕೆಂದು ಹೇಳುತ್ತೇನೆ. ಇನ್ನು ಅಸಿಸ್ಟೆಂಟ್ ಕಮೀಷನರ್, ಕಮೀಷನರ್ ಪೋಸ್ಟ್‌ಗಳನ್ನು ತೆಗೆದು ಹಾಕಬೇಕೆಂದು ತಾವು ತೀರ್ಮಾನ ಮಾಡಿದ್ದೀರಿ ಎಂದು ತಿಳಿದು ಬಂದಿದೆ. 200 ವರ್ಷಗಳಿಂದ ಇರತಕ್ಕಂಥ ಈ ಹುದ್ದೆಯನ್ನು ತೆಗೆದುಹಾಕುವುದು ಸರಿಯಾದ ನಿಲುವು ಆಗಲಾರದು. ಇದರಿಂದ ಬಹಳ ತೊಂದರೆಯಾಗಬಹುದು. ಏಕೆಂದರೆ ಕಂದಾಯ ಇಲಾಖೆಯನ್ನು ಮಾತ್ರ ಅವರು ಕಂಟ್ರೋಲ್ ಮಾಡುತ್ತಾ ಇಲ್ಲ, ಬಹಳಷ್ಟು ಇಲಾಖೆಗಳನ್ನು ಅವರು ಕಂಟ್ರೋಲ್ ಮಾಡುತ್ತಿದ್ದಾರೆ. ನೇರವಾಗಿ ಡಿ.ಸಿ.ಯವರಿಗೇ ಎಲ್ಲವನ್ನೂ ಕಂಟ್ರೋಲ್ ಮಾಡಬೇಕೆಂದರೆ ಆಗುವುದಿಲ್ಲ. ಆದ್ದರಿಂದ ಅಸಿಸ್ಟೆಂಟ್ ಕಮೀಷನರ್ ಪೋಸ್ಟನ್ನು ತೆಗೆಯಬಾರದು. ದುಂದು ವೆಚ್ಚ ಎಲ್ಲಿ ಆಗುತ್ತಿದೆ ? ಅವರನ್ನು ಅಲ್ಲಿಂದ ತೆಗೆದು ಎಲ್ಲಿ ಇಟ್ಟರೂ ಸಂಬಳ ಕೊಡಬೇಕಲ್ಲ ? ಹೀಗೆ ರದ್ದು ಮಾಡುವಂಥ ವಿಚಾರವನ್ನು ಸರಕಾರ ಕೈಬಿಡಬೇಕೆಂದು ಹೇಳುತ್ತೇನೆ.

ಇನ್ನು ಶ್ರೀಮತಿ ನಾಗರತ್ನಮ್ಮ ನವರಿಗೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಅವರ ಡಿಪಾರ್ಟ್‌ಮೆಂಟ್‌ನಲ್ಲಿ ಮಿಸ್ಟರ್ ಪಾಟೀಲ್ ಎಂದು ಒಬ್ಬರು ಇದ್ದಾರೆ. ಅಲ್ಲಿಗೆ ನಾನು ಹೋದಾಗ ಗುಲಬರ್ಗಾದ ಅಣೆವಾರಿ ಪದ್ಧತಿಯ ಬಗ್ಗೆ ಅವರಲ್ಲಿ ಕೇಳಬೇಕಾಗಿತ್ತು. ಈ ಬಗ್ಗೆ ಅಧಿಕಾರಿಗಳು ಏನು ಮಾಡಿದ್ದಾರೆಂದರೆ, ತಮ್ಮ ಇಲಾಖೆಯ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆಸಿಕೊಂಡು ಫಾಲ್ಸ್ ರೆಕಾರ್ಡ್‌ನ್ನು ತಯಾರು ಮಾಡಿಕೊಂಡು ಸಾಮಾನ್ಯ ಬೆಳೆಯನ್ನು ಒಳ್ಳೆಯ ಬೆಳೆ ಎಂದು ರಿಕಾರ್ಡ್ ಮಾಡಿಕೊಂಡಿದ್ದಾರೆ. ಆದರೆ ಗುಲಬರ್ಗಾದ ಡಿ.ಸಿ. ಯವರು ಅಲ್ಲಿಯ ಅಣೆವಾರಿ ಫೈಲ್ಯೂರ್ ಆಗಿದೆ, ಕ್ರಾಪ್ ಫೈಲ್ಯೂರ್ ಆಗಿದೆ ಎಂದು ಸರ್ಟಿಫಿಕೇಟ್ ಕೊಡುತ್ತಾರೆ. ಬಹುಶಃ ಅದು1989ರ ಅಣೆವಾರಿ ಇದ್ದಿರಬೇಕು. ಹಾಗಾದರೆ ಜಿಲ್ಲಾಧಿಕಾರಿಗಳು ಫಸಲು ಫೈಲ್ಯೂರ್ ಎಂದು ಡಿಕ್ಲೇರ್ ಮಾಡಿದರೆ ನಿಮ್ಮ ಸ್ಟಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್‌ನವರು ಕ್ರಾಫ್ ಒಳ್ಳೆಯದಾಗಿದೆಯೆಂದು ಡಿಕ್ಲೇರ್ ಮಾಡುತ್ತಾರೆ. ಹೀಗೆ ಮಾಡುವುದು ಸರಿಯಲ್ಲ. ಆದ್ದರಿಂದ ಮಾನ್ಯ ಸಚಿವೆಯವರು ಇದನ್ನು ಪರಿಶೀಲಿಸಬೇಕೆಂದು ಹೇಳುತ್ತೇನೆ. ಈ ಸಂಬಂಧವಾಗಿ ನಾನು ರಿಕಾರ್ಡ್ ಕೇಳಿದರೆ ಅವರು ಕೊಡಲಿಲ್ಲ. ಕೊಡಲು ಬರುವುದಿಲ್ಲವೆಂದು ನನಗೆ ಪತ್ರವನ್ನು ಕೂಡ ಬರೆದಿದ್ದಾರೆ. ಶಾಸಕರಿಗೆ ರಿಕಾರ್ಡ್ಸ್‌ನ್ನು ಕೊಡಲು ಆಗುವುದಿಲ್ಲವೇ ? ಬೇರೆಯವರಿಗೆ ಸಿಗುವ ದಾಖಲೆಗಳು ನಮಗೆ ಏಕೆ ಸಿಗುವುದಿಲ್ಲ? ಯಾವ ಸರ್ವೆ ನಂಬರ್‌ನಲ್ಲಿ ತಾವು ಯಾವ ದಿವಸ ಹೋಗಿದ್ದೀರಿ ? ನಿಮ್ಮ ಜೊತೆಯಲ್ಲಿ ಯಾರ್‍ಯಾರು ಇದ್ದರು ಎಂಬುದೆಲ್ಲಾ ನಿಮ್ಮ ಫೈಲ್‌ನಲ್ಲಿ ಇದೆ. ಈ ರಿಕಾರ್ಡ್ಸ್ ನಮಗೆ ಬೇಕು, ಆ ಸಂಬಂಧವಾಗಿ ತಾವು ತನಿಖೆ ಮಾಡಿಸಬೇಕು. ಅಲ್ಲಿ ಕ್ರಾಫ್ ಫೈಲ್ಯೂರ್ ಆಗಿದೆ ಅದರೂ ನೀವು ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಅಲ್ಲಿ ರೈತರಿಗೆ ಅನ್ಯಾಯವಾಗಿದೆ, ಅವರಿಗೆ ಇನ್‌ಷೂರೆನ್ಸ್ ಕೂಡ ಕ್ಲೈಮ್ ಮಾಡಲು ಆಗುತ್ತಾ ಇಲ್ಲ. ಆದ್ದರಿಂದ ಇದನ್ನು ತನಿಖೆ ಮಾಡಿಸಬೇಕು. ನಮ್ಮ ಹೈದರಾಬಾದ್ ಕರ್ನಾಟಕ ಬಹಳ ಹಿಂದುಳಿದ ಭಾಗ. ಮಾನ್ಯ ಸಚಿವೆಯವರು ಕೂಡ ಗುಲಬರ್ಗಾಕ್ಕೆ ಬಂದಿದ್ದಾರೆ. ಅಲ್ಲಿಗೆ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಿದ್ದರೂ ಕೂಡ ಅದಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿಲ್ಲ, ಬೇಗ ನೇಮಕ ಮಾಡಬೇಕು.

ಎರಡೂವರೆ ವರ್ಷವಾದರೂ ಕೂಡ ಅದಕ್ಕೆ ಅಧ್ಯಕ್ಷರು ಇಲ್ಲ. ಅಲ್ಲಿ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ, ಎಷ್ಟು ದುಡ್ಡು ತಿಂದು ಹಾಕುತ್ತಿದ್ದಾರೆ ಎಂಬುದು ಒಂದೂ ನಮಗೆ ಗೊತ್ತಾಗುವುದಿಲ್ಲ. ಆದ್ದರಿಂದ ನಮ್ಮ ಮುಖ್ಯಮಂತ್ರಿಯವರು ನಮ್ಮ ಮಂಡಳಿಗೆ ಅಧ್ಯಕ್ಷರನ್ನು ಬೇಗ ನೇಮಕ ಮಾಡಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್: ಈಗ ಸಭೆಯು ತನ್ನ ಕಲಾಪಗಳನ್ನು ಮುಗಿಸಿ ನಾಳೆ ಮತ್ತೆ ಬೆಳಿಗ್ಗೆ 10 ಗಂಟೆಗೆ ಸೇರುವುದು.

(ಸದನವು 6 ಗಂಟೆ 37 ನಿಮಿಷಕ್ಕೆ ಮುಕ್ತಾಯವಾಗಿ ಪುನಃ 27ನೇ ಮಾರ್ಚ್ ಮಾಹೆ 1992ರ ಶುಕ್ರವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).